ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 09 ಫೆಬ್ರವರಿ 27, 2005 ಬೆಲೆ ರೂ. 3.00

ಎಸ್‌ಎಫ್‌ಐ ಸಮ್ಮೇಳನ



ಶಿಕ್ಷಣದ ಹಕ್ಕಿಗಾಗಿ ಸಂಘರ್ಷದ ಸಂಕಲ್ಪ



ನಕ್ಸಲಿಯರ ಸಮಸ್ಯೆ ಮತ್ತು ಪರಿಹಾರ

ಒಂದು ಬಹಿರಂಗ ಪತ್ರ



ನಲುಗಿದ ನಾಗಮಂಗಲ ಗಲಭೆಯ ಹಿಂದಿನ ಸತ್ಯ?



ಬೀದಿಗೆ ಬಂದ ಬಿಜೆಪಿ ಜಗಳ

- WSF - ಜಗದಗಲ ಜಿಗಿಯಲು ಸಜ್ಜು
- ಕೊಲ್ಲುವುದೇ ಕರ್ತವ್ಯವೆಂದ ಎನ್‌ಕೌಂಟರ್

ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ

ಜನರ ಸಂಕಷ್ಟಕ್ಕೆ ಕಾರಣವೇನು ?

ಅಭಿವೃದ್ಧಿ ಸಾಧನೆ ಎಂದರೆ ವಿಶ್ವಬ್ಯಾಂಕಿನಿಂದ ಸಾಲ ಎತ್ತುವುದು ಪ್ರಮುಖ ವಲಯಗಳನ್ನು ಖಾಸಗೀಕರಿಸುವುದು ಎಂದೇ ಬಗೆದಿರುವ ಸರ್ಕಾರ ಜನರನ್ನು ಸಾಲದ ಬಲೆಗೆ ತಳ್ಳಿದೆ. ಇದರ ಅಘಾತಕಾರಿ ಪರಿಣಾಮಗಳತ್ತ ಗಮನ ಸೆಳೆವ ಮಹತ್ವದ ಅಂಶಗಳಲ್ಲಿ ಸಿಪಿಐ(ಎಂ) ರಾಜ್ಯ ಸಮ್ಮೇಳನದ ವರದಿಯಿಂದ

17ನೇ ಸಮ್ಮೇಳನದ ಸಂದರ್ಭದಲ್ಲಿ ಚರ್ಚಿಸಿದಂತೆ ಕೇಂದ್ರ ಸರ್ಕಾರ ತನ್ನ ತೆರಿಗೆ ಸಂಗ್ರಹವನ್ನು ಕಡಿತಗೊಳಿಸುತ್ತಾ ಬಂಡವಾಳಶಾಹಿಗಳಿಗೆ ರಿಯಾಯಿತಿಗಳನ್ನು ನೀಡುತ್ತಾ ಬರುತ್ತಿರುವುದರ ಫಲವಾಗಿ ರಾಜ್ಯ ಸರ್ಕಾರಗಳಿಗೆ ನೀಡುವ ಅನುದಾನದಲ್ಲಿ ಕಡಿತವಾಗಿದೆ. ರಾಜ್ಯಗಳಿಗೆ ಹೆಚ್ಚು ಅಧಿಕಾರ, ಸ್ವಾಯತ್ತತೆಯನ್ನು (ಮುಖ್ಯವಾಗಿ ಆರ್ಥಿಕ ವಿಷಯಗಳಿಗೆ ಸಂಬಂಧಿಸಿ) ನೀಡದೆ ರಾಜ್ಯಗಳ ಆರ್ಥಿಕ ಬಿಕ್ಕಟ್ಟು ತೀವ್ರಗೊಳ್ಳುತ್ತಾ ಹೋಗುತ್ತದೆ. ಈಗಿನ ಕೇಂದ್ರ ಸರ್ಕಾರದ ಕನಿಷ್ಟ ಸಾಮಾನ್ಯ ಕಾರ್ಯಕ್ರಮದಲ್ಲಿ ಈ ಅಂಶ ಇದ್ದರೂ ಅದನ್ನು ಜಾರಿ ಮಾಡಲು ಕೇಂದ್ರ ಸರ್ಕಾರಕ್ಕೆ ಮನಸ್ಸಿಲ್ಲ. ಇಂತಹ ಹಿನ್ನೆಲೆಯಲ್ಲಿ ರಾಜ್ಯಗಳಿಗೆ ಹೆಚ್ಚು ಅಧಿಕಾರಕ್ಕಾಗಿ ಒತ್ತಾಯಿಸದೆ ಇತರ ಬಂಡವಾಳಶಾಹಿ ಪಕ್ಷಗಳ ಆಳ್ವಿಕೆಯ ರಾಜ್ಯ ಸರ್ಕಾರಗಳಂತೆಯೇ ಕರ್ನಾಟಕ ರಾಜ್ಯ ಸರ್ಕಾರವೂ ವಿಶ್ವಬ್ಯಾಂಕ್, ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಬೇರೆ ಬೇರೆ ದೇಶಗಳ ವಿವಿಧ ಸರ್ಕಾರಗಳು ನೀಡುವ ಸಾಲ ಹಾಗೂ ಅನುದಾನಗಳಿಗೆ ಮೊರೆ ಹೋಗಿದೆ. ದೇಶದ ಹಣಕಾಸು ಮಾರುಕಟ್ಟೆಯಿಂದಲೂ ಬಾಂಡ್‌ಗಳ ಮೂಲಕ ಸಾಲ ಪಡೆದಿದೆ.

ಕೃಷ್ಣರವರ ಸರ್ಕಾರದ ಕಾಲದಲ್ಲಿಯಂತೂ ಪ್ರತಿ ಇಲಾಖೆಯೂ ಸಾಲ ಪಡೆದೇ ದಿನನಿತ್ಯದ ಕೆಲಸ ಹಾಗೂ ಅಭಿವೃದ್ಧಿ ಎನ್ನುವಂತಾಯಿತು.

ವರ್ಷ	ಸಾಲದ ಹೊರೆ ಕೋಟಿ ರೂ.ಗಳಲ್ಲಿ	ಸಾಲ ತೀರುವಳಿ	ಬಡ್ಡಿ	ಒಟ್ಟು
2002-03	45,752	4,606	3,336	7,942
2003-04	51,119	4,673	3,631	8,304
2004-05	55,926	5,621	4,358	9,979

ಇದರಿಂದ ಅಗಾಧವಾದ ಸಾಲಗಳ ಹೊರೆ, ಅದನ್ನು ತೀರಿಸಲು ತೆರಬೇಕಾದ ಕಂತುಗಳು ಹಾಗೂ ಬಡ್ಡಿಯ ಹೊರೆ ಮಿತಿಮೀರಿ ಏರಿತು. ಅಭಿವೃದ್ಧಿ ವೆಚ್ಚಕ್ಕಾಗಿ ಸರ್ಕಾರದ ಹಣ ಕೊರತೆಯಾಗುವಂತಾಯಿತು.


ಕೊನೆಗೆ ದಿನನಿತ್ಯದ ಸರ್ಕಾರದ ವೆಚ್ಚಕ್ಕಾಗಿ ಕೂಡ ವಿಶ್ವಬ್ಯಾಂಕ್‌ನಿಂದ ಸಾಲ ಪಡೆಯುವ ಅನಿವಾರ್ಯತೆ ಗೊಳಗಾಯಿತು. ಇದು ವಿವಿಧ ಯೋಜನೆಗಳಿಗಾಗಿಯಲ್ಲದೆ ಸರ್ಕಾರವನ್ನು ನಡೆಸುವುದಕ್ಕೇ ಸಾಲವಾದುದರಿಂದ ವಿಶ್ವಬ್ಯಾಂಕ್ ಅತ್ಯಂತ ಜನವಿರೋಧಿ ಶರತ್ತುಗಳ ಆಧಾರದ ಮೇಲೆ 8,800 ಕೋಟಿ ರೂ.ಗಳ ಸಾಲವನ್ನು ಮಂಜೂರು ಮಾಡಿತು. ಶರತ್ತುಗಳನ್ನು ಪೂರೈಸಿದ ನಂತರವೇ ಆ ಸಾಲದ ಕಂತುಗಳನ್ನು ನೀಡುವ ಕಠಿಣ ಸಾಲ-ಸಂರಚನಾ ಹೊಂದಾಣಿಕೆ ಸಾಲ ಅದು.

2003-04 ರಲ್ಲಿ, 2004-05 ರಲ್ಲಿ ಆ ಸಾಲದ ಶರತ್ತುಗಳನ್ನು, ಮುಖ್ಯವಾಗಿ ವಿದ್ಯುತ್ ಕಂಪನಿಗಳ ಖಾಸಗೀಕರಣವನ್ನು ಮಾಡಲು ಸಾಧ್ಯವಾಗದುದರಿಂದ ಸಾಲದ ಕಂತನ್ನು ವಿಶ್ವಬ್ಯಾಂಕ್ ನೀಡಲಿಲ್ಲ. ಇದರಿಂದಾಗಿ ಹಲವಾರು ಯೋಜನೆಗಳಿಗೆ ಹಣ ಕಡಿತ ಮಾಡಬೇಕಾಯಿತು.

ಮತ್ತು ಬರಗಾಲದ ಬೇಗೆಯಲ್ಲಿಯೂ ಪರಿಣಾಮಕಾರಿಯಾಗಿ ಪರಿಹಾರ ಕಾರ್ಯಕ್ರಮ, ಕಾಮಗಾರಿಗಳನ್ನು ನಡೆಸಲಾಗಲಿಲ್ಲ. 2004 ರ ಚುನಾವಣೆಯ ನಂತರ ಅಧಿಕಾರಕ್ಕೆ ಬಂದಿರುವ ಸಮ್ಮಿಶ್ರ ಸರ್ಕಾರ ಸಾಲವನ್ನು ಮಿತಿಮೀರಿ ತೆಗೆದುಕೊಳ್ಳುವುದಿಲ್ಲವೆಂದು ತೀರ್ಮಾನಿಸಿದೆ. ಆದರೂ ಅನೇಕ ಮಂತ್ರಿಗಳು ಸಾಲದ ಪ್ರಸ್ತಾವನೆಗಳನ್ನು ವಿಶ್ವಬ್ಯಾಂಕ್ ಮೊದಲಾದ ಹಣಕಾಸು ಸಂಸ್ಥೆಗಳ ಮುಂದೆ ಇಡುವ ಪ್ರಸ್ತಾಪಗಳನ್ನು ಮಾಡುತ್ತಲೇ ಇದ್ದಾರೆ.

ರಾಜ್ಯ ಸರ್ಕಾರದ ಆರ್ಥಿಕ ನೀತಿಗಳು :

ರಾಜ್ಯಕ್ಕೆ ಬಂಡವಾಳವನ್ನು ಆಕರ್ಷಿಸುವ ತರಾತುರಿ, ಮಾಹಿತಿ ತಂತ್ರಜ್ಞಾನಕ್ಕೆ ಬೆಂಗಳೂರನ್ನು ಸನ್ನದ್ಧ ಮಾಡುವ ಕಾತುರ ಹಾಗೂ ವಿಶ್ವಬ್ಯಾಂಕ್ ಮೊದಲಾದ ಸಾಲಗಳ ಶರತ್ತುಗಳನ್ನು ಪೂರೈಸಲು ಕೃಷ್ಣ ಸರ್ಕಾರ ಕಟಿಬದ್ಧವಾಯಿತು. ವಿಶ್ವಬ್ಯಾಂಕ್ ಒತ್ತಾಯದ ಮೇರೆಗೆ ತಂದ ಆರ್ಥಿಕ ಹೊಣೆಗಾರಿಕೆ ಕಾನೂನಿನ ಮೂಲಕ ರಾಜ್ಯ ಸರ್ಕಾರದ ಬಜೆಟ್ ವಿಶ್ವ ಬ್ಯಾಂಕ್ ನಿರ್ದೇಶನಗಳಿಗೆ ಅಧೀನವಾಯಿತು. ಇವುಗಳ ಫಲವಾಗಿ ಕರ್ನಾಟಕ ವಿದ್ಯುತ್ ಮಂಡಳಿಯನ್ನು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಹಾಗೂ ನಾಲ್ಕು ಪ್ರಾದೇಶಿಕ ವಿದ್ಯುತ್ ಸರಬರಾಜು ನಿಗಮಗಳನ್ನಾಗಿ ಒಡೆದು ಹಾಕಲಾಗಿದೆ. ವಿಶ್ವಬ್ಯಾಂಕ್‌ನ ಆದೇಶದಂತೆ ಅದರ ಸಾಲವನ್ನು ಪಡೆಯಲು ವಿಶೇಷ ಉದ್ದೇಶ ಸಾಧನಗಳೆಂಬ (ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆಗಳು) ಸಂಸ್ಥೆಗಳನ್ನು - ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ, ಕರ್ನಾಟಕ ಜಲಸಮೃದ್ಧಿ ನಿಗಮ, ಇತ್ಯಾದಿಗಳನ್ನು ಸ್ಥಾಪಿಸಲಾಗಿದೆ.



ಬೆಂಗಳೂರಿನಲ್ಲಿ ಹಲವಾರು ಫ್ಲೈ ಓವರ್‌ಗಳು, ರಿಂಗ್ ರೋಡ್‌ಗಳು ನಿರ್ಮಾಣಗೊಂಡಿವೆ. ಇನ್ನೂ ಹಲವಾರು ನಿರ್ಮಾಣದ ಹಂತದಲ್ಲಿವೆ. ಬೆಂಗಳೂರು - ಮೈಸೂರು ಷಟ್ಪಥ ಹೆದ್ದಾರಿ, ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಬೆಂಗಳೂರು ಮೇಲು ಸೇತುವೆ ಅಥವಾ ಲಘು ರೈಲು ಇತ್ಯಾದಿಗಳು ಮಂಜೂರಾತಿಯಲ್ಲಿವೆ.

ಈ ನೀತಿಗಳನ್ನು ಅನುಸರಿಸಿ ಚುನಾವಣೆಯಲ್ಲಿ ಕೃಷ್ಣ ಸರ್ಕಾರ ಸೋತು ಹೋದಮೇಲೆ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರವೂ ಕೂಡಾ ಒಂದೆರಡು ಭಿನ್ನತೆಗಳ ಹೊರತಾಗಿ ಇದೇ ನೀತಿಗಳನ್ನು ಅನುಸರಿಸುವ ನಿರ್ಧಾರವನ್ನು ತನ್ನ ಬಜೆಟ್ ಮೂಲಕ ಘೋಷಿಸಿದೆ. ವಿಶ್ವಬ್ಯಾಂಕ್ ಸಾಲದ ಶರತ್ತುಗಳ ಭಾಗವಾಗಿ ತಂದ ಹಣಕಾಸು ಹೊಣೆಗಾರಿಕೆ ಕಾನೂನು ಮತ್ತು ಮಧ್ಯಮಾವಧಿ ಹಣಕಾಸು ಯೋಜನೆಯ ಭಾಗವಾಗಿ ಮುಂದಿನ 4 ವರ್ಷಗಳ ಕಾಲ ಶಿಕ್ಷಣ, ಆರೋಗ್ಯ, ಕುಡಿಯಲು ನೀರು ಮೊದಲಾದ ವಿವಿಧ **ಸೇವೆಗಳಿಗೆ ಸರ್ಕಾರ ವಿಧಿಸುವ ದರಗಳನ್ನು ಸೋತುಹೋದ ಕೃಷ್ಣ ಸರ್ಕಾರವೇ ನಿರ್ಧರಿಸಿ ಬಿಟ್ಟಿದೆ.** ಹೊಸ ಸರ್ಕಾರವೂ ಕೂಡಾ ಅದೇ ನೀತಿಯನ್ನು ಅನುಸರಿಸುತ್ತೇವೆಂದು ತನ್ನ ಬಜೆಟ್ ಮೂಲಕ ಘೋಷಿಸಿದೆ ಇದು ಜನಾದೇಶಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ವಿರೋಧವಾದ ಕ್ರಿಯೆ. ವಿದ್ಯುತ್ ಖಾಸಗೀಕರಣ, ದರ ಏರಿಕೆ, ಮೀಟರೀಕರಣ ಮತ್ತು ವಿವಿಧ ದರಗಳ ಏರಿಕೆಗೆ ಈ ಸರ್ಕಾರ ಮುಂದಾಗಿದೆ.

ನೌಕರರ ಸಂಖ್ಯೆಯನ್ನು ಕಡಿತಗೊಳಿಸಲು ರೇಷ್ಮೆ ಮೊದಲಾದ ಕೆಲವು ಇಲಾಖೆಗಳನ್ನು ಮುಚ್ಚುವುದು, ಅನೇಕ ಇಲಾಖೆಗಳನ್ನು ಒಂದರೊಳಗೊಂದು ವಿಲೀನಗೊಳಿಸುವುದು, [illegible] ಹುದ್ದೆಗಳ ಜಾಗದಲ್ಲಿ ಈ ಇಲಾಖೆಗಳ ಹೆಚ್ಚುವರಿ ನೌಕರರನ್ನು ತುಂಬುವುದು, ಸ್ವಯಂನಿವೃತ್ತಿ ಮೊದಲಾದ ಕ್ರಮಗಳನ್ನು ರಾಜ್ಯ ಸರ್ಕಾರ ರೂಪಿಸಿದೆ. ಇದರಿಂದಾಗಿ ಜನರಿಗ ರಾಜ್ಯ ಸರ್ಕಾರದ ಸೇವೆಗಳ ಕಡಿತ, ನೌಕರರ ಮೇಲೆ ಕೆಲಸದ ಒತ್ತಡ ಮತ್ತು ನಿರುದ್ಯೋಗದ ಹೆಚ್ಚಳ ಸಂಭವಿಸುತ್ತವೆ. ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ರಾಜ್ಯ ಸರ್ಕಾರ ತನ್ನ ಪ್ರಮುಖ ಜವಾಬುದಾರಿಗಳನ್ನು ಆರೋಗ್ಯ, ಶಿಕ್ಷಣ, ಸಾಮಾಜಿಕ ಕಲ್ಯಾಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಇತ್ಯಾದಿಗಳಿಗೆ ಸಂಬಂಧಿಸಿದ ಸೇವೆ ಹಾಗೂ ಯೋಜನೆಗಳನ್ನು ವಿದ್ಯುತ್ ಬಿಲ್ ವಸೂಲಾತಿಯನ್ನು ಕೂಡ ಪಂಚಾಯತ್ ಸಂಸ್ಥೆಗಳಿಗೆ ವರ್ಗಾಯಿಸಿ ಕೈತೊಳೆದುಕೊಳ್ಳಲು ಪ್ರಯತ್ನಿಸುತ್ತಿದೆ. ಪಂಚಾಯತ್‌ಗಳಿಗೆ ನೀಡಬೇಕಾದ ಸಹಾಯಧನವನ್ನೂ ಮುಟ್ಟುಗೋಲು ಹಾಕಿಕೊಂಡು ವಿದ್ಯುತ್ ಬಾಕಿಗೆ ಜಮಾ ಮಾಡಿದೆ. ಸ್ವಯಂಘೋಷಿತ ತೆರಿಗೆ, ಕುಡಿಯುವ ನೀರು ಇತ್ಯಾದಿಗಳನ್ನು ವಿಪರೀತವಾಗಿ ಏರಿಸಿ, 'ಹೀಗೆ ಏರಿಸಿದ ತೆರಿಗೆಗಳನ್ನು ಜನರಿಂದ ವಸೂಲಿ ಮಾಡಬೇಕು. ಆಗ ಮಾತ್ರ ನಿಮಗೆ ಸಂಬಳ' ಎನ್ನುತ್ತಾ ಪಂಚಾಯತ್ ನೌಕರರಿಗೆ ವರ್ಷಗಟ್ಟಲೆ ಸಂಬಳ ನೀಡದೆ ಅವಮಾನವೀಯವಾಗಿ ವರ್ತಿಸುತ್ತದೆ.

ರಾಜ್ಯ ಸರ್ಕಾರ ಪ್ರತಿವರ್ಷವೂ ಏರಿಸಬೇಕಾದ ದರಗಳನ್ನು ನಿರ್ದಿಷ್ಟವಾಗಿ ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

(1999-2000 ವರ್ಷದಲ್ಲಿನ ಶುಲ್ಕ ಅಥವಾ ದರಗಳನ್ನು ನೂರು ಎಂದು ಭಾವಿಸಿದರೆ ವಿವಿಧ ವರ್ಷಗಳಲ್ಲಿ ಎಷ್ಟು ಏರಿಸಬೇಕು ಎಂದು ವಿಶ್ವಬ್ಯಾಂಕ್ ವಿಧಿಸಿರುವ ಶರತ್ತುಗಳ ಪ್ರಕಾರ ರಾಜ್ಯ ಸರ್ಕಾರ ಇಟ್ಟುಕೊಂಡಿರುವ ವರ್ಗಗಳು)

ಹೀಗೆ ದರಗಳನ್ನು ಏರಿಸುವುದಕ್ಕೆ ಗುರಿಗಳನ್ನು ನಿಗದಿಪಡಿಸುವುದರೊಂದಿಗೆ ವಿಶ್ವ ಬ್ಯಾಂಕ್ ಸಲಹೆಯ ಮೇರೆಗೆ ಅದರ ವಸೂಲಾತಿಗಾಗಿ ಮೂರು ರೀತಿಯ ತಂತ್ರವನ್ನು ಅನುಸರಿಸುತ್ತಿದೆ. ಒಂದು, ಸ್ವಯಂ ಸೇವಾ ಸಂಸ್ಥೆಗಳನ್ನು ಬಳಸಿಕೊಂಡು, ಏರಿಸಿದ ತೆರಿಗೆಗಳನ್ನು, ದರಗಳನ್ನು ಕಟ್ಟುವುದು ಅವಶ್ಯಕ. ನಿಮಗೆ ಬೇಕಾದ ಸೇವೆಯನ್ನು ಪಡೆಯಲು ಅದರ ಬೆಲೆ ತೆರಲೇಬೇಕು' ಎನ್ನುವ ಪ್ರಚಾರಾಂದೋಲನ - ಸಾಂಸ್ಕೃತಿಕ ಕಾರ್ಯಕ್ರಮ ಚರ್ಚೆ ಇವುಗಳ ಮೂಲಕ ಎರಡು, ರಾಜ್ಯ ಸರ್ಕಾರದ ಅಂಗಸಂಸ್ಥೆಗಳು ಪೌರಾಡಳಿತ ಸಂಸ್ಥೆಗಳನ್ನು ನಿರ್ಲಕ್ಷಿಸಿ ವಿದ್ಯುತ್ ಬಳಕೆದಾರರ, ನೀರು ಬಳಕೆದಾರರ, ನಾಗರಿಕರ ಸಂಘಗಳನ್ನು ರಚಿಸಿ ಅವುಗಳಿಗೆ ವಸೂಲಿ ಕೆಲಸವನ್ನು ಅಥವಾ ಅದರ ಉಸ್ತುವಾರಿಕೆಯನ್ನು ವಹಿಸಿ ಜನರ ನಡುವೆಯೇ ಜಗಳ ತರುವುದು. ದರ, ತೆರಿಗೆ ಏರಿಕೆಯ ವಿರುದ್ಧ ಚಳುವಳಿ ಎದ್ದು ಬರದಂತೆ ಮೂಲದಲ್ಲಿಯೇ ಒಡೆಯುವುದು. ಮೂರು, ವಿದ್ಯುತ್‌ನಂತಹ ಪ್ರಮುಖ ವಿಷಯಗಳಲ್ಲಿ ಪುಲಿಕೇಶಿ ಪಡೆ, ಹೊಯ್ಸಳ ಮೊದಲಾದ ದಮನಕಾರಿ ಅಸ್ತ್ರಗಳ ರಚನೆ, ಪೊಲೀಸ್ ಪಡೆಯನ್ನು ಆಧುನಿಕರಣಗೊಳಿಸುವುದು, ತಂತ್ರಜ್ಞಾನದಿಂದ ಸಜ್ಜುಗೊಳಿಸುವುದು, ಇಸ್ರೇಲ್‌ನಿಂದ ತರಬೇತಿ ಇದಕ್ಕಾಗಿ ಹೇರಳ ಸರ್ಕಾರಿ ಹಣ ವಿನಿಯೋಗ.

ಸಾಮಾಜಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆ

ಜಾಗತೀಕರಣ, ಖಾಸಗೀಕರಣದ ಪ್ರಕ್ರಿಯೆಗಳು ನಮ್ಮ ಸಮಾಜದಲ್ಲಿ ಇರುವ ಅಸಮಾನತೆಗಳನ್ನು, ವೈರುಧ್ಯಗಳನ್ನು ಮತ್ತಷ್ಟು ತೀವ್ರಗೊಳಿಸಿವೆ. ಶಿಕ್ಷಣ ಶುಲ್ಕಗಳ ಏರಿಕೆ, ತಾಂತ್ರಿಕ

ಪಟ್ಟಿ-3

	1999 - 2000	2000 - 01	2001 - 02	2002 - 03	2003 - 04	2004 - 05	2005 - 06	2006 - 07
							ಅಂದಾಜು	
ತಾಂತ್ರಿಕ ಶಿಕ್ಷಣ	100	191	212	297	359	374	394	412
ನೀರಾವರಿ	100	141	153	229	324	294	312	471
ಸಣ್ಣ ನೀರಾವರಿ	100	126	111	101	245	734	1009	612

ಮ್ಯಾನೇಜ್‌ಮೆಂಟ್ ಹಾಗೂ ವೈದ್ಯಕೀಯ ಶಿಕ್ಷಣಗಳ ಶುಲ್ಕದ ದುಬಾರಿತನ, ಡೊನೇಷನ್ ಹಾವಳಿ, ಇಂಗ್ಲೀಷ್ ಮಾಧ್ಯಮ - ಕನ್ನಡ ಮಾಧ್ಯಮಗಳ ಅಂತರ, ಕಂಪ್ಯೂಟರ್ ಶಿಕ್ಷಣ ಪಡೆದವರ-ಪಡೆಯದವರ ನಡುವಣ ಅಂತರ, ವಿಜ್ಞಾನ ಶಿಕ್ಷಣ-ಸಮಾಜ ವಿಜ್ಞಾನದ ಶಿಕ್ಷಣದ ನಡುವಿನ ಅಂತರ, ಸರ್ಕಾರ ಮತ್ತು ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗಗಳ ನಾಶ, ಮೀಸಲಾತಿಯ ಮೂಲಕ ಶಿಕ್ಷಣ, ಉದ್ಯೋಗದ ಅವಕಾಶಗಳು ಕಿರಿದಾಗುತ್ತಾ ನಡೆದಿರುವುದು, ಅಗತ್ಯ ವಸ್ತುಗಳ ಬೆಲೆ ಏರಿಕೆ, ಗ್ರಾಮೀಣಾಭಿವೃದ್ಧಿ ಹಾಗೂ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳಿಗೆ ಮಾತ್ರ ಬರ ಪರಿಹಾರ ಕಾಮಗಾರಿಗಳಿಗೆ ಹಣ ಕಡಿತ, ಪಡಿತರ ವ್ಯವಸ್ಥೆಯ ನಾಶ, ಸಾರ್ವಜನಿಕ ವಲಯದ ನಾಶ ಇತ್ಯಾದಿ ಕ್ರಮಗಳು, ಶೋಷಕ- ಶೋಷಿತ, ಶ್ರೀಮಂತ-ಬಡವ, ಮೇಲ್ಜಾತಿ-ಕೆಳಜಾತಿ, ದಲಿತ-ದಲಿತೇತರ, ಪುರುಷ-ಮಹಿಳೆ, ಹಳ್ಳಿ-ಪಟ್ಟಣ ಹಾಗೂ ವಿವಿಧ ಪ್ರದೇಶಗಳ ನಡುವಣ ಅಸಮಾನತೆಗಳನ್ನು ತೀವ್ರಗೊಳಿಸಿದೆ. ಇವು ವಿವಿಧ ರೀತಿಯಲ್ಲಿ ಮೇಳೈಸಿ ಸಾಮಾಜಿಕ ಪರಿಸ್ಥಿತಿಯನ್ನು ಸಂಕೀರ್ಣಗೊಳಿಸಿವೆ. ಇಂತಹ ಸಂದರ್ಭವನ್ನು ಬಳಸಿಕೊಳ್ಳಲು, ತಪ್ಪು ದಾರಿಗೆಳೆಯಲು ವಿವಿಧ ರೀತಿಯ ಪಟ್ಟಭದ್ರ ಹಿತಾಸಕ್ತಿಗಳು ಅವಕಾಶವಾದಿಗಳು ಹೊಂಚುಹಾಕುತ್ತಿವೆ. ಆಳುವ ವರ್ಗಗಳ ಇಂತಹ ಪಟ್ಟಭದ್ರ ಹಿತಾಸಕ್ತಿಗಳನ್ನು, ಅವಕಾಶವಾದಗಳನ್ನು ಬಳಸಿಕೊಂಡು ತೀವ್ರಗೊಂಡ ಶೋಷಣೆಯ ವಿರುದ್ಧ ಹೋರಾಡದಂತೆ ಶೋಷಿತರನ್ನು ವಿಭಜಿಸುವ ಕುತಂತ್ರ ನಡೆಸುತ್ತಿವೆ.

ಮುಂದುವರಿಯುವುದು

ಬೀದಿಗೆ ಬಿದ್ದ ಬಿಜೆಪಿ ಜಗಳ

ಕರ್ನಾಟಕದಲ್ಲಿ ಸ್ಫೋಟಕ ಸನ್ನಿವೇಶ ಸೃಷ್ಟಿಸುತ್ತಲೇ ಇರುವ ಬಿಜೆಪಿಯೊಳಗೆ ಸ್ಫೋಟವೊಂದು ಸಂಭವಿಸಿದೆ! ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಂತಕುಮಾರ್ ಹಾಗೂ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪನವರ ನಡುವೆ ಜಟಾಟಿ ಬೀದಿಗೆ ಬಿದ್ದಿದೆ!

ರಾಜ್ಯದ ಬಿಜೆಪಿ ವ್ಯವಹಾರದಲ್ಲಿ ಅನಂತಕುಮಾರ್ ಸದಾ ಕೈ ತೂರಿಸುತ್ತಾರೆ. ರಾಷ್ಟ್ರಮಟ್ಟದ ರಾಜಕಾರಣಕ್ಕೆ ಸೀಮಿತಗೊಳ್ಳದಿದ್ದರೆ ಪಕ್ಷವೇ ಹೋಳಾಗುತ್ತದೆ' ಎಂಬುದು ಯಡಿಯೂರಪ್ಪನವರ ಬಣದ ಎಚ್ಚರಿಕೆ.

ಬಿಜೆಪಿಯಲ್ಲಿ ಆಂತರಿಕವಾಗಿ ಗುಂಪುಗಾರಿಕೆ, ಮೇಲಾಟಕ್ಕೆ ಪೈಪೋಟಿ, ಕೆಲವರನ್ನು ತುಳಿಯಲು ಷಡ್ಯಂತ್ರಗಳು ಹೊಸದೇನಲ್ಲ. ಹಿಂದೆ ಚುನಾವಣಾ ಸಂದರ್ಭದಲ್ಲಿ ಅನಂತಕುಮಾರ್ ರಾಜ್ಯದ ಬಿಜೆಪಿ ಅಧ್ಯಕ್ಷರಾದದ್ದೇ ಮುಖ್ಯಮಂತ್ರಿಯಾಗುವ ಕನಸಿನಿಂದ. ಫಲಿತಾಂಶದ ಬಳಿಕ ಕನಸು-ಭಗ್ನವಾದಾಗ ವಿಧಾನಸಭೆಯಲ್ಲಿ ಕೂಗುವ ಕಾಯಕಕ್ಕೆ ಯಡಿಯೂರಪ್ಪನವರಿಗೆ ವಹಿಸಿ ಮತ್ತೇ ದೆಹಲಿ ದರ್ಬಾರಿಗೆ ಸೇರಿಕೊಂಡದ್ದು ಎಲ್ಲರಿಗೂ ಅರ್ಥವಾದದ್ದೇ. ಆದರೆ ರಾಜ್ಯದಲ್ಲಿ ತಮ್ಮದೇ ಹಿಡಿತ ಪಕ್ಷದೊಳಗೆ ಇರಬೇಕೆನ್ನುವುದಕ್ಕೆ ರಿಯಾಯಿತಿ ಇರಲಿಲ್ಲ. ತಮಗೆ ಬೇಕಾದ ಜಗದೀಶ್ ಶೆಟ್ಟರನ್ನೇ ಅಧ್ಯಕ್ಷರನ್ನಾಗಿಸಿದರು. ಬಂಗಾರಪ್ಪಗೆ ಚುನಾವಣಾ ಪೂರ್ವ ನೀಡಿದ ಭರವಸೆಯಂತೆ ಅಧ್ಯಕ್ಷನಾಗಿ ಮಾಡಲಿಲ್ಲ. ಬಿಜೆಪಿ ಅಧಿಕಾರದ ಒಳ-ಹೊರಗಿನ ರುಚಿ ಸದಾ ದಕ್ಕುತ್ತಿರಬೇಕೆಂಬುದು ಅನಂತ್ ಬಯಕೆ.

ಒಳಗೊಳಗೇ ಕುದಿಯುತ್ತಿದ್ದ ಅತೃಪ್ತಿ - ಕಿತ್ತಾಟ ಹೊರಗೆ ಹರಿಯಲು ಪ್ರದೇಶ ಬಿಜೆಪಿಗೆ ಹೊಸದಾಗಿ ಒಂದಿಷ್ಟು ಪದಾಧಿಕಾರಿಗಳನ್ನು ನೇಮಿಸಿ ಪ್ರಕಟಣೆ ಹೊರಬಿದ್ದಿದೆ. ಅದರಲ್ಲಿ ಕೇವಲ ಅನಂತಕುಮಾರ್ ಬಣದವರಿಗೆ ಮಣೆ, ಯಡಿಯೂರಪ್ಪನ ಮತ್ತಿತರ ಬಣವನ್ನು ಸೌಜನ್ಯಕ್ಕೂ ಮಾತನಾಡಿಲ್ಲ. ಹಿಂದಿದ್ದ ಒಪ್ಪಂದವೂ ಉಲ್ಲಂಘನೆಯಾಗಿದೆಯಂತೆ. ಈ 'ಸಮರ' ಸಾರುವ ಮೊದಲು ಯಡಿಯೂರಪ್ಪನವರ ಮನೆಯಲ್ಲಿ ವಿಧಾನ



ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ ಶಂಕರಮೂರ್ತಿ, ರಾಮಚಂದ್ರಗೌಡ, ಈಶ್ವರಪ್ಪ, ಸುರೇಶ್ ಕುಮಾರ್ ಮುಂತಾದವರು ಭಾಗವಹಿಸಿದ್ದರಂತೆ. ಅವರೆಲ್ಲಾ ಸೇರಿ ಈ ಸ್ಥಿತಿ ಸರಿಪಡಿಸದಿದ್ದರೆ ರಾಜೀನಾಮೆ ಅಂಗೀಕರಿಸಿ ಎಂದು ಅಧ್ಯಕ್ಷ ಅಡ್ವಾಣಿಗೆ ಪತ್ರ ರವಾನಿಸಿದ್ದಾರಂತೆ. ಕೇಂದ್ರ ನಾಯಕರ ಪ್ರತಿಕ್ರಿಯೆಗಾಗಿ ಕಾದಿದ್ದು, ನ್ಯಾಯ ಸಿಗದಿದ್ದರೆ ಬೇರೆ ದಾರಿ ನೋಡಿಕೊಳ್ಳುವರಂತೆ.

ಅತ್ಯಂತ ಶಿಸ್ತುಬದ್ಧ, ತತ್ವಬದ್ಧ ಎಂದೆಲ್ಲಾ ಬೊಗಳೆ ಹೊಡೆಯುತ್ತಿದ್ದ ಬಿಜೆಪಿಯದು ಬಾಯ್ಬಡುಕತನವಷ್ಟೇ. ಈಗ ಬಂಡಾಯ ಹೂಡಿರುವವರು ಸಂಘ ಪರಿವಾರದ ಕಟ್ಟಾಳುಗಳು ಎಂಬುದನ್ನು ಮರೆಯಬೇಕಿಲ್ಲ. ಅತ್ಯಂತ ಬಲಪಂಥೀಯ ಪ್ರತಿಗಾಮಿಯಾಗಿರುವ ಬಿಜೆಪಿಯೂ ಸಹ ಒಂದು ಭೂಮಾಲಿಕ-ಬಂಡವಾಳಶಾಹಿ ಪಕ್ಷ. 'ಶಿಸ್ತು, ತತ್ವ'ಹೇಳಿಕೊಂಡರೂ ಅದರ ವರ್ಗ ಸ್ವಭಾವದಂತೆ ಅಧಿಕಾರದ ದಾಹ ಅಂತರ್ಗತವಾಗಿರುವುದೇ.

ಅತ್ತ ಸಂಸದ ಬಂಗಾರಪ್ಪನವರು ಬಂಡಾಯವೆದ್ದು ಬಿಜೆಪಿಗೆ ಕೈಮುಗಿದು ಹೊರನಡೆದಿದ್ದಾರೆ. ಸಮಾಜವಾದಿ ಪಕ್ಷದ ಸ್ಥಾಪನೆ ಓಡಾಡುತ್ತಿದ್ದಾರೆ. ಇತ್ತ ಇನ್ನೊಂದು ಬಣದ ಬಂಡಾಯವೆದ್ದಿದೆ. ಅದು ಯಡಿಯೂರಪ್ಪ ಮತ್ತಿತರರ ಬಂಡಾಯ ಎಷ್ಟರವರೆಗೆ? ಗಾದಿ ಹಾಸಿ ಕೂರುವವರೆ ಕಾದು ನೋಡನೋಡಣ.

ಈವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಕೋರಮಂಗಲದ ಗಲಾಟೆ - ದಾಂಧಲೆಯಲ್ಲಿ ಚೆಡ್ಡಿಪಡೆ!

ಪಾವಗಡದಲ್ಲಿ ನಕ್ಸಲೀಯರಿಂದ ಪೊಲೀಸರ ಹತ್ಯೆಗೀಡಾದವರ ಬಂಧುಗಳು ಆಕ್ರೋಶಗೊಂಡು ಕೋರಮಂಗಲದಲ್ಲಿ ಭಾರಿ ದಾಂಧಲೆ ನಡೆಸಿದ್ದನ್ನು ಕಳೆದವಾರ ಪ್ರಸ್ತಾಪಿಸಲಾಗಿದೆ. ಗಲಭೆ ವ್ಯಾಪಕತೆ ಗಮನಿಸಿ ಇದು ಕೇವಲ ಪೊಲೀಸ್ ಕುಟುಂಬದವರು ಮಾತ್ರವೇ ಮಾಡಿರದೇ ಇತರರೂ ಭಾಗಿಯಾಗಿರುವ ಅನುಮಾನ ವ್ಯಕ್ತಪಡಿಸಿದ್ದೆವು. ಅದು ಈಗ ನಿಜವಾಗಿದೆ. ಕೋರಮಂಗಲದ ಭದ್ರತಾ ಪೊಲೀಸ್ ಪಡೆ ಕಛೇರಿ, ಮೈದಾನ, ವಾಸದ ಮನೆಗಳು ಇರುವ ಪ್ರದೇಶವು ಉತ್ತರಹಳ್ಳಿ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿದ್ದು ಅಲ್ಲಿ ಬಿಜೆಪಿ ಶಾಸಕ ಆರ್.ಅಶೋಕ್ ಆಯ್ಕೆಯಾಗಿದ್ದಾರೆ. ಅಲ್ಲಿರುವ ಯುವಜನರಲ್ಲಿ ತಂಡಗಳೊಂದಿಗೆ ನಿಕಟ ಸಂಬಂಧವನ್ನು ಶಾಸಕರು, ಬಿಜೆಪಿ ಪಕ್ಷ ಹಾಗೂ ಸಂಘ ಪರಿವಾರದ ಅಂಗ ಸಂಸ್ಥೆಗಳು ಬೆಳೆಸಲು ಯತ್ನಿಸಿವೆ. ಸಂಪರ್ಕಗಳೂ ಇವೆ.


ಪಾವಗಡದಲ್ಲಿ ಪೊಲೀಸರ ಹತ್ಯೆಯಾದ ಕೂಡಲೇ ಈ ಪರಿವಾರ ಚುರುಕಾಗಿ, ಆ ಪ್ರದೇಶದ ಯುವಜನರ ತಂಡವನ್ನು ಹುರಿದುಂಬಿಸಿ ಬೀದಿಗಿಳಿಸಿದೆ. ಮುಖ್ಯವಾಗಿ ಎ.ಬಿ.ವಿ.ಪಿ. ಕಾರ್ಯಕರ್ತರು, ಬಿಜೆಪಿಯವರು ಅದರಲ್ಲಿ ಸಕ್ರಿಯವಾಗಿ ಕೊಡಗಿದ್ದರು. ಗಲಭೆಗೆ ಕುಮ್ಮಕ್ಕು ನೀಡಿದ್ದಾರೆ. ಭಾಗಿಯಾದದ್ದರ ಬಗ್ಗೆ ಪ್ರತ್ಯಕ್ಷದರ್ಶಿಗಳು ಹೇಳುತ್ತಾರೆ. ಸ್ವತಃ ಎಬಿವಿಪಿ ಬ್ಯಾನರ್ ಹಿಡಿದೇ ಈ ಕೆಲಸಗಳಲ್ಲಿ ತೊಡಗಿರುವುದನ್ನು ಟಿ.ವಿ. ಗಳಲ್ಲಿ ಬಿತ್ತರಿಸಲಾಗಿದೆ.

ಬಿಜೆಪಿ - ಸಂಘ ಪರಿವಾರವು ರಾಜ್ಯ ಸರ್ಕಾರ ವಿರುದ್ಧ ಪ್ರಗತಿಪರರ ವಿರುದ್ಧ ಜನರನ್ನು ಎತ್ತಿ ಕಟ್ಟುವಲ್ಲಿ ಹಾಗೂ ಆ ಮೂಲಕ ಪೊಲೀಸ್ ಪಡೆಗಳ ನಡುವೆ ಸಂಬಂಧ ಬಲಗೊಳಿಸಿ, ಸಿಂಪಥಿ ಪಡೆಯಲು ಸನ್ನಿವೇಶಗಳನ್ನು ಬಳಸಲು ಅದೆಷ್ಟು ಉತ್ಸುಕವಾಗಿದೆ ಎಂಬುದನ್ನು ಎಚ್ಚರಿಕೆಯಿಂದ ಗಮನಿಸಬೇಕು.

ಬಂದು ಹೋದರೇ ಪ್ರಧಾನಿ ?

ಕಳೆದೊಂದು ವಾರದಲ್ಲಿ ಪ್ರಧಾನಿ ಮನಮೋಹನ ಸಿಂಗ್ ಕರ್ನಾಟಕಕ್ಕೆ ಬಂದುಹೋದರು. ಇದು ರಾಜ್ಯಕ್ಕೆ ಅವರ ಪ್ರಥಮ ಭೇಟಿ. ಇಂತಹ ಭೇಟಿ ಅತ್ಯಂತ ಮಹತ್ವ ಪಡೆಯುತ್ತದೆ. ಆದರೆ ಅಷ್ಟಾಗಿ ಪ್ರಭಾವಿಸಲಾಗಲಿಲ್ಲ ಎಂದ ಗಮನಿಸಬಹುದು. ವಿಶೇಷವಾಗಿ ಮಾಧ್ಯಮಗಳಲ್ಲಿ ಆಗ ನಕ್ಸಲೀಯರು - ಪಾವಗಡದ ಪೊಲೀಸರ ಹತ್ಯೆಯ ಸುದ್ದಿಗಳೇ ಪ್ರಧಾನ ಜಾಗ ಆವರಿಸಿದ್ದವು.

ಇದರೊಟ್ಟಿಗೆ ಪ್ರಧಾನಿಯವರು ಜನಸಮೂಹದ ಜೊತೆ ಬೆರೆಯುವ, ಸಂವಾಧಿಸುವಂತಹ ರಾಜಕೀಯ ಮಹತ್ವದಿಂದಲ್ಲ. ಅಂತಹ ದೊಡ್ಡ ಕಾರ್ಯಕ್ರಮಗಳು ಇರಲಿಲ್ಲ, ವಿಧಾನಸೌಧದಲ್ಲಿ ಸಭೆ, ಮೈಸೂರಿನಲ್ಲಿ ಸುತ್ತೂರು ಮಠದಲ್ಲಿ ದಾಸೋಹ, ಕಟ್ಟಡ ಉದ್ಘಾಟನೆ, ಒಂದು ರೀತಿ ಗೋಡೆಗಳ ನಡುವಿನ



ಕಾರ್ಯಕ್ರಮಗಳು.

ಈಸಂದರ್ಭ ಉಪಯೋಗಿಸಿ ರಾಜ್ಯ ಸರ್ಕಾರ ತನ್ನ ಹಲವು ಯೋಜನೆಗಳು ಪಟ್ಟಿ ಮಂಡಿಸಿತು. ಭರವಸೆಗಳನ್ನು ಪಡೆದುಕೊಂಡಿತಾದರೂ ಇದೆಲ್ಲ ದೆಹಲಿಯಲ್ಲಿಯೂ ಮಾಡಬಹುದಾದ್ದದ್ದು. ಗ್ರಾಮ ಪಂಚಾಯ್ತಿ ಚುನಾವಣೆಗಳು ಎಂಬ ನೀತಿ ಸಂಹಿತೆಯ ಕಾರಣದಿಂದ ದೇವನಹಳ್ಳಿ ವಿಮಾನ ನಿಲ್ದಾಣದ ಕೆಲಸಗಳತ್ತ ನೋಡಲು ಹೋಗಲಾಗಲಿಲ್ಲ. ಅಂತೂ ರಾಜ್ಯಕ್ಕೆ ಬಂದ ಪ್ರಧಾನಿಯವರಿಗೆ ಅಹವಾಲು ನೀಡಿಯಾಗಿದೆ. ಪರಿಹಾರ?

ಜೆಡಿ(ಎಸ್) ಮತ್ತು ಕಾಂಗ್ರೆಸ್ ನಡುವಿನ ವಾಗ್ಯುದ್ಧಗಳು : ಕೋಮುವಾದದ ವಿರುದ್ಧ ಹೋರಾಟವನ್ನು ದುರ್ಬಲಗೊಳಿಸುತ್ತದೆ.

ಜಾತ್ಯತೀತ ಜನತಾದಳದ ರಾಷ್ಟ್ರಾಧ್ಯಕ್ಷ, ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರವರ ಮತ್ತು ಕಾಂಗ್ರೆಸ್‌ನ ಪಕ್ಷದ ರಾಜ್ಯ ಮುಖಂಡರುಗಳ ನಡುವೆ ನಡೆಯುತ್ತಿರುವ ಅನಾರೋಗ್ಯಕರವಾದ ಬಹಿರಂಗ ವಾಗ್ಯುದ್ಧ-ಜಗಳವನ್ನು ನಿಲ್ಲಿಸಿ ಆರ್ಥಿಕ ಉದಾರೀಕರಣ ಹಾಗೂ ಕೋಮುವಾದದ ವಿರುದ್ಧದ ಕಳೆದ ಚುನಾವಣೆಯಲ್ಲಿನ ಜನಾದೇಶವನ್ನು ಪಾಲಿಸಲು ಆದ್ಯಗಮನ ಕೊಡಬೇಕೆಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಆಗ್ರಹಿಸಿದೆ.

ಇಂತಹ ಜಗಳಗಳಿಂದ ಉಂಟಾಗುವ ರಾಜಕೀಯ ಗೊಂದಲ ಮತ್ತು ಅಸ್ಥಿರತೆಯ ವಾತಾವರಣವು ಕೋಮುವಾದಿ ಶಕ್ತಿಗಳು ಸನ್ನಿವೇಶವನ್ನು ದುರುಪಯೋಗಪಡಿಸಿಕೊಳ್ಳಲು ಅವಕಾಶ ಕಲ್ಪಿಸಿ, ಮೇಲುಗೈ ಸಾಧಿಸುವಂತಾಗುವುದು. ಇಂತಹ ಬೆಳವಣಿಗೆಯು ಮೈತ್ರಿಕೂಟದ ಸರ್ಕಾರ ರಚಿಸುವಾಗ ಘೋಷಿಸಲಾದ ಉದ್ದೇಶಕ್ಕೆ ಧಕ್ಕೆ ತಂದು ಕೋಮುವಾದಿ ಶಕ್ತಿಗಳ ಹುನ್ನಾರಗಳ ವಿರುದ್ಧ ನಡೆಯುವ ಹೋರಾಟವನ್ನು ದುರ್ಬಲಗೊಳಿಸುತ್ತದೆ ಹಾಗೂ ಆ ಉದ್ದೇಶವೇ ಸೋತುಹೋಗುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಮೈತ್ರಿಕೂಟದ ಸರ್ಕಾರದ ಭಾಗೀದಾರರಾಗಿರುವ ಜನತಾದಳ(ಎಸ್) ಮತ್ತು ಕಾಂಗ್ರೆಸ್‌ನೊಳಗೆ ಹಲವಾರು ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳು ಸಹಜವಾದರೂ ಅವುಗಳನ್ನು ತಮ್ಮೊಳಗೆ ಆಂತರಿಕವಾಗಿ ಬಗೆಹರಿಸಿಕೊಳ್ಳಬೇಕು. ಇಂದು ನಡೆಯುತ್ತಿರುವ ವಾಗ್ಯುದ್ಧದಲ್ಲಿ ಜನಹಿತದ ಸತ್ವವೇನೂ ಕಾಣುತ್ತಿಲ್ಲ. ನಾಡಿನ ಜನರ ಜ್ವಲಂತ ಪ್ರಶ್ನೆಗಳಾದ ಬರಗಾಲ, ಕುಡಿವ ನೀರಿನ ಅಭಾವ, ಉದ್ಯೋಗ ಹೀನತೆ, ವಿದ್ಯುತ್ ಕ್ಷಾಮ ಮತ್ತು ಖಾಸಗೀ ಹಾಗೂ ದುಬಾರೀಕರಣ, ರೈತರ ಆತ್ಮಹತ್ಯೆಗಳು ಒಳಗೊಂಡು ರೈತ, ಕೂಲಿಕಾರ, ಕಾರ್ಮಿಕ ವರ್ಗದ ಪ್ರಶ್ನೆಗಳು, ಶಿಕ್ಷಣ ರಂಗದಲ್ಲಿನ ಅವಾಂತರಗಳು, ಭ್ರಷ್ಟಾಚಾರ, ಆಡಳಿತ ಚುರುಕುಗೊಳಿಸುವಂತಹ ಅನೇಕ ವಿಷಯಗಳೇ ಇಲ್ಲ. ಇಂತಹ ವಿಷಯಾಧಾರಿತ ಭಿನ್ನಾಭಿಪ್ರಾಯಕ್ಕಿಂತಲೂ ಇಲ್ಲಿ ಅಧಿಕಾರದಾಹದ ತಿಕ್ಕಾಟವೇ ಪ್ರಮುಖವಾಗಿದೆಯೆಂದು ಸಿಪಿಐ(ಎಂ) ಟೀಕಿಸಿದೆ.

ಮಾವೋವಾದಿ ನಕ್ಸಲೀಯರನ್ನು ಬೆಂಬಲಿಸುತ್ತಿದ್ದಾರೆಂದು ಕಾರಣವೊಡ್ಡಿ ವಿಜಯಾ ಕಾಲೇಜಿನ ಪ್ರಾಧ್ಯಾಪಕರ ಶ್ರೀಧರರವರ ಮೇಲೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನ ಕಾರ್ಯಕರ್ತರು ನಡೆಸಿದ ಗೂಂಡಾಧಾಳಿಯನ್ನು ಸಿಪಿಐ(ಎಂ) ಉಗ್ರವಾಗಿ ಖಂಡಿಸುತ್ತದೆ.

ಕಾನೂನನ್ನು ಕೈಗೆತ್ತಿಕೊಳ್ಳುವ ಸಂಘ ಪರಿವಾರದ ಇಂತಹ ಫ್ಯಾಸಿಸ್ಟ್ ಕ್ರಮಗಳು ಅತ್ಯಂತ ಅಪಾಯಕಾರಿಯಾಗಿವೆ. ನಕ್ಸಲ್ ವಾದವನ್ನು ವಿರೋಧಿಸುವಾಗಲೇ ಸಿಪಿಐ(ಎಂ) ಪಕ್ಷವು ಸಂಘ ಪರಿವಾರದ ಪ್ರಜಾಪ್ರಭುತ್ವ ವಿರೋಧಿಯಾದ ಈ ಪ್ರವೃತ್ತಿಗಳನ್ನು ನಾಡಿನ ಜನತೆ ವಿರೋಧಿಸಬೇಕೆಂದು ಕರೆ ನೀಡಿದೆ.

ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರೂ, ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಎಸ್.ವೈ.ಗುರುಶಾಂತ್ ಭಾಗವಹಿಸಿದ್ದರು.

ನಲುಗಿದ ನಾಗಮಂಗಲ ಗಲಭೆ: ಹಿಂದಿರುವ ಸತ್ಯಗಳು

ನಾಗಮಂಗಲದ ಗಲಭೆಗಳು ಏನೋ ಆಕಸ್ಮಿಕ ಹೊತ್ತಿಕೊಂಡದ್ದಲ್ಲ, ಘಟನೆಗಳನ್ನು ಪರಿಶೀಲಿಸುತ್ತಾ ಹೋದಾಗ ಕಂಡ ಸತ್ಯಗಳ ಪ್ರತ್ಯಕ್ಷ ವರದಿ

ತೀವ್ರ ರಾಜಕೀಯ ಜಟಾಪಟಿಗೆ ಅನ್ವರ್ಥವಾಗಿರುವ ಮಂಡ್ಯ ಜಿಲ್ಲೆಯ ನಾಗಮಂಗಲ ಕಳೆದವಾರ ಕೋಮುದಳ್ಳುರಿಯಿಂದ ನಲುಗಿತು. ಹಳೆ ಅಂಚೆ ಕಚೇರಿ ರಸ್ತೆಯಲ್ಲಿರುವ ಮಾರಮ್ಮನ ದೇವಸ್ಥಾನದ ವಿಗ್ರಹದ ಸ್ಥಾನಪಲ್ಲಟ ನೆಪ ಮಾಡಿಕೊಂಡ ಸ್ಥಳೀಯ ಬಿಜೆಪಿ, ಭಜರಂಗಿಗಳ ಗೂಂಡಾ ವರ್ತನೆಗೆ ಬಡಕೂಲಿಕಾರ ತಳ್ಳುಗಾಡಿಗಳು, ಫುಟ್‌ಪಾತ್ ಅಂಗಡಿಗಳು ಭಸ್ಮವಾದವು. ಜೊತೆಗೆ 20 ಅಲ್ಪಸಂಖ್ಯಾತರ ಅಂಗಡಿಗಳು ಸಂಪೂರ್ಣ ಲೂಟಿಯಾಗಿ ಇಬ್ಬರು ಮುಸ್ಲಿಮ ರೈತರು ಇರಿತಕ್ಕೆ ಒಳಗಾದರು. ಇದರ ಜೊತೆಗೆ ಮುಸ್ಲಿಂ ಪ್ರಾರ್ಥನಾ ಮಂದಿರವೊಂದು ಭಗ್ನಗೊಂಡು ನಾಗಮಂಗಲದ ಜನ ಭಯಭೀತಿಯಿಂದ ನಲುಗುವಂತಾಯಿತು. 5 ದಿನಗಳ ಕರ್ಫ್ಯೂ, ನಿಷೇಧಾಜ್ಞೆಯಂತಹ ಕ್ರಮಗಳಿಂದ ರೈತರು ಮಾರಬೇಕಾದ ತರಕಾರಿ, ಕಾಯಿಪಲ್ಲೆಗಳು ಹಾಳಾಗಿ ತೀವ್ರ ನಷ್ಟ ಉಂಟಾದುದು ಅಲ್ಲದೇ ಬಡ ಕೂಲಿಕಾರರ ಬದುಕು ಜರ್ಝರಿತವಾದದ್ದು ಕೋಮುಗಲಭೆಗಳ ಅಮಾನವೀಯ ಪರಿಣಾಮಗಳು.

1982 ರಲ್ಲಿ ದೊಡ್ಡ ಪ್ರಮಾಣದ ಗಲಭೆ ಬಿಟ್ಟರೆ ಇದೇ ದೊಡ್ಡ ಪ್ರಮಾಣದ ಗಲಭೆಯಾಗಿದ್ದು ಸಾರ್ವಜನಿಕ ಆಸ್ತಿಪಾಸ್ತಿ ನಾಶ, ಲೂಟಿ, ಪ್ರಾಣ ಬೆದರಿಕೆಯಂತಹ ಸಮಾಜದ್ರೋಹಿ ಚಟುವಟಿಕೆಗಳಲ್ಲಿ ಬಿಜೆಪಿ, ಭಜರಂಗದಳ, ವಿಶ್ವ ಹಿಂದೂ ಪರಿಷತ್‌ನ ಮುಖಂಡರು ಬಹಿರಂಗವಾಗಿ ತೊಡಗಿ ನಾಗಮಂಗಲ ನಲುಗುವಂತೆ ಮಾಡಿದರು.

ಗಲಭೆ ಮಾಡಲೆಂದೇ ಹೊರಟವರು

ಅಂದು ಗುರುವಾರ ಬೆಳಿಗ್ಗೆ 7.30 ಸಮಯಕ್ಕೆ ಬಿಜೆಪಿ ತಾಲ್ಲೂಕು ಕಾರ್ಯದರ್ಶಿ ಶ್ರೀನಿವಾಸ ನೇತೃತ್ವದ 40 ಜನರ ಗುಂಪೊಂದು ಪೊಲೀಸ್ ಸ್ಟೇಷನ್‌ಗೆ ನುಗ್ಗಿ ಮುಸ್ಲಿಮರು ದೇವಸ್ಥಾನದ ವಿಗ್ರಹಕ್ಕೆ ಹಾನಿ ಮಾಡಿದ್ದಾರೆ ಎಂದು ಆರೋಪಿಸಿ ಮೊಕದ್ದಮೆ ದಾಖಲಿಸಲು ಪಟ್ಟು ಹಿಡಿದರು. ಅನಿರೀಕ್ಷಿತ ಘಟನೆಯಿಂದ ಅವಕ್ಕಾದ ಪೊಲೀಸರು ಮೇಲಧಿಕಾರಿಗಳಿಗೆ ತಿಳಿಸುವುದಾಗಿ ಹೇಳಿದಾಗ ಎದುರುಗಡೆ ಇರುವ ಮಂಡ್ಯ ವೃತ್ತಕ್ಕೆ ಇಳಿದ ಗುಂಪು ಅಲ್ಪಸಂಖ್ಯಾತರೇ ಹೆಚ್ಚು ಇರುವ ಮಂಡ್ಯ ರಸ್ತೆಯ ಕಡೆ ಕಲ್ಲು ತೂರಾಟ ಪ್ರಾರಂಭಿಸಿದರು. ಸ್ವತಃ ಶ್ರೀನಿವಾಸನೇ ಅಲ್ಪಸಂಖ್ಯಾತರ ಸಿಮೆಂಟ್ ಅಂಗಡಿಯ ಶೀಟುಗಳನ್ನು ಒಡೆದು ಹಾಕಿದನು. ಸಿದ್ದಲಿಂಗಸ್ವಾಮಿ ಎಂಬ ಭಜರಂಗಿ ಮುಖಂಡ ಹಾಗೂ ವಕೀಲನೂ ಆಗಿರುವ ಆತ ಜೆಡಿ(ಎಸ್)ನ ಸಚಿವ ಚಲುವರಾಯಸ್ವಾಮಿಯ ಬಂಟನಾಗಿದ್ದ, ಆತ ಸರ್ಕಾರಿ ಜೂನಿಯರ್ ಕಾಲೇಜಿನಿಂದ 50-60 ವಿದ್ಯಾರ್ಥಿಗಳನ್ನು ಕರೆದುಕೊಂಡು ಬಂದು ಗಲಾಟೆಗೆ ಮತ್ತಷ್ಟು ರಂಪ ಆಗಲು ಕಾರಣಕರ್ತನಾಗಿದ್ದಾನೆ. ಇದೇ ಸಮಯಕ್ಕೆ ಸರಿಯಾಗಿ ಕಲ್ಲು ತೂರಾಟದಿಂದ ಆದ ಸಣ್ಣ ಏಟಿನ ನೆಪ ಮಾಡಿಕೊಂಡು ಅಲ್ಲಿಂದ ಕಾಲು ಕಿತ್ತ ಅಲ್ಪಸಂಖ್ಯಾತರ ಬಟ್ಟೆ ಅಂಗಡಿ, ಟೈಲರ್ ಅಂಗಡಿ, ಚಪ್ಪಲಿ ಅಂಗಡಿಗಳ ಲೂಟಿಗೆ ಕುಮ್ಮಕ್ಕು ನೀಡಿದ್ದಾನೆ. ಸುಮಾರು 12-30 ರ ಸಮಯದಲ್ಲಿ ನಾಗಮಂಗಲದ ಕೆರೆಯ ಕೆಳಗಿನ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದ ಮುಸ್ಲಿಂ ರೈತನ್ನು ತೀವ್ರವಾಗಿ ಥಳಿಸಿ ಕೈಗೆ ಸಿಕ್ಕ ಇಬ್ಬರಿಗೆ ಚಾಕು, ಬ್ಲೇಡ್‌ನಿಂದ ತೀವ್ರವಾಗಿ ಹಲ್ಲೆ ನಡೆಸಲಾಗಿದೆ. ಅದಕ್ಕಿಂತ ಮುಂಚೆ ಅದೇ ಕೆರೆಯ ಅಂಚಿನಲ್ಲಿರುವ ಮುಸ್ಲಿಂ ಪ್ರಾರ್ಥನಾ ಮಂದಿರಕ್ಕೆ ದಕ್ಕೆ ಮಾಡಲಾಗಿದೆ. ಹಲ್ಲೆಗೆ ಈಡಾದವರ ಪ್ರಕಾರ ಅವರೆಲ್ಲ ಅಪರಿಚಿತರಾಗಿದ್ದು, ಕೆಲವರ ಪ್ರಕಾರ ಬಿಂಡಿಗನವಿಲೆ, ಬೆಳ್ಳೂರಿನ ಭಜರಂಗದಳದ ಕಾರ್ಯಕರ್ತರು ಎಂದು ಹೇಳಲಾಗುತ್ತಿದೆ.



ಕೋಮುದಳ್ಳುರಿಗೆ ಧ್ವಂಸಗೊಂಡ ಆಸ್ತಿ...

ಕಿಚ್ಚು ಹಚ್ಚಿದವರು

ಮಾರಮ್ಮನ ದೇವಸ್ಥಾನವು ಅತ್ಯಂತ ಚಿಕ್ಕದಾಗಿದ್ದು ಬಾಗಿಲು ಇಲ್ಲದ ಗರ್ಭಗುಡಿ, ಮುಂದೆ ಐದು ಅಡಿ ಜಾಗದ ನಂತರ ಒಂದು ಸಣ್ಣ ಕಾಂಪೌಂಡು. ಅದಕ್ಕೆ ಬೀಗವಿಲ್ಲದ ಕಬ್ಬಿಣದ ಗೇಟುಹೊಂದಿದೆ. ಕಾಂಪೌಂಡು ಮತ್ತು ಗೇಟು ಇತ್ತೀಚಿಗೆ ಬಂದಿದ್ದು ಅತ್ಯಂತ ಹಳೆಯದಾದ ಈ ದೇವಸ್ಥಾನ ಮೊದಲಿನಿಂದಲೂ ಬಾಗಿಲು ಇಲ್ಲದ ಗರ್ಭಗುಡಿಯೇ ಆಗಿತ್ತು. ಅಕ್ಕಪಕ್ಕದಲ್ಲಿರುವ ಕೆಲವು ಮುಸ್ಲಿಂ ವ್ಯಾಪಾರಿಗಳ ಮನೆ ಬಿಟ್ಟರೆ ಒಕ್ಕಲಿಗರು ಸೇರಿದಂತೆ ಹಲವರ ಮನೆಗಳು ಹೇರಳವಾಗಿವೆ.

ನಾಗಮಂಗಲದಲ್ಲಿ ಒಂದು ವರ್ಷದ ಹಿಂದೆ ಹಿಂದೂ ಸಮಾಜೋತ್ಸವಕ್ಕೆ ಪ್ರಮೋದ್ ಮುತಾಲಿಕ್, ತೊಗಾಡಿಯಾ ಬಂದು ಹೋದ ಮೇಲೆ ನಿರಂತರವಾಗಿ ಕೋಮು ಉದ್ವಿಗ್ನತೆ ಸೃಷ್ಟಿಸಿರುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿರುವುದನ್ನು ಕಾಣಬಹುದು. ಪ್ರಮೋದ್ ಮುತಾಲಿಕ್ ಬಂದುಹೋದ ಒಂದು ತಿಂಗಳಿಗೆ ಪಟ್ಟಣದ ಹೊರವಲಯದ ಗುಂಗರ್ ದಿವಾನ್, ಉರುಸಲ್ಲಾ ದಿವಾನ್ ದರ್ಗಾಕ್ಕೆ ಇಟ್ಟಿದ್ದ ನಾಡಬಾಂಬ್ ಪ್ರಕರಣ ನಾಗಮಂಗಲದ ಜನರನ್ನು ಭಯೋಭೀತರನ್ನಾಗಿಸಿತ್ತು. ಈಗ್ಗೆ ಒಂದು ತಿಂಗಳ ಹಿಂದೆ ಸರ್ಕಾರಿ ಜೂನಿಯನ್ ಕಾಲೇಜಿನಲ್ಲಿ ಎರಡು ಕೋಮಿನ ವಿದ್ಯಾರ್ಥಿಗಳು ಪರಸ್ಪರ ಜಗಳವಾಡಿಕೊಂಡಿದ್ದರು. ಹೀಗೆ ನಿರಂತರವಾಗಿ ಒಂದಿಲ್ಲೊಂದು ನೆಪದಲ್ಲಿ ಕೋಮು ಉದ್ವಿಗ್ನತೆ ಸೃಷ್ಟಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದ್ದದ್ದನ್ನು ಯಾರೂ ಬೇಕಾದರೂ ಗಮನಿಸಬಹುದಾಗಿದೆ.

ರಾಜಕೀಯ ಸ್ಪರ್ಧೆ!

ತಾಲ್ಲೂಕು ಹಾಗೂ ಪಟ್ಟಣದ ರಾಜಕೀಯ ಎರಡು ವ್ಯಕ್ತಿಗಳನ್ನು ಕೇಂದ್ರವಾಗಿಟ್ಟುಕೊಂಡು ದ್ರುವೀಕರಣಗೊಂಡಿದೆ. ಚಲುವರಾಯಸ್ವಾಮಿ ಹಾಗೂ ಶಿವರಾಮೇಗೌಡ ಆ ಎರಡೂ ಗುಂಪಿನ ನಾಯಕರು. ಆದರೆ ಇತ್ತೀಚಿಗೆ ಶಿವರಾಮೇಗೌಡನ ಪ್ರಬಲ ಬೆಂಬಲಿಗನಾಗಿದ್ದ ಹೆಚ್‌ಎಎಲ್ ಹೌಸಿಂಗ್ ಸೊಸೈಟಿಯ ಅಧ್ಯಕ್ಷ ಸುರೇಶ್ ಗೌಡ ತನ್ನದೇ ಆದ ಬಲಿಷ್ಟ ಪಡೆಯನ್ನು ಕಟ್ಟುತ್ತಿದ್ದು ಗಲಾಟೆ ನಡೆದ ದಿನವೇ ಅಭಿಮಾನಿಗಳ ಮತ್ತು ಕಾರ್ಯಕರ್ತರ ಸಮಾವೇಶವೊಂದನ್ನು ಏರ್ಪಡಿಸಿದ್ದನು. ಈತನ ಜೊತೆ ಈ ಚುನಾವಣೆಯ ಹಿಂದಿನ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗಣನೀಯ ಮತ ಪಡೆದಿದ್ದ ಧರಣೇಂದ್ರ ಬಾಬುಜೊತೆಯಾಗಿ ಮೂರನೇ ರಾಜಕೀಯ ಶಕ್ತಿಯಾಗಿ ಉದಯಿಸಲು ಪ್ರಯತ್ನಿಸಿದ್ದಾರೆ. ಈ ಗುಂಪು ಬೆಳೆಯದಂತೆ ತಡೆಯುವುದು ಶಿವರಾಮೇಗೌಡನಿಗೂ ಹಾಗೂ ಚಲುವರಾಯಸ್ವಾಮಿಗೂ ಬೇಕಾಗಿದೆ ಎಂದು ಜನ ಹೇಳುತ್ತಾರೆ. ಸುರೇಶ್ ಗೌಡನ ಅಭಿಮಾನಿಗಳ ಪ್ರಕಾರ ಶಿವರಾಮೇಗೌಡ ಕಾರ್ಯಕರ್ತರ ಸಮಾವೇಶ ವಿಫಲಗೊಳಿಸಲು ಗಲಭೆ ಎಬ್ಬಿಸಿದ ಎಂದು ಆರೋಪಿಸುತ್ತಾರೆ. ಆದರೆ ಚಲುವರಾಯಸ್ವಾಮಿ ತಾನು ಮಂತ್ರಿಯಾಗಿರುವುದನ್ನು ಸಹಿಸದೆ ಪೂರ್ವಯೋಜಿತವಾಗಿ ಹುಟ್ಟುಹಾಕಿರುವ ಗಲಭೆ ಎಂದು ಆರೋಪ ಮಾಡುತ್ತಾರೆ. ವಿಶೇಷವೆಂದರೆ ಗಲಭೆಯಲ್ಲಿ ಆಸ್ತಿ-ಪಾಸ್ತಿ ನಾಶದಲ್ಲಿ ಬಿಜೆಪಿ, ಭಜರಂಗದಳದ ಮುಖಂಡರ ಮತ್ತು ಕಾರ್ಯಕರ್ತರ ಪಾತ್ರಕ್ಕೆ ನಾಗಮಂಗಲದ ಪಟ್ಟಣದ ಜನರೇ ಸಾಕ್ಷಿಯಾಗಿದ್ದಾರೆ. ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ವಿಷ್ಣುಮೂರ್ತಿ ಭಟ್ ಕಾಂಗ್ರೆಸ್‌ನ ಶಿವರಾಮೇಗೌಡನನ್ನು ಬೆಂಬಲಿಸಿದ್ದನ್ನು ಪ್ರಸ್ತಾಪಿಸುವ ಜನ ಸುರೇಶ್ ಗೌಡ ಕಾಂಗ್ರೆಸ್‌ನಿಂದ ಟಿಕೇಟ್ ವಂಚಿತರಾದರೆ ಧರಣೇಂದ್ರ ಬಾಬು ಮೂಲಕ ಬಿಜೆಪಿಗೆ ಎಳೆಯಬಹುದು, ಆ ಮೂಲಕ ನಾಗಮಂಗಲವನ್ನು ಬುಟ್ಟಿಗೆ ಹಾಕಿಕೊಳ್ಳುವ ಯೋಚನೆ ಬಗ್ಗೆ ವಿಚಾರಿಸಿದರೆ ಆ ಸಾಧ್ಯತೆಯನ್ನು ಅವರು ನಿರಾಕರಿಸುತ್ತಿಲ್ಲ.

ಪೊಲೀಸರ ದಿವ್ಯ ದಿರ್ಲಕ್ಷ್ಯ

ಗಲಭೆ ನಡೆಯುವ ಸೂಚನೆ ಅಂದು ಬೆಳಿಗ್ಗೆ 7.30 ರ ಸಮಯದಲ್ಲಿ ಸಿಕ್ಕರೂ ಪೊಲೀಸರು ಬಂದಿದ್ದು 11 ರ ಸುಮಾರಿಗೆ, ಅಷ್ಟೊತ್ತಿಗಾಗಲೇ ನಾಗಮಂಗಲ ಉರಿದುಹೋಗಿತ್ತು. ಆನಂತರ ಗುಂಪುಗಳನ್ನು ಚದುರಿಸಿ ಗಲಾಟೆಗೆ ಕುಮ್ಮಕ್ಕು ನೀಡಿ ಭಾಗವಹಿಸಿದ ಆರೋಪದ ಮೇಲೆ ಬಿಜೆಪಿ ತಾಲ್ಲೂಕು ಕಾರ್ಯದರ್ಶಿ ಶ್ರೀನಿವಾಸನು ಸೇರಿದಂತೆ 40-50 ಜನರನ್ನು ಬಂಧಿಸಿ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಬಳ್ಳಾರಿ ಜೈಲಿಗೆ ಕಳುಹಿಸಲಾಗಿದೆ. ಸಿದ್ದಲಿಂಗಸ್ವಾಮಿ ಎಂಬ ವಕೀಲನೂ, ಭಜರಂಗದಳ ನಾಯಕನೂ ಆಗಿರುವ ಈತನನ್ನು ಚಲುವರಾಯಸ್ವಾಮಿಯ ಶಿಫಾರಸ್ಸಿನ ಮೇಲೆ ಬಿಟ್ಟುಬಿಡಲಾಗಿದೆ. ಇದರಲ್ಲಿ ಹಲವಾರು ಅಮಾಯಕರನ್ನು ಕೂಡ ಬಂಧಿಸಲಾಗಿದೆ ಎನ್ನಲಾಗುತ್ತಿದೆ. ಪೊಲೀಸರು ಸೂಕ್ತ ಕ್ರಮವನ್ನು ಸಮಯ ಪ್ರಜ್ಞೆಯಿಂದ ಮಾಡಿದ್ದರೆ ಬಿಜೆಪಿ, ಭಜರಂಗಿಗಳ ಆಟವನ್ನು ತಡೆಯಬಹುದಿತ್ತು.

ಈ ವರದಿಗಾರ ನಾಲ್ಕು ದಿನಗಳ ನಂತರ ಭೇಟಿ ನೀಡಿದಾಗಲೂ ಸುಟ್ಟ ಫುಟ್‌ಪಾತ್ ಅಂಗಡಿಗಳು ಸಂಪೂರ್ಣ ಉರಿದುಹೋಗಿ ಉಳಿದಿದ್ದ ಕಪ್ಪು ಮಸಿ, ಲೂಟಿಯಾದ ಅಂಗಡಿಗಳಲ್ಲಿ ಆಗಿದ್ದ ಜಖಂ, ಗಲಭೆಯಲ್ಲಿ ಹಾನಿಗೀಡಾದ ದರ್ಗಾವನ್ನು ಪುನಃ ಕಟ್ಟಿಸಿಕೊಡುತ್ತಿರುವುದನ್ನು ವೀಕ್ಷಿಸಿದರು. ತತ್‌ಕ್ಷಣವೇ ಮಾರಮ್ಮನ ದೇವಸ್ಥಾನ ವಿಗ್ರಹ ಪ್ರತಿಷ್ಠಾಪನೆ ಮತ್ತು ದರ್ಗಾಕ್ಕೆ ಆಗಿದ್ದ ಹಾನಿ ಸರಿಪಡಿಸುವ ಕ್ರಮವನ್ನು ಜಿಲ್ಲಾಡಳಿತ ತೆಗೆದುಕೊಂಡಿದ್ದು. ಸ್ವತಃ ಜಿಲ್ಲಾಧಿಕಾರಿಯೇ ಉಸ್ತುವಾರಿ ವಹಿಸಿದ್ದರು.

ಅಪಾಯ ತಡೆಗಟ್ಟಬೇಕು

ಒಟ್ಟಾರೆಯಾಗಿ ಬಹಳ ದಿನಗಳಿಂದ ಗಲಭೆ ಉಂಟು ಮಾಡಲು ಹೊಂಚು ಹಾಕಿದ್ದ ಸಂಘ ಪರಿವಾರದವರ ಪೂರ್ವಯೋಜಿತ ಕೃತ್ಯವೊಂದು ಸರ್ಕಾರದ ನಿರ್ಲಕ್ಷ್ಯದಿಂದ ತನಿಖೆಯಾಗದೆ ಉಳಿದಿದೆ. ದಿನಕಳೆದಂತೆ ಗಲಭೆಖೋರರು ಕಾನೂನು ಮುಷ್ಟಿಯಿಂದ ಪಾರಾಗಿ ಮತ್ತೆ ಕೋಮು ವಿಭಜನೆ ಮಾಡಲು ತಮ್ಮ ಪ್ರಯತ್ನ ಮುಂದುವರೆಸುವರು. ಆದ್ದರಿಂದ ಸರ್ಕಾರ ಈ ಸಂಬಂಧ ಸೂಕ್ತ ಎಚ್ಚರಿಕೆ ವಹಿಸಿ ಮುಂದಾಗಬಹುದಾದ ಅಪಾಯ ತಡೆಗಟ್ಟಬೇಕಾಗಿದೆ.

- ಟಿ. ಯಶವಂತ ○

ನೀರಿನ ದರ ಹೆಚ್ಚಳ ವಾಪಸ್ ಪಡೆಯಲು : ಸಿಪಿಐ(ಎಂ) ಆಗ್ರಹ

ನೀರಿನ ದರವನ್ನು ಹೆಚ್ಚಿಸಿರುವ ಬೆಂಗಳೂರು ಜಲಮಂಡಳಿಯ ತೀರ್ಮಾನವನ್ನು ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ತೀವ್ರವಾಗಿ ವಿರೋಧಿಸುತ್ತದೆ. ಹೊಸ ಸ್ಲಾಬ್‌ಗಳನ್ನು ರೂಪಿಸಿ, ಹಿಂದೆ ಇದ್ದ 15 ಸಾವಿರ ಲೀ. ವರೆಗಿನ ಮೊದಲ ಸ್ಲಾಬ್‌ನ್ನು 8 ಸಾವಿರ ಲೀ.ಗೆ ಇಳಿಸಿ ಸಾಮಾನ್ಯ ವರ್ಗದ ಗ್ರಾಹಕರಿಗೆ ಯಾವುದೇ ತೊಂದರೆ ಆಗುವುದಿಲ್ಲ ಎನ್ನುವ ಜಲಮಂಡಳಿಯ ಧೋರಣೆಯು ಮೋಸದಿಂದ ಕೂಡಿದೆ. 15 ಸಾವಿರ ಲೀಟರ್‌ವರೆಗೆ ಇದ್ದ ಕಡಿಮೆ ದರದ ಮೊದಲ ಹಂತದ ಅವಕಾಶವನ್ನು ಇದರಿಂದ ಮೊಟಕುಗೊಳಿಸಲಾಗಿದೆ.

ಉಳಿದ ಹಂತಗಳಿಗೆ ಏರಿಸಿರುವ ದರವು ಗಾಯದ ಮೇಲೆ ಬರೆ ಎಳೆದಂತಾಗಿದೆ. ದರ ವಿಪರೀತವಾಗಿ ಏರಿಸಲಾಗಿರುವ ಮೂರನೇ ಸ್ಲಾಬ್‌ಗಿಂತ ಮೇಲ್ಪಟ್ಟ ಗ್ರಾಹಕರಲ್ಲಿ ಹೆಚ್ಚಿನ ಸಂಖ್ಯೆಯ ಗ್ರಾಹಕರು ಗುಂಪು ಬಾಡಿಗೆ ಮನೆಗಳಲ್ಲಿ ವಾಸಿಸುತ್ತಾರೆ. ಬಡ-ಸಾಮಾನ್ಯ ಗ್ರಾಹಕ ಇದರಿಂದ ವಿಪರೀತ ಹೊರೆ ಹೊರಬೇಕಾಗುತ್ತದೆ. ವಿದ್ಯುತ್ ಇಲಾಖೆಯ ರೀತಿಯಲ್ಲಿ ಪ್ರತ್ಯೇಕ ನೀರಿನ ಮೀಟರ್‌ಗಳಿದ್ದರೆ ಈ ಸಮಸ್ಯೆಯಿಂದ ಹೊರಬರಬಹುದು. ಸಾಮಾನ್ಯ ಗ್ರಾಹಕರ ಬಗ್ಗೆ ನಿಜವಾದ ಕಾಳಜಿಯಿದ್ದರೆ ಜಲಮಂಡಳಿಯು ಈ ನಿಟ್ಟಿನಲ್ಲಿ ತೀರ್ಮಾನಿಸಬೇಕು.

ಬಳಕೆದಾರರೇ ಪೂರ್ಣವಾಗಿ ವೆಚ್ಚ ಭರಿಸಬೇಕೆಂಬ ವಿಶ್ವಬ್ಯಾಂಕಿನ ಸಾಲದ ಷರತ್ತನ್ನು ಜಾರಿ ಮಾಡುವ ಭಾಗವಾಗಿ ದರ ಹೆಚ್ಚಳವನ್ನು ಮಾಡಿರುವುದು ಸ್ಪಷ್ಟವಾಗಿ ಕಾಣುತ್ತದೆ. ವಿದ್ಯುತ್ ದರ ಹೆಚ್ಚಳದ ಕಾರಣವು ಕೇವಲ ನೆಪವಷ್ಟೆ. ಆದ್ದರಿಂದ ಜಲಮಂಡಳಿಯು ಹೆಚ್ಚಿಸಿರುವ ದರಗಳನ್ನು ಕೂಡಲೇ ವಾಪಸ್ ಪಡೆಯಬೇಕೆಂದು ಆಗ್ರಹಿಸಿ ಸಿಪಿಐ(ಎಂ0 ಬೆಂಗಳುರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬೆಂಗಳೂರಿನ ಜಲಮಂಡಳಿಯ ಮುಂದೆ ಪ್ರತಿಭಟನೆಯನ್ನು ನಡೆಸಲಾಯಿತು ಮತ್ತು ಜಲಮಂಡಳಿ ಅಧ್ಯಕ್ಷರಿಗೆ ಬೇಡಿಕೆ ಈಡೇರಿಕೆಯ ಮನವಿ ಪತ್ರವನ್ನು ನೀಡಲಾಯಿತು.



ನಕ್ಸಲೀಯ ಸಮಸ್ಯೆ ಮತ್ತು ಪರಿಹಾರ

ಬಹಿರಂಗ ಪತ್ರ

ನಕ್ಸಲ್‌ವಾದ ಹಾಗೂ ನಕ್ಸಲೀಯರ ಕುರಿತಾಗಿ ಒಂದೆಡೆ ಭಾರೀ ವೈಭವೀಕರಣ ನಡೆದಿದ್ದರೆ, ಇನ್ನೊಂದೆಡೆ ಇದನ್ನು ಹೊಸಕಿಹಾಕಲು ದಮನಕಾರಿ ಕ್ರಮಕೈಗೊಳ್ಳಲು ಒತ್ತಾಯಿಸಲಾಗುತ್ತಿದೆ. ಈ ಸಮಸ್ಯೆ ಬಗ್ಗೆ ವೈಜ್ಞಾನಿಕ ಚಿಂತನೆ, ಅದರ ಅಪಾಯದ ಅರಿವಾಗಲೀ ಬೆಂಬಲಿಸುವ ಅನೇಕರಲ್ಲಿ ಇಲ್ಲ. ಎತ್ತಿರುವ ಪ್ರಶ್ನೆಗಳಿಗೆ ಸರಿಯಾದ ಪರಿಹಾರವಾಗಲಿ ಕಂಡುಬರುತ್ತಿಲ್ಲ. ನಕ್ಸಲೀಯ ಪಿಡುಗು ಹಾಗೂ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಾಡಿನ ಬುದ್ಧಿಜೀವಿಗಳಿಗೆ ಸಂಘಟನೆಗಳಿಗೆ, ಸರ್ಕಾರಕ್ಕೆ ಸಿಪಿಐ(ಎಂ) ಬರೆದ ಬಹಿರಂಗ ಪತ್ರ

ಜಿ.ಎನ್.ನಾಗರಾಜ್

ಇತ್ತೀಚೆಗೆ ಇಬ್ಬರು ನಕ್ಸಲೀಯರ ಹತ್ಯೆ ಹಾಗೂ ಅದಕ್ಕೆ ಪ್ರತೀಕಾರವಾಗಿ ಪಾವಗಡದಲ್ಲಿ ಏಳು ಜನ ಪೊಲೀಸರ ಹತ್ಯೆ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಉಲ್ಬಣವಾಗಿರುವ ನಕ್ಸಲೀಯ ಸಮಸ್ಯೆ ಹಾಗೂ ಅದರ ನಿಯಂತ್ರಣದ ಬಗ್ಗೆ ಸಾರ್ವಜನಿಕರ ನಡುವೆ ಹಾಗೂ ರಾಜಕೀಯ, ಸಾಂಸ್ಕೃತಿಕ, ಮಾಧ್ಯಮ ರಂಗಗಳಲ್ಲಿ ಚರ್ಚೆ ನಡೆಯುತ್ತಿದೆ.

ಇಂದು ರಾಜ್ಯದಲ್ಲಿ ಸಾಮಾನ್ಯ ಜನತೆಯ ಬದುಕಿನ ಸಮಸ್ಯೆಗಳ ಹಾಗೂ ಮುಂಬರುವ ಕೇಂದ್ರ, ರಾಜ್ಯ ಸರ್ಕಾರಗಳ ಬಜೆಟ್‌ಗಳಲ್ಲಿ ಅವುಗಳ ಪರಿಹಾರದ ಕ್ರಮಗಳ ಬಗೆಗಿನ ಚರ್ಚೆ ಸಾರ್ವಜನಿಕ ಚರ್ಚೆಯ ಕೇಂದ್ರವಾಗಿರಬೇಕಾಗಿತ್ತು. ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳು ಬೆನ್‌ಹಿನ್ ನೆಪವಾಗಿ ಬೆಂಗಳೂರಿನಲ್ಲಿ, ಬಿಜಾಪುರದಲ್ಲಿ, ಇತ್ತೀಚೆಗೆ ನಡೆಸುತ್ತಿರುವ ಗೂಂಡಾಗಿರಿ, ಸಾರ್ವಜನಿಕ ಆಸ್ತಿಯನ್ನು ವ್ಯವಸ್ಥಿತವಾಗಿ ಅಪಾರ ನಾಶಗೈದ ಬಗ್ಗೆ ಇವುಗಳಿಂದ ಜನರ ಮೇಲೆ ಬೀಳುವ ಹೊರೆ ಹಾಗೂ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವ ಬಗೆಗಿನ ಚರ್ಚೆಗಳು ನಡೆಯಬೇಕಾಗಿತ್ತು. ಆದರೆ ರಾಜ್ಯದ ಜನತೆಯ ಈ ಪ್ರಧಾನ ಪ್ರಶ್ನೆಗಳನ್ನು ಬದಿಗೆ ಸರಿಸಿ ನಕ್ಸಲೀಯರ ಹತ್ಯೆಯ ವೈಭವೀಕರಣ, ಅವರ ಪತ್ರಿಕಾ ಹೇಳಿಕೆಗಳು, ಸರ್ಕಾರದ ಪ್ರತಿಕ್ರಮಗಳು, ಬಿಜೆಪಿ ಹಾಗೂ ಕೋಮುವಾದಿ ಪರಿವಾರದ ಆರ್ಭಟಗಳು, ಸೆಕ್ಯುಲರ್ ಮನೋಧರ್ಮದವರ ಮೇಲಿನ ಧಾಳಿಗಳು, ಗೂಂಡಾ ವರ್ತನೆಗಳು ರಾಜ್ಯದ ಪ್ರಧಾನ ಪ್ರಶ್ನೆಗಳನ್ನು ಬದಿಗೆ ತಳ್ಳಿಬಿಟ್ಟಿವೆ.


ಇಂತಹ ಸಂದರ್ಭದಲ್ಲಿ ನಕ್ಸಲೀಯ ಸಮಸ್ಯೆಯಿಂದಾಗಿ ರಾಜ್ಯದ ಮೇಲಾಗುವ ಪರಿಣಾಮಗಳು ಅದಕ್ಕೆ ಪರಿಹಾರದ ಮಾರ್ಗಗಳು ಹಾಗೂ ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ನಡೆಸಿದ ಅಧ್ಯಯನದ ಆಧಾರದ ಮೇಲೆ ಸಿಪಿಐಎಂನ ವಿಶ್ಲೇಷಣೆ ಹಾಗೂ ಸಲಹೆಗಳನ್ನು ತಮ್ಮ ಮುಂದಿಡುತ್ತಿದ್ದೇವೆ.

ಛಿದ್ರಛಿದ್ರವಾದ ನಕ್ಸಲ್‌ವಾದಿ ಗುಂಪುಗಳು

ಭಾರತದಲ್ಲಿ 1969ರಲ್ಲಿ ಸಿಪಿಐ(ಎಂಎಲ್) ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ(ಮಾರ್ಕ್ಸ್‌ವಾದಿ - ಲೆನಿನ್‌ವಾದಿ) ಎಂಬ ಹೆಸರಿನಲ್ಲಿ ಆರಂಭವಾದ ರಾಜಕೀಯ ಪಕ್ಷವೊಂದು ಒಂದೆರಡು ವರ್ಷಗಳಲ್ಲೆ ತಮ್ಮ ಮಾರ್ಕ್ಸ್‌ವಾದದ ತಪ್ಪು ಗ್ರಹಿಕೆ ಹಾಗೂ ಅಳವಡಿಕೆಯ ತಪ್ಪು ಹಾದಿಯಿಂದಾಗಿ ಮತ್ತು ಅದರಿಂದುಂಟಾದ ಭಿನ್ನಮತಗಳಿಂದಾಗಿ ಹತ್ತು ಹದಿನೆಂಟು ಗುಂಪುಗಳಾಗಿ ಛಿದ್ರ ವಿಚ್ಛಿದ್ರವಾದರು. ಅದರಲ್ಲಿ ಆಂಧ್ರದಲ್ಲಿ ನೆಲೆಯೂರಿರುವ ಪೀಪಲ್ಸ್‌ವಾರ್ ಗುಂಪು ಹಾಗೂ ಜಾರ್ಖಂಡ್‌ನಲ್ಲಿ ನೆಲೆ ಹೊಂದಿರುವ ಎಂ.ಸಿ.ಸಿ.(ಮಾವೊವಾದಿ ಸಮನ್ವಯ ಕೇಂದ್ರ) ಇತ್ತೀಚೆಗೆ ಒಗ್ಗೂಡಿ ಸಿಪಿಐ(ಮಾವೋವಾದಿ) ಎಂದು ಹೆಸರಿಸಿಕೊಂಡಿದ್ದಾರೆ. ಇವರು ನೇಪಾಳದ ಮಾವೊವಾದಿಗಳೊಡನೆ ನಿರಂತರ ಸಂಪರ್ಕವಿರಿಸಿಕೊಂಡಿದ್ದಾರೆ.

ಮಾವೋವಾದಿ ಎಂಬ ಹೆಸರಿನ ಪಕ್ಷ ಮಾವೋವಾದಿಯಲ್ಲ

ಮಾವೋವಾದಿಗಳೆಂದು ಹೆಸರಿಸಿಕೊಂಡ ಈ ಪಕ್ಷದ ಪ್ರಧಾನ ಸಿದ್ಧಾಂತವು ಪೀಪಲ್ಸ್ ವಾರ್ (ಜನತಾ ಯುದ್ಧ) ಎಂಬ ಹೆಸರಿನಲ್ಲಿ 60ರ ದಶಕದಲ್ಲಿ ಲಿನ್ ಪಿಯಾವೊ ಎಂಬಾತ ನೀಡಿದ ಘೋಷಣೆ. ಇದು ಮಾವೋರವರು ತಮ್ಮ ಕೊನೆಗಾಲದಲ್ಲಿ ಎಸಗಿದ ತಪ್ಪುಗಳ ಸಂದರ್ಭದಲ್ಲಿ ಲಿನ್ ಪಿಯಾವೊ ಹುಟ್ಟಿಸಿದ



ನಕ್ಸಲೀಯರಿಂದ ವಶಪಡಿಸಿಕೊಂಡ ಶಸ್ತ್ರಾಸ್ತ್ರಗಳು

ವಾದ. ಹೀಗಾಗಿ. ಚೀನಾದ ಕ್ರಾಂತಿಗೆ ಕಾರಣವಾದ ಮಾವೊ ಚಿಂತನೆಯ ದಾರಿಗೆ ಪೂರ್ಣವಾಗಿ ವಿರೋಧವಾದದ್ದು. ತಮ್ಮ ಕ್ರಾಂತಿಯ 15 ವರ್ಷಗಳ ನಂತರ ಹುಟ್ಟಿದ್ದು. ಇದನ್ನು ತಮ್ಮ ಪ್ರಧಾನ ಸಿದ್ಧಾಂತವಾಗಿಸಿಕೊಂಡ ಈ ಬಣಗಳು ಕ್ರಾಂತಿಪೂರ್ವದ ಚೀನಾದ ಸ್ಥಿತಿಯೇ ಭಾರತದ ಸ್ವಾತಂತ್ರ್ಯಾನಂತರದ 57 ವರ್ಷಗಳ ತರುವಾಯವೂ ಇದೆಯೆಂದೂ ಭಾರತದಲ್ಲಿ ಸ್ವತಂತ್ರ ಕೈಗಾರಿಕಾ ಬೆಳವಣಿಗೆಯೇ ಇಲ್ಲವೆಂದೂ, ಭಾರತ ಇಂದು ಕೇವಲ ಅರೆ ವಸಾಹತು ಹಾಗೂ ಅರೆಪಾಳೆಯಗಾರಿ ವ್ಯವಸ್ಥೆ ಎಂದೂ ಇಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯೇ ಆಗಿಲ್ಲವೆಂದು ನಂಬಿದ್ದಾರೆ. ಇದು 'ವಾಸ್ತವ ಸಂಗತಿಗಳಿಂದ ಸತ್ಯವನ್ನು ಅನ್ವೇಷಿಸಿ' (Seek Truth From Facts) ಎನ್ನುವ ಮಾವೋ ಸಿದ್ಧಾಂತದ ಹೃದಯಕ್ಕೆ ಹಾಗೂ ಪ್ರತಿಯೊಂದು ದೇಶಕ್ಕೂ, ಪ್ರದೇಶಕ್ಕೂ ತನ್ನದೇ ಆದ ವಿಶಿಷ್ಟತೆ ಇರುತ್ತದೆ. ಅದಕ್ಕೆ ಅನುಗುಣವಾಗಿ ಅಲ್ಲಿಯ ಸಾಮಾಜಿಕ ಪರಿವರ್ತನೆಯ ಹಾದಿ ರೂಪುಗೊಳ್ಳಬೇಕಾಗುತ್ತದೆ ಎಂಬ ಅವರ ಚಿಂತನೆಗೆ ಪೂರ್ಣವಾಗಿ ವಿರೋಧವಾದದ್ದು. ಆದ್ದರಿಂದ ಮಾವೋವಾದಿ ಪಕ್ಷ ಎಂಬುದು ಮಾವೋವಾದಿಯಲ್ಲ.

ಇದೇ ರೀತಿ ಮಾರ್ಕ್ಸ್ ಮತ್ತು ಲೆನಿನ್‌ರವರ ಸಿದ್ಧಾಂತಗಳನ್ನು ತಿರುಚುತ್ತಿರುವ ಹಾಗೂ ಅವುಗಳಿಗೆ ಕೆಟ್ಟ ಹೆಸರು ತರುತ್ತಿರುವ ಇವರು ಮಾರ್ಕ್ಸ್ ಹಾಗೂ ಲೆನಿನ್‌ವಾದಿಗಳೂ ಅಲ್ಲ.

ಪ್ರಜಾಪ್ರಭುತ್ವಕ್ಕೆ ವಿರೋಧ ಸಶಸ್ತ್ರ ಕ್ರಾಂತಿಯ ಘೋಷಣೆ ಮತ್ತು ಅದರಿಂದ ಪ್ರಜಾಸತ್ತಾತ್ಮಕ ಚಳುವಳಿಗಳಿಗೆ ಹಾಗೂ ಪ್ರಜಾಪ್ರಭುತ್ವಕ್ಕಾಗುವ ಅಪಾಯ

ಮೇಲೆ ವಿವರಿಸಿದಂತೆ ಭಾರತದ ಇಂದಿನ ಪರಿಸ್ಥಿತಿಯನ್ನು ತಪ್ಪಾಗಿ ಅರ್ಥೈಸಿಕೊಂಡ ಇವರು ಭಾರತದಲ್ಲಿ ಪ್ರಜಾಪ್ರಭುತ್ವವೇ ಇಲ್ಲ, ಆದ್ದರಿಂದ ಚುನಾವಣೆಗಳಲ್ಲಿ ಭಾಗವಹಿಸುವುದಿಲ್ಲ ಎನ್ನುತ್ತಾರೆ. ಮಾತ್ರವಲ್ಲ ಮತದಾರರು ಚುನಾವಣೆಗಳನ್ನು ಬಹಿಷ್ಕರಿಸಬೇಕು ಎಂದು ಕರೆಕೊಡುತ್ತಾರೆ. ತಾವು ಪ್ರಬಲವಾಗಿರುವ ನೆಲೆಗಳಲ್ಲಿ (ಇತ್ತೀಚೆಗೆ ಝಾರ್ಖಂಡ್ ರಾಜ್ಯದಲ್ಲಿ) ಚುನಾಣೆಗಳು ನಡೆಯದಂತೆ ಅಡ್ಡಿ ಉಂಟುಮಾಡಿದರು. ವಿವಿಧ ರಾಜಕೀಯ ಪಕ್ಷಗಳು ಚುನಾವಣೆ ಪ್ರಚಾರ ನಡೆಸಲು ಅವಕಾಶ ನೀಡುವುದಿಲ್ಲ, ಬಂದೂಕಿನ ಬಲದಿಂದ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನು ಹತ್ತಿಕ್ಕುತ್ತಾರೆ. ಕೆಲವು ನಕ್ಸಲೀಯರ ಗುಂಪುಗಳು ಈ ಮಾರ್ಗ ಸರಿಯಿಲ್ಲವೆಂಬುದನ್ನು ಕಂಡುಕೊಂಡಿದ್ದಾರೆ ಮತ್ತು ಚುನಾವಣೆಯಲ್ಲಿ ಭಾಗವಹಿಸುತ್ತಿದ್ದಾರೆ.

ಭಾರತದ ಪ್ರಜಾಪ್ರಭುತ್ವದಲ್ಲಿ ಅನೇಕ ಕೊರತೆಗಳಿದ್ದರೂ ನಮ್ಮ ದೇಶದ ಜನತೆ ಲಭ್ಯವಿರುವ ಪ್ರಜಾಪ್ರಭುತ್ವದ ಹಕ್ಕುಗಳನ್ನು ಬಳಸಿ ತುರ್ತುಪರಿಸ್ಥಿತಿಯನ್ನು, ಜನವಿರೋಧಿ ಸರ್ಕಾರಗಳನ್ನು ಸೋಲಿಸಿದ್ದಾರೆ. ಇತ್ತೀಚೆಗೆ ಕೋಮುವಾದಿಗಳ ಕೂಟವನ್ನು ಸೋಲಿಸಿ ತಮ್ಮ ಪ್ರಜ್ಞಾವಂತಿಕೆಯನ್ನು ಮೆರೆದಿದ್ದಾರೆ. ಈ ಹಕ್ಕುಗಳನ್ನು ಬಳಸಿಕೊಂಡ ಅನೇಕ ಚಳುವಳಿಗಳನ್ನು ಬೆಳೆಸಿದ್ದಾರೆ. ಸರ್ಕಾರದ ನೀತಿಗಳ ವಿರುದ್ಧ, ಶೋಷಕರ ವಿರುದ್ಧ ಹೋರಾಟಗಳನ್ನು ನಡೆಸಿದ್ದಾರೆ ಎಂಬುದನ್ನು ನಕ್ಸಲೀಯರು ಮರೆಯುತ್ತಾರೆ. ಹೀಗೆ ಇವರು ಪ್ರಬಲವಾಗಿರುವ ಸೀಮಿತ ಪ್ರದೇಶಗಳಲ್ಲಿಯೂ ಕೂಡ ಜನಬೆಂಬಲವಿದೆಯೇ, ಅಥವಾ ಜನ ಹೆದರಿ ಸುಮ್ಮನಿದ್ದಾರೆಯೇ ಎಂಬುದು ಅಳತೆಗೆ ಸಿಗದೆ ಹೋಗುತ್ತದೆ. ಇನ್ನೊಂದು ಕಡೆ ಪ್ರಜಾಪ್ರಭುತ್ವವನ್ನು ರೂಪಿಸುವ ಜನರ ಪ್ರಜ್ಞೆಯನ್ನು ಎತ್ತರಿಸುವ, ಪ್ರಜಾಪ್ರಭುತ್ವದಲ್ಲಿ ಅವರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಆ ಮೂಲಕ ಪ್ರಜಾಪ್ರಭುತ್ವವನ್ನು ಆಳಗೊಳಿಸುವ, ವಿಸ್ತರಿಸುವ ಮಾರ್ಗಕ್ಕೆ ಬದಲಾಗಿ ಪ್ರಜಾಪ್ರಭುತ್ವ ಸಂಕುಚಿತಗೊಳ್ಳುತ್ತದೆ.

ಬಿಜೆಪಿಯ ಆರ್ಭಟದ ಉದ್ದೇಶ

ಆಳುವವರ್ಗಗಳು ಪ್ರಜಾಪ್ರಭುತ್ವವನ್ನೇ ನಾಶ ಮಾಡಲು ತಮ್ಮ ನಿರಂಕುಶ ದರ್ಬಾರಿಗೆ ಪ್ರಜಾಪ್ರಭುತ್ವವೆಂಬ ಕಿರಿಕಿರಿಯನ್ನು ತಪ್ಪಿಸಿಕೊಳ್ಳಲು ನಕ್ಸಲ್ ಚಳುವಳಿಗಳ ಬೆಳವಣಿಗೆಯನ್ನೇ ನೆಪವಾಗಿಸಿಕೊಳ್ಳುತ್ತಾರೆ. ಪ್ರಜಾಸತ್ತಾತ್ಮಕ ಚಳುವಳಿಗಳ ಮೇಲೂ ತಮ್ಮ ಧಾಳಿಯನ್ನು ಹರಿಯಬಿಡುತ್ತಾರೆ. ನಮ್ಮ ರಾಜ್ಯದಲ್ಲಿಯೂ ಬಿಜೆಪಿ ಇಂದು ಸಾಧಿಸಬಯಸುತ್ತಿರುವ ಗುರಿ ಅದೇ ಆಗಿದೆ. ನಕ್ಸಲೀಯರ ನೆಪದಲ್ಲಿ ಪ್ರಜಾಪ್ರಭುತ್ವವಾದಿಗಳ ಹಾಗೂ ಸೆಕ್ಯೂಲರ್‌ವಾದಿಗಳ ಮೇಲೆ ಹರಿಹಾಯಲು ಪ್ರಯತ್ನಿಸುತ್ತಿದೆ. ಪೊಲೀಸು ಪಡೆಗಳಲ್ಲಿ ತಮಗೆ ಬೆಂಬಲವನ್ನು ಗಿಟ್ಟಿಸಿಕೊಳ್ಳಲು ಆ ಮೂಲಕ ಕೋಮುವಾದಿ ಚಟುವಟಿಕೆಗಳಲ್ಲಿ ಅವರ ಸಹಕಾರ ಪಡೆಯಲು ಪ್ರಯತ್ನಿಸುತ್ತಿದೆ.

ನೇಪಾಳದಲ್ಲಿ ಇಂದು ಆಗಿರುವ ಸಂಸತ್ ವಿಸರ್ಜನೆಯೂ ಇದೇ ಪ್ರಕ್ರಿಯೆಯ ಮುಂದುವರಿದ ಭಾಗವಾಗಿದೆ. ಹೀಗೆ ಪ್ರಜಾಪ್ರಭುತ್ವವನ್ನು ಜನತೆ ಒಂದು ಸಾಧನವಾಗಿ ಬಳಸಿಕೊಳ್ಳುವುದನ್ನು ತಪ್ಪಿಸಲು ಅಲ್ಲಿಯ ಮಾವೋವಾದಿ ಚಳುವಳಿಯೂ ಹೊಣೆಗಾರನಾಗಿದೆ.

ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಬೆಳೆಸಲು ಮಾವೋವಾದಿಗಳೆಂಬ ಈ ಸಂಘಟನೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಬೇಕಾಗಿದೆ. ಇದನ್ನು ಪ್ರಜಾಸ್ತತೆಯ ಪ್ರೇಮಿಗಳೆಲ್ಲರೂ ಮಾಡಬೇಕು.

ಸಶಸ್ತ್ರ ಕ್ರಾಂತಿ ಘೋಷಣೆಯ ಅಪಾಯಗಳು

ಮಾವೋವಾದಿಗಳೆಂದು ಹೇಳಿಕೊಳ್ಳುತ್ತಿರುವವರು 'ಸಶಸ್ತ್ರ ಕ್ರಾಂತಿ ಜನತಾ ಯುದ್ಧ' ವೆಂಬ ಹೆಸರನಲ್ಲಿ ನಡೆಸುತ್ತಿರುವುದು ಕೆಲವೇ ಜನ ಯುವಕ-ಯುವತಿಯರ ಗುಂಪುಗಳಿಂದ ವೈಯಕ್ತಿಕ ಕೊಲೆಗಳಷ್ಟೇ ಹೊರತು ಯಾವ ಜನತಾಯುದ್ಧವೂ ಅಲ್ಲ. ಈ ರೀತಿಯ ವೈಯಕ್ತಿಕ ಬೆದರಿಕೆ ಹಾಗೂ ಕೊಲೆಗಳಿಂದ ಜನತೆಯಲ್ಲಿ ಮೂಡುತ್ತಿರುವ ಪ್ರಜಾಸತ್ತಾತ್ಮಕ ಎಚ್ಚರಕ್ಕೆ ಅಪಾರ ಹಾನಿಯುಂಟಾಗುತ್ತದೆ. ಕೇವಲ ಕೆಲವು ವ್ಯಕ್ತಿಗಳು ಮಾತ್ರವೇ ಇಂದಿನ ಸಂಕಷ್ಟಕ್ಕೆ ಕಾರಣ, ಅವರನ್ನು ಬಲಿ ಹಾಕಿಬಿಟ್ಟರೆ ಎಲ್ಲ ಸಮಸ್ಯೆಗಳೂ ಪರಿಹಾರವಾಗುತ್ತವೆ ಎಂಬ ಭ್ರಮೆಯನ್ನು ಮೂಡಿಸುತ್ತವೆ. ಸಮಸ್ಯೆಗಳಿಗೆ ಕಾರಣವಾದ ಶೋಷಕ ವ್ಯವಸ್ಥೆಯನ್ನು ತೆಗೆದುಹಾಕಬೇಕು ಎಂಬ ತಿಳುವಳಿಕೆಯನ್ನು ಮಸಳಿಸಿಬಿಡುತ್ತದೆ. ಇದರಿಂದಾಗಿ ಮೂಡಿದ ಪ್ರಜಾಸತ್ತಾತ್ಮಕ ಎಚ್ಚರ ದಿಕ್ಕು ತಪ್ಪಿದಂತಾಗುತ್ತದೆ.

ಇದು ಒಂದೆಡೆಯಾದರೆ 'ಮತ್ತೊಂದೆಡೆ ಶಸ್ತ್ರಧಾರಿಗಳಾದ, ಪ್ರಾಣ ತ್ಯಾಗಕ್ಕೂ ಸಿದ್ಧರಾಗಿರುವ ಕೆಲವರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಬಿಡುತ್ತಾರೆ. ನಾವು ಹೆಚ್ಚೇನೂ ಮಾಡಬೇಕಾಗಿಲ್ಲ, ಅವರಿಗೆ ಅನುಕೂಲಗಳನ್ನು ಒದಗಿಸಿದಷ್ಟೇ ಸಾಗು ಎನ್ನುವ ಭಾವನೆ ಸಂಬಂಧಪಟ್ಟ ಜನರಲ್ಲಿ ಮೂಡುತ್ತದೆ. ಅವರ ಪ್ರಜಾಸತ್ತಾತ್ಮಕ ಚಳುವಳಿಗಳ ಮೂಲಕ ಹೆಚ್ಚು ಹೆಚ್ಚು ಕ್ರಿಯಾಶೀಲವಾಗುವ ಬದಲಿಗೆ ನಿಷ್ಕ್ರಿಯರಾಗುತ್ತಾರೆ. ಪ್ರಜಾಸತ್ತಾತ್ಮಕ ಎಚ್ಚರ ಕಮರಿಹೋಗುತ್ತದೆ. ಆದಿವಾಸಿಗಳ ಅರಣ್ಯದಿಂದ ಒಕ್ಕಲೆಬ್ಬಿಸಲ್ಪಡುತ್ತಿರುವವರ ವಿಷಯದಲ್ಲಿ ಹಾಗೂ ರಾಯಚೂರಿನ ಭೂಮಾಲಕರ ಕೊಲೆಗಳನ್ನೆಸಗುವ ಸಂದರ್ಭದಲ್ಲಿಯೂ ನೀತಿ-ರೀತಿ ಸ್ಪಷ್ಟವಾಗಿದೆ. ತುಂಗಮೂಲ ಬಗ್ಗೆ ಬೆಂಗಳೂರು -ಮೈಸೂರು ಕಾರಿಡಾರ್ ಬಗ್ಗೆ ಬಹಿರಂಗ ಚಳುವಳಿ, ಆದಿವಾಸಿಗಳ ಪ್ರಶ್ನೆ ಬಗ್ಗೆ, ಭೂಸುಧಾರಣೆ ಬಗ್ಗೆ ಆ ಜನರನ್ನು ಅಣಿನೆರೆಸಿದ, ಬಹಿರಂಗವಾಗಿ ಈ ಪ್ರಶ್ನೆಗಳನ್ನೆತ್ತಿದ ಪ್ರಬಲ ಚಳುವಳಿ ಹೂಡಿದ ಉದಾಹರಣೆಯೇ ಇಲ್ಲ. ಇದು ಕೂಡಾ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗೂ ಸಮಾಜದ ಪರಿವರ್ತನೆಗೂ ದೊಡ್ಡ ಹಾನಿಯನ್ನುಂಟುಮಾಡುತ್ತದೆ.

ಶಸ್ತ್ರಗಳನ್ನು ಉಪಯೋಗಿಸುವುದು ಮಾತ್ರ ಕ್ರಾಂತಿಕಾರಿ ಎಂಬುದೇ ತಪ್ಪು ತಿಳುವಳಿಕೆ. ಪ್ರಜಾಪ್ರಭುತ್ವೀಯ ಹಕ್ಕುಗಳನ್ನು ಸಂಸ್ಥೆಗಳನ್ನು ಉಪಯೋಗಿಸುವ ವಿಷಯದಲ್ಲಿ ಹಿಂಸಾತ್ಮಕ, ಅಹಿಂಸಾತ್ಮಕ ಮಾರ್ಗಗಳಿಗೆ ಸಂಬಂಧಿಸಿದ ವಿಷಯದಲ್ಲಿ ಸಿಪಿಐ(ಎಂ) ನ ಅಭಿಪ್ರಾಯ ಹೀಗಿದೆ-

ಸಂಸದೀಯ ವ್ಯವಸ್ಥೆಗೆ ಮತ್ತು ಪ್ರಜಾಪ್ರಭುತ್ವಕ್ಕೆ ದುಡಿಯುವ ಜನಗಳಿಂದ ಮತ್ತು ಅವರ ಪಕ್ಷಗಳಿಂದ ಬೆದರಿಕೆ ಬರುವುದಿಲ್ಲ. ಜನತೆ ತಮ್ಮ ಗುರಿ ಸಾಧನೆಯಲ್ಲಿ ಮುನ್ನಡೆ ಸಾಧಿಸಲು ಸಂಸದೀಯ ಸಂಸ್ಥೆಗಳನ್ನು ಉಪಯೋಗಿಸಲು ಸಮರ್ಥವಾಗಿ ಬಳಸಲಾರಂಭಿಸಿದರೆ, ಆಳುವವರ್ಗಗಳ ಪಕ್ಷಗಳ ಪ್ರಭಾವದಿಂದ ದೂರ ಸರಿದರೆ ಆಗ ಶೋಷಕ ವರ್ಗಗಳೇ ಸಂಸದೀಯ ವ್ಯವಸ್ಥೆಗೆ ಹಾನಿಯುಂಟು ಮಾಡುತ್ತಾರೆ. ತುರ್ತುಪರಿಸ್ಥಿತಿ ಹೇರಿಕೆ, ಪ.ಬಂಗಾಳ,ಕೇರಳ ಸರ್ಕಾರಗಳನ್ನು ಇತರೇ ರಾಜ್ಯ ಸರ್ಕಾರಗಳ ವಜಾ ಇದಕ್ಕೆ ಕೆಲವು ಉದಾಹರಣೆಗಳು.

"ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ವು ಜನತಾ ಪ್ರಜಾಪ್ರಭುತ್ವವನ್ನು ಮತ್ತು ಸಮಾಜವಾದಿ ಪರಿವರ್ತನೆಯನ್ನು ಶಾಂತಿಯುತ ವಿಧಾನದ ಮೂಲಕ ಸಾಧಿಸಲು ಶ್ರಮಿಸುತ್ತದೆ. ಒಂದು ಶಕ್ತಿಯುತವಾದ ಸಾಮೂಹಿಕ ಕ್ರಾಂತಿಕಾರಿ ಚಳುವಳಿಯನ್ನು ಬೆಳೆಸುವ ಮೂಲಕ, ಸಂಸದೀಯ ಮತ್ತು ಸಂಸದೀಯೇತರ ಸ್ವರೂಪದ ಹೋರಾಟಗಳನ್ನು ಜೋಡಿಸುವುದರ ಮೂಲಕ, ಪ್ರತಿಗಾಮಿ ಶಕ್ತಿಗಳ ಪ್ರತಿರೋಧವನ್ನು ಸೋಲಿಸಲು ಮತ್ತು ಈ ಪರಿವರ್ತನೆಗಳನ್ನು ಶಾಂತಿಯುತ ವಿಧಾನಗಳ ಮೂಲಕ ಅನುಷ್ಠಾನಕ್ಕೆ ತರಲು ಕಾರ್ಮಿಕ ವರ್ಗ ಮತ್ತು ಅದರ ಮಿತ್ರ ವಿಭಾಗಗಳು ಶಕ್ತಿಮೀರಿ ಪ್ರಯತ್ನಿಸುವವು. ಆದರೆ ಆಳುವ ವರ್ಗಗಳು ಸ್ವಯಂಪ್ರೇರಣೆಯಿಂದ ನಮ್ಮ ಅಧಿಕಾರವನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ಜನತೆಯ ಇಚ್ಛೆಯನ್ನು ಧಿಕ್ಕರಿಸಿ, ಅದನ್ನು ಹಿಂಸೆಯಿಂದಲೂ ಕಾನೂನುಬಾಹಿರವಾದ ಅಕ್ರಮಗಳಿಂದಲೂ ಬದಲಿಸಲು ಅವು ಪ್ರಯತ್ನಿಸುತ್ತವೆ. ಆದ್ದರಿಂದ ಕ್ರಾಂತಿಕಾರಿ ಶಕ್ತಿಗಳು ಸದಾಕಾಲ ಎಚ್ಚರದಿಂದಿದ್ದು, ಯಾವುದೇ ಪರಿಸ್ಥಿತಿಯನ್ನು, ದೇಶದ ರಾಜಕೀಯ

ಎಸ್‌ಎಫ್‌ಐ 10ನೇ ರಾಜ್ಯ

ಶಿಕ್ಷಣ ರಂಗದ ಮೇಲಿನ ದಾಳಿಗಳು ಹಲವಾರು. ಈ ದಾಳಿಗಳ ವಿರುದ್ಧ ಸತತ ಸೆಣಸುತ್ತಾ, ಶಿಕ್ಷಣದ ಉಳಿವಿಗಾಗಿ ಅದರ ವ್ಯಾಪಾರೀಕರಣ ವಿರೋಧಿಸಿ ಪ್ರತಿಭೆ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವ ದಿಸೆಯಲ್ಲಿ ನಡೆದ ವಿದ್ಯಾರ್ಥಿ ಸಮ್ಮೇಳನದ ಕಲಾಪಗಳ ನೋಟ ಇಲ್ಲಿದೆ. ಭವಿಷ್ಯತ್ತಿನ ಆಶಾಕಿರಣಗಳಾಗಿರುವ ವಿದ್ಯಾರ್ಥಿ ಸಮುದಾಯ ನಡೆಸಿದ ಚಿಂತನ ಮಂಥನವೇನು?

ಸೆಪ್ಟೆಂಬರ್ 29, 2001 ರಿಂದ ಅಕ್ಟೋಬರ್ 1 2001 ರವರೆಗೆ ತುಮಕೂರಿನಲ್ಲಿ ನಡೆದ ಎಸ್ಎಫ್ಐ 9ನೇ ರಾಜ್ಯ ಸಮ್ಮೇಳನವು ಶೈಕ್ಷಣಿಕ - ಸಾಮಾಜಿಕ - ರಾಜಕೀಯ ಬೆಳವಣಿಗೆಗಳ ಬಗೆಗೆ ಮಾಡಿದ ವಿಮರ್ಶೆ ಅತ್ಯಂತ ಸಮರ್ಪಕ ಎಂಬುದು ಈ ಕೆಳಗಿನ ಮೂರುವರೆ ವರ್ಷಗಳ ಬೆಳವಣಿಗೆಯ ಮೂಲಕ ಸಾಬೀತಾಗಿದೆ.

ಗಾಢವಾಗುತ್ತಿರುವ ಜಾಗತೀಕರಣದ ಪ್ರಭಾವದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಆರಂಭಿಸಿ ಸಂಶೋಧನೆಯ ಹಂತದವರೆಗೆ ಎಲ್ಲಾ ಹಂತದ ಶಿಕ್ಷಣವೂ ತೀವ್ರ ವ್ಯಾಪಾರೀಕರಣ ಮತ್ತು ಖಾಸಗೀಕರಣದ ಧಾಳಿಗೆ ತುತ್ತಾಗಿವೆ. ಉನ್ನತ ಶಿಕ್ಷಣದ ಅಡಿಪಾಯವನ್ನು ಕಳಚಿ ಹಾಕುವ ವ್ಯವಸ್ಥಿತ ಧಾಳಿ ಉನ್ನತ ಶಿಕ್ಷಣದ ಮೇಲೆ ನಡೆದಿದೆ.

ಇದರ ಜೊತೆಗೆ ಗುಜರಾತ್ ರಾಜ್ಯದಲ್ಲಿ ನಡೆದ ಘೋರ ನರಮೇಧ - ಕೋಮುಗಲಭೆಗೆ ಪ್ರೇರಕವಾದ ಆರೆಸ್ಸೆಸ್‌ನ 'ಹಿಂದೂ ರಾಷ್ಟ್ರ'ದ ಎಲ್ಲಾ ವಿಕೃತ ವಿಚಾರಗಳೂ ಕರ್ನಾಟಕದ ಶಾಲಾ ಪಠ್ಯಗಳಲ್ಲಿ ತೂರಿ ಬಂದು ಶಿಕ್ಷಣ-ಕೋಮುವಾದೀಕರಣದ ಧಾಳಿಯನ್ನು ಕರ್ನಾಟಕದ ಶಿಕ್ಷಣ ರಂಗ ಅನುಭವಿಸಿದೆ.

ಜಾಗತೀಕರಣದ ಅಮಲಿನಲ್ಲಿರುವ ಕೇಂದ್ರ-ರಾಜ್ಯ ಸರ್ಕಾರಗಳೂ ನ್ಯಾಯಾಂಗ ವ್ಯವಸ್ಥೆ, ವಿದ್ಯಾರ್ಥಿ ಪೋಷಕರ ಮೇಲೆ ಹೇರಿರುವ ಸಂಕಟ ಅಪಾರ. ಅನುದಾನ ಕಡಿತ, ಸರ್ಕಾರಿ ಕಾಲೇಜು ಮುಚ್ಚುವ ನೀತಿ, ಬಜೆಟ್ ಕಡಿತ, ತೀವ್ರ ಶುಲ್ಕ ಏರಿಕೆ, ಶೈಕ್ಷಣಿಕ ಸೌಲಭ್ಯಗಳ ಕಡಿತ, ಶಿಕ್ಷಣ ಗುಣಮಟ್ಟ ಕುಸಿತ, ಅವೈಜ್ಞಾನಿಕ ನೀತಿಗಳು, ವಂತಿಗೆ ಸುಲಿಗೆ ಪ್ರವೃತ್ತಿಯಲ್ಲಿ ಹೆಚ್ಚಳ, ಶಿಕ್ಷಕರ ಕೊರತೆ, ಕಟ್ಟಡ-ಮೂಲಭೂತ ಸೌಕರ್ಯ ಕೊರತೆ ಇಂತಹ ಹಲವು ಸಮಸ್ಯೆಗಳು ಸಾಲುಗಟ್ಟಿ ಬಂದಿವೆ.

ಸವಾಲು ಸ್ವೀಕಾರ

ಸಂದರ್ಭದ ಸವಾಲುಗಳನ್ನು ಸ್ವೀಕರಿಸಿ ಸಂಘಟನೆಯು ಸಮಸ್ಯೆಗಳ ವಿರುದ್ಧ ಸೆಣೆಸಿದೆ. ಗ್ರಾಮೀಣ ಪ್ರದೇಶದಲ್ಲಿ 15 ವರ್ಷ, ನಗರ ಪ್ರದೇಶದಲ್ಲಿ 10 ವರ್ಷಗಳ ಕಾಲ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ಕಡಿತಗೊಳಿಸುವ ನೀತಿಯನ್ನು ಎಸ್ಎಫ್ಐ ನೇತೃತ್ವದಲ್ಲಿ

ಜಾಗತೀಕರಣದಿಂದ ಸಂವಿಧಾನದ ಆಶಯಕ್ಕೆ ಕೊಡಲಿಪೆಟ್ಟು

'ಜಾಗತೀಕರಣ ಪ್ರೇರಿತ ಆರ್ಥಿಕ ನೀತಿಗಳಿಂದಾಗಿ ಶಿಕ್ಷಣದ ಸಾರ್ವತ್ರೀಕರಣದ ಆಶಯ ಸೇರಿದಂತೆ ಸಂವಿಧಾನದ ಜನಪರ ಆಶಯಗಳಿಗೆ ಕೊಡಲಿಪೆಟ್ಟು ಬಿದ್ದಿದೆ' ಎಂದು ಖ್ಯಾತ ಬಂಡಾಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ಅಭಿಪ್ರಾಯ ಪಟ್ಟರು. ಅವರು ಬೆಂಗಳೂರಿನ ಸೆನೆಟ್‌ಹಾಲ್‌ನಲ್ಲಿ ಏರ್ಪಡಿಸಿದ್ದ ಮೂರು ದಿನಗಳ 10ನೇ ರಾಜ್ಯ ಎಸ್‌ಎಫ್‌ಐ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

'ಸಾವಿರಾರು ವರ್ಷಗಳಿಂದ ವರ್ಣಾಶ್ರಮ ಧರ್ಮದ ಭಾಗವಾಗಿರುವ ಜಾತಿ ವ್ಯವಸ್ಥೆ ಎಂಬ ಸಾಮಾಜಿಕ ದುರಾಕ್ರಮಣದಿಂದಾಗಿ ಶಿಕ್ಷಣ ವಂಚಿತರಾಗಿದ್ದ ಬಹುಸಂಖ್ಯಾತ ದಲಿತರು ಶಿಕ್ಷಣದಿಂದ ವಂಚನೆಗೊಳಗಾಗಬೇಕಾದ ದುರಂತ ಎದುರಾಗಿದೆ' ಎಂದರು.

ಸಾರ್ವತ್ರಿಕ ಶಿಕ್ಷಣ ಪದ್ಧತಿ ಪ್ರಾರಂಭವಾಗಿ ಒಂದು ತಲೆಮಾರು ಕಳೆಯುವ ಹೊತ್ತಿಗೆ ಶಿಕ್ಷಣದ ವ್ಯಾಪಾರೀಕರಣ ಪೆಡಂಭೂತವಾಗಿ ಬೆಳೆದು ಕೆಳವರ್ಗದ ಜನರಲ್ಲಿ ಶಿಕ್ಷಣ ಪಡೆಯಬೇಕೆಂಬ ತಿಳುವಳಿಕೆ ಮೂಡಿಬರುತ್ತಿರುವಾಗಲೇ ಅವರ ಆಕಾಂಕ್ಷೆಗಳನ್ನು ಹತ್ತಿಕ್ಕಿ ಮತ್ತೆ ಗುಲಾಮಗಿರಿಗೆ ತಳ್ಳಲಾಗುತ್ತಿದೆ. ಇದರ ವಿರುದ್ಧ ವಿದ್ಯಾರ್ಥಿಗಳ ಹೋರಾಟ ರೂಪಿಸಬೇಕು ಎಂದು ಅವರು ತಿಳಿಸಿದರು.

ಆದ್ಯತೆಗಳ ಪಲ್ಲಟ

ಜಾಗತೀಕರಣದಂತಹ ನೀತಿಗಳ ಕಾರಣದಿಂದಾಗಿ ರೈತರು, ಕೂಲಿಕಾರರು, ಕಾರ್ಮಿಕರ ಬವಣೆಗಳು ಹೆಚ್ಚಾಗಿರುವ ಸಂದರ್ಭದಲ್ಲಿ ಕೋಮುವಾದಿಗಳು ಜನರ ನಿಜವಾದ ಸಮಸ್ಯೆಗಳು ಪ್ರಧಾನವಾಗಿ ಚರ್ಚೆಯಾಗದಂತೆ ತಡೆಯಲು ಮಸೀದಿ, ಗುಡಿ, ಚರ್ಚ್‌ಗಳ ವಿಷಯವನ್ನು ಮುಂದುಮಾಡುತ್ತಿದ್ದಾರೆ. ಇಂತಹ ಪಿತೂರಿಯನ್ನು



ಡಾ.ಹೆಚ್.ನರಸಿಂಹ ವೇದಿಕೆಯಲ್ಲಿ ಸಮ್ಮೇಳನ ಉದ್ಘಾಟಿಸಿ ಮಾತನಾಡುತ್ತಿರುವ ಬರಗೂರು ರಾಮಚಂದ್ರಪ್ಪನವರು

ಯಶಸ್ವಿಯಾಗಿ ಹಿಮ್ಮೆಟ್ಟಿಸುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದರು.

ಯುಪಿಎ ಸರ್ಕಾರ ಎಡಪಕ್ಷಗಳ ಬೆಂಬಲದಿಂದ ಮಾತ್ರವೇ ಉಳಿದಿದೆ. ಆ ಕಾರಣಕ್ಕಾಗಿ ಯುಪಿ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಕೆಲವು ಜನ ಅಂಶಗಳ ಸೇರ್ಪಡೆಯಾಗಿವೆ. ಈ ಅಂಶ ಜಾರಿಗಾಗಿ ವಿಶೇಷವಾಗಿ ಶಿಕ್ಷಣಕ್ಕೆ ಹೆಚ್ಚು ಹ ನೀಡುವಂತೆ ವಿದ್ಯಾರ್ಥಿಗಳನ್ನು ಬೃಹ ಪ್ರಮಾಣದಲ್ಲಿ ಅಣಿನೆರೆಸಿ ಸರ್ಕಾರದ ಮೇ ಗಂಭೀರವಾದ ಒತ್ತಡ ಹೇರಬೇಕು ಎಂದು ಅವ ಸಲಹೆ ನೀಡಿದರು.

ತಾರತಮ್ಯ ಬೇಡ - ಕುಲಪತಿ ಡಾ. ತಿಮ

ಮುಖ್ಯಅತಿಥಿಗಳಾಗಿ ಮಾತನಾ ಬೆಂಗಳೂರು ವಿ.ವಿ. ಕುಲಪತಿಗಳಾದ ಡ ಎಂ.ಎಸ್. ತಿಮ್ಮಪ್ಪನವರು ಕೆಲವ ಉತ್ಕೃಷ್ಟಗೊಳಿಸಲು ಸಾಮಾನ್ಯಶಿಕ್ಷ ಸಂಶೋಧನೆಗಳನ್ನು ನಿರ್ಲಕ್ಷಿಸುವು ದೇಶದ ಅಭಿವೃದ್ಧಿ ದೃಷ್ಟಿಯಿಂದ ಸರಿಯ ತಾರತಮ್ಯವಿಲ್ಲದೆ ಎಲ್ಲಾ ಕಾಲೇಜುಗ ಅನುದಾನ ನೀಡಬೇಕು. ವಿ.ವಿ.ಗಳ ಶೈಕ್ಷಣಿಕವಾಗಿ ಸ್ವಾಯತ್ತತೆಯ ಬಲಪಡಿಸುವ ಜೊತೆಗೆ ಹಣಕಾಸಿನ ನೆ ನೀಡಬೇಕಾದ್ದು ಜನರಿಂದ ಆಯ್ಕೆಯಾ ಸರ್ಕಾರಗಳ ಕರ್ತವ್ಯ. ಇಂತ ಕರ್ತವ್ಯಗಳಿಗೆ ವಿರುದ್ಧವಾಗಿರುವ ನೀತಿಗಳ ವಿರೋಧಿಸಬೇಕು ಎಂದು ಅವರು ತಿಳಿಸಿದರು.

ಶಿಕ್ಷಣದ ಕೋಮುವಾದೀಕರಣ ವಿರೋಧಿಸಬೇಕು

ವಿದ್ಯಾರ್ಥಿ ಸಮ್ಮೇಳನದ ಮಂಥನ-ಭವಿಷ್ಯದ ಗುರಿಗಳ ಪುನ

ಹೋರಾಟಗಳು - ಸಂಘಟನೆ ವಿಸ್ತರಣೆ - ಕ್ರೋಢೀ

ರಾಜ್ಯವ್ಯಾಪಿಯಾಗಿ ತೀವ್ರವಾಗಿ ಪ್ರತಿಭಟಿಸಲಾಯಿತು. ಅಂತಿಮವಾಗಿ ಸರ್ಕಾರ ಈ ನೀತಿಯನ್ನು ವಾಪಸ್ ಪಡೆಯಬೇಕಾಯಿತು.

ಸರ್ಕಾರಿ ಕಾಲೇಜುಗಳನ್ನು ಮುಚ್ಚಿಹಾಕುವ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಹೆಚ್ಚಿನ ಕಾಲೇಜುಗಳನ್ನು ಮುಚ್ಚದಂತೆ ಉಳಿಸಿಕೊಳ್ಳಲು ಸಾಧ್ಯವಾಯಿತು. ಮಂಗಳೂರು ವಿ.ವಿ. ಪದವಿ ಶುಲ್ಕ ಏರಿಕೆಯನ್ನು, ಗುಲ್ಬರ್ಗಾ ವಿ.ವಿ. ಘಟಿಕೋತ್ಸವ ಶುಲ್ಕ ಏರಿಕೆಯನ್ನು ಪ್ರತಿಭಟನೆಯ ಮೂಲಕ ಹಿಮ್ಮೆಟ್ಟಿಸಲಾಯಿತು. ಅದೇ ರೀತಿ ಐಟಿಐ ಶುಲ್ಕ ಏರಿಕೆ, ಬಸ್ ಪಾಸ್ ದರ ಏರಿಕೆಯ ವಿರುದ್ಧ ಚಳುವಳಿ ನಡೆದು ಪೂರ್ಣ ಪರಿಹಾರವಲ್ಲದಿದ್ದರೂ ಭಾಗಶಃ ಶುಲ್ಕ ಏರಿಕೆಗಳು ವಾಪಸ್ಸಾಗಿವೆ.

ವೃತ್ತಿ ಶಿಕ್ಷಣ ಬಿಕ್ಕಟ್ಟಿನಲ್ಲಿ ತನ್ನ ಅತ್ಯಂತ ವೈಜ್ಞಾನಿಕ ಜನಪರ ನಿಲುವಿನಿಂದಾಗಿ ಮತ್ತು ಸಾಮೂಹಿಕ ಬೃಹತ್ ಚಳುವಳಿಯಿಂದಾಗಿ, ವಿದ್ಯಾರ್ಥಿ ಪೋಷಕ ಸಮುದಾಯಕ್ಕೆ ಬಹುದೊಡ್ಡ ಪರಿಹಾರ ಒದಗಿಸುವುದು ಸಾಧ್ಯವಾಗಿದೆ. ತಾಂತ್ರಿಕ-ವೈದ್ಯಕೀಯ ವಿಭಾಗ ಶೇ 30 ರಷ್ಟು ಉಚಿತ ಸೀಟುಗಳು ಕ್ರಮವಾಗಿ ಶೇ 75 ಮತ್ತು ಶೇ 60 ರಷ್ಟು ಪ್ರವೇಶ ಸರ್ಕಾರಿ ಸಿಇಟಿ ಮೂಲಕ ಆಗಿರುವುದು ಪ್ರಸ್ತುತ ಸನ್ನಿವೇಶದಲ್ಲಿ ಕಡಿಮೆ ಸಾಧನೆಯೇನಲ್ಲ. ಬೇರೆ ಯಾವ ಸಂಘಟನೆಯೂ ಈ ಪ್ರಶ್ನೆಯನ್ನು ಎತ್ತದಿದ್ದರೂ, ಈ ಬೇಡಿಕೆಯನ್ನು

ಆರ್.ರಾಮಕೃಷ್ಣ

ತಿರಸ್ಕರಿಸಿದರೂ ಸಹ ಎಸ್ಎಫ್ಐ ಹೊಸ ಸರ್ಕಾರಿ ವೈದ್ಯಕೀಯ-ತಾಂತ್ರಿಕ ಕಾಲೇಜುಗಳ ಸ್ಥಾಪನೆಯನ್ನು ಪ್ರತಿಪಾದಿಸಿತು. ಮುಂದಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದಲ್ಲಿ ಆರು ಹೊಸ ವೈದ್ಯಕೀಯ ಕಾಲೇಜುಗಳು ಆರಂಭವಾಗಲಿವೆ.

ಸಮಸ್ಯೆಯ ಶಾಶ್ವತ ಪರಿಹಾರ ಕ್ಕಾಗಿ ಒತ್ತಾಯಿಸಿ ಚಳುವಳಿ ಮುಂದು ವರೆದಿದೆ.

ಸ್ಥಳೀಯ ಸಮಸ್ಯೆಗಳ ಆಧಾರ ದಲ್ಲಿ ಹಲವಾರು ಜಿಲ್ಲೆಗಳಲ್ಲಿ ಹಲವು ಪ್ರಮುಖ ಹೋರಾಟಗಳು ನಡೆದಿವೆ. ಯಶಸ್ಸನ್ನು ಕಂಡಿವೆ. ಶಿಕ್ಷಣದ ಕೋಮುವಾದೀಕರಣದ ಪ್ರಶ್ನೆಯಲ್ಲಿ ಎಸ್ಎಫ್ಐನ ನಿರ್ಣಾಯಕ ಮಧ್ಯ ಪ್ರವೇಶದಿಂದಾಗಿ ವಿಕೃತ ಶಾಲಾ ಪಠ್ಯ ಪುಸ್ತಕಗಳು ರದ್ದಾಗಿ, ಹೊಸ ಪಠ್ಯಗಳನ್ನು ರೂಪಿಸಲಾಗಿದೆ.

ಎಸ್ಎಫ್ಐ ಸಂಘಟನೆ ಸ್ವತಂತ್ರವಾಗಿ ಹಾಗೂ ಎನ್‌ಪಿಎಂಓ ದ ಭಾಗವಾಗಿ WSF ನ ಭಾಗವಾಗಿ, ರೈತ-ಕಾರ್ಮಿಕ ಸಂಘಟನೆಗಳ ಸಖ್ಯತೆಯೊಂದಿಗೆ, ಜಾಗತೀಕರಣ ಹೊಸ ಆರ್ಥಿಕ ನೀತಿಗಳ ವಿರುದ್ಧ ನಡೆದಿರುವ ಹೋರಾಟಗಳು ಹಲವು. ವಿದ್ಯುತ್ ಸುಧಾರಣೆಯ ಹೆಸರಿನ ದುಷ್ಟ ನೀತಿಗಳ ವಿರುದ್ಧ ನಡೆದ ಪ್ರತಿಭಟನೆಗಳ ಪ್ರಮುಖವಾದವು.

ಅಫಘಾನಿಸ್ತಾನ-ಇರಾಕ್ ಮೇಲ ಸಾಮ್ರಾಜ್ಯಶಾಹಿ ಅಮೆರಿಕಾ ಮುಂತಾದ ಶಕ್ತಿಗಳ ನಡೆಸಿರುವ ಘೋರ ಆಕ್ರಮಣಗಳ ಸಾಮ್ರಾಜ್ಯಶಾಹಿ ನೀತಿಗಳ ವಿರುದ್ಧ ಹಲವ ಪ್ರಚಾರಾಂದೋಲನಗಳು ಈ ಅವಧಿಯಲ್ಲಿ ನಡೆದಿವೆ.

ಲೋಕಸಭಾ - ವಿಧಾನಸಭಾ ಚುನಾವಣೆಗಳು ಸೇರಿದಂತೆ ಹಲವು ರಾಜಕೀಯ ಪ್ರಶ್ನೆಗಳ ಮೇಲೆ ಸಹ ವ್ಯಾಪಕ ಪ್ರಚಾರಾಂದೋಲನವನ್ನು ನಡೆಸಲಾಗಿದೆ.



ಈ ಒಟ್ಟು ಚಳುವಳಿಗಳನ್ನು ಎಸ್ಎಫ್ಐನ ಮಧ್ಯ ಪ್ರವೇಶವನ್ನು ಕುರಿತು ರಾಜ ಸಮ್ಮೇಳನ ಚರ್ಚಿಸಿದೆ-ವಿಮರ್ಶಿಸಿದೆ. ಹಲವು ಪ್ರಶ್ನೆಗಳಲ್ಲಿ ಪರಿಣಾಮಕಾರಿ ಮಧ್ಯಪ್ರವೇಶ ಯಶಸ್ವಿ ಹೋರಾಟಗಳು ನಡೆಸಲಾಗಿದ್ದರು. ರಾಜ್ಯದ - ದೇಶದ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳಿಗೆ, ಗಂಭೀರ ಸವಾಲುಗಳಿಗೆ ತಕ್ಕಂತೆ ಎಸ್ಎಫ್ಐ ಮಧ್ಯ ಪ್ರವೇಶವು ಮತ್ತಷ್ಟು ಪರಿಣಾಮಕಾರಿಯಾಗಬೇಕು. ಮತ್ತಷ್ಟು ಚಳುವಳಿಗಳು ತೀವ್ರ ಸಂಘರ್ಷಗಳು ಮೂಡಿಬರಬೇಕೆಂದು ಸಮ್ಮೇಳನ ವಿಮರ್ಶಿಸಿದೆ.

ಹೊಸ ಹೊಸ ಸವಾಲುಗಳು

ರಾಜ್ಯ ಪದಾಧಿಕಾರಿಗಳು

ಅಧ್ಯಕ್ಷರು : **ಬಿ.ರಾಜಶೇಖರಮೂರ್ತಿ**

ಕಾರ್ಯದರ್ಶಿ: **ಹೆಚ್.ಆರ್.ನವೀನ್‌ಕುಮಾರ್**



ಉಪಾಧ್ಯಕ್ಷರು : ಮುನಿವೆಂಕಟಪ್ಪ, ವಿಜಯಕುಮಾರ ದೊಡ್ಡಮನಿ, ಯಶವಂತ, ನಿರುಪಾದಿ, ಮಮತಾ ನಾಯ್ಕ

ಸಹ ಕಾರ್ಯದರ್ಶಿಗಳು : ನಾಗರಾಜ, ಎಂ.ಎಸ್.ಹಡಪದ, ಅನಂತನಾಯ್ಕ, ಹುಳ್ಳಿ ಉಮೇಶ

ಇನ್ನೂ 35 ರಾಜ್ಯ ಸಮಿತಿ ಸದಸ್ಯರಿದ್ದು, ಒಟ್ಟು 53 ಸದಸ್ಯರನ್ನು ಹೊಂದಿದೆ.

ಮ್ಮೇಳನ

- ಸಾಹಿತಿ ಹನುಮಂತಯ್ಯ

ಮತ್ತೋರ್ವ ಅತಿಥಿಗಳಾಗಿದ್ದ ಬಂಡಾಯ ತಿಗಳು, ವಿಧಾನಪರಿಷತ್ ಸದಸ್ಯರೂ ಡಾ. ಎಲ್.ಹನುಮಂತಯ್ಯನವರು ಣದ ವ್ಯಾಪಾರೀಕರಣದ ಜೊತೆಗೆ ವನ್ನು ಆರ್‌ಎಸ್‌ಎಸ್ ನ ಹಿಂದುತ್ವದ ದ ಆಧಾರದಲ್ಲಿ ಶಾಲಾ ಪಠ್ಯವು ರಿದಂತೆ ಶಿಕ್ಷಣವನ್ನು ಮುವಾದೀಕರಿಸುತ್ತಿರುವ ಪ್ರಯತ್ನವನ್ನು ವಾಗಿ ವಿರೋಧಿಸಬೇಕು. ಆರ್‌ಎಸ್‌ಎಸ್ ತಹ 20 ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ದ್ಯಂತ ಸ್ವತಃ ನಡೆಸುತ್ತಿದೆ. ಮತಾಂಧತೆ, ತೀಯತೆಯ ವಿಷ ಬೀಜವನ್ನು ಎಳೆಯ ಸ್ಸಿನಿಂದಲೇ ಬಿತ್ತಲಾಗುತ್ತಿದೆ. ಇಂತಹ ತ್ತಿ ಪ್ರಜಾಪ್ರಭುತ್ವದ ತಳಪಾಯಕ್ಕೆ ಗಂಭೀರ ರಿಕೆಯಾಗಿದ್ದು ಸಾಮಾಜಿಕ ನ್ಯಾಯವನ್ನು ಕರಿಸಿ ಅನಾಗರಿಕ, ಅಸಮಾನ ವಸ್ಥೆಯನ್ನು ಪುನರುಜ್ಜೀವನಗೊಳಿಸುವ ಸಿಸ್ಟ್ ತಂತ್ರವಾಗಿದೆ. ಎಂದು ತಿಳಿಸಿದರು.

ಎಸ್‌ಎಫ್‌ಐ ರಾಜ್ಯ ಅಧ್ಯಕ್ಷರಾದ ಸ್.ಲಕ್ಷ್ಮಿರವರು ಅಧ್ಯಕ್ಷತೆ ವಹಿಸಿದ್ದ ಈ ಾರಂಭದ ಪ್ರಸ್ತಾವನೆಯನ್ನು ಎಸ್‌ಎಫ್‌ಐ ಕಾರ್ಯದರ್ಶಿಗಳಾಗಿದ್ದ ಆರ್.ರಾಮಕೃಷ್ಣ ವೇರಿಸಿದರು.

- ಯಶವಂತ್

2000 ನ್ನು ರದ್ದು ಪಡಿಸಲು ಆಗ್ರಹಿಸುವುದು ಸೇರಿದಂತೆ ಹಲವು ನಿರ್ಣಯಗಳನ್ನು ಸಮ್ಮೇಳನವು ಅಂಗೀಕರಿಸಿದೆ.

ಸಂಘಟನಾತ್ಮಕ ಪ್ರಶ್ನೆಗಳು

ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ವಿದ್ಯಾರ್ಥಿ ಸಮುದಾಯವು ಸಾವಿರ ಸಾವಿರ ಸಂಖ್ಯೆಗಳಲ್ಲಿ ಎಸ್ಸೆಫ್ಐ ನೇತೃತ್ವದ ಚಳುವಳಿಯಲ್ಲಿ ಬೀದಿಗಿಳಿದಿದ್ದರೂ ಸಹ ಒಟ್ಟಾರೆ ಲಕ್ಷಾಂತರ ಸಂಖ್ಯೆಯ ವಿದ್ಯಾರ್ಥಿಗಳು ಚಳುವಳಿಯ ತೆಕ್ಕೆಗೆ ಬಂದಿದ್ದರೂ ಅದನ್ನು ಸಂಘಟನೆಯಾಗಿ ಪರಿವರ್ತಿಸುವುದರಲ್ಲಿ ಗಂಭೀರ ಕೊರತೆಯಿರುವುದನ್ನು ಸಮ್ಮೇಳನವು ಗುರುತಿಸಿದೆ. ಮತ್ತು ಮುಂದಿನ ದಿನಗಳಲ್ಲಿ ಸದಸ್ಯತ್ವದ ತೀವ್ರ ವಿಸ್ತರಣೆಗೆ ಗಮನ ನೀಡಬೇಕೆಂದೂ ಸಮ್ಮೇಳನ ಹಾಗೂ ಸದಸ್ಯತ್ವ ದ್ವಿಗುಣಗೊಳಿಸಬೇಕೆಂದೂ ಸಮ್ಮೇಳನ ನಿರ್ಣಯಿಸಿದೆ.

ಸದಸ್ಯತ್ವ ಏರಿಳಿತದ ಪ್ರವೃತ್ತಿಗೆ ಸದೃಢಗೊಳಿಸುವ ದೃಷ್ಟಿಯಿಂದ ಶಿಕ್ಷಣ ಸಂಸ್ಥೆಗಳ ಆಧಾರಿತ (Campus Based) ಸಂಘಟನೆಗೆ ಮತ್ತು ಕ್ರಿಯಾಶೀಲ ಘಟಕ ರಚನೆಗೆ ಗಮನ ನೀಡಲೂ ಸಮ್ಮೇಳನ ತೀರ್ಮಾನಿಸಿದೆ.

ಶೈಕ್ಷಣಿಕ ಸಮಸ್ಯೆಗಳಲ್ಲಿ ಮತ್ತಷ್ಟು ಮಧ್ಯ ಪ್ರವೇಶಕ್ಕೆ ಅನುಕೂಲವಾಗುವ ಮತ್ತು ರಾಜ್ಯದಲ್ಲಿ ಸಂಘಟನೆಯ ಬೆಳವಣಿಗೆಗೆ ಮತ್ತಷ್ಟು ಗಮನ ನೀಡಲು ಸಾಧ್ಯವಾಗುವಂತೆ ರಾಜ್ಯಕೇಂದ್ರವನ್ನು ಬಲಿಷ್ಟಗೊಳಿಸಬೇಕೆಂದೂ, ಅದೇ ರೀತಿ ಜಿಲ್ಲಾ ಕೇಂದ್ರಗಳನ್ನು ರೂಪಿಸಿ ಬಲಿಷ್ಟಗೊಳಿಸಬೇಕೆಂದೂ ಸಮ್ಮೇಳನ ನಿರ್ಣಯಿಸಿದೆ.

ವಿದ್ಯಾರ್ಥಿ ಚಳುವಳಿಯನ್ನು ಮತ್ತಷ್ಟು ಪ್ರಜಾಸತ್ತಾತ್ಮಕಗೊಳಿಸುವ ದೃಷ್ಟಿಯಿಂದ ಶಾಲಾ-ಕಾಲೇಜುಗಳ ಮಟ್ಟದಲ್ಲಿ ಸರ್ವ ಸದಸ್ಯರ ಸಭೆಗಳನ್ನು ನಡೆಸುವುದು, ಘಟಕ ಸಮ್ಮೇಳನಗಳನ್ನು ನಡೆಸಿ ಘಟಕಗಳನ್ನು ಚುನಾಯಿಸುವ ಕ್ರಮಕ್ಕೆ ಒತ್ತು ನೀಡಬೇಕೆಂದೂ ಸಮ್ಮೇಳನ ನಿರ್ಣಯಿಸಿದೆ.

ಅನಕ್ಷರತೆ-ಶಾಲೆ ಬಿಡುವಿಕೆಯ ಸಮಸ್ಯೆಯ ಬೇರುಗಳು

ರಾಜ್ಯದಲ್ಲಿನ ಗಂಭೀರ ಅನಕ್ಷರತೆ-ಸಮಸ್ಯೆ- ಶಾಲೆಗೆ ಬರಬೇಕಾದ ವಯಸ್ಸಿನ ಮಕ್ಕಳು ಶಾಲೆಗೆ ಬಾರದಿರುವುದು ಇಲ್ಲವೇ ಮಧ್ಯದಲ್ಲಿ ಶಾಲೆ ಬಿಡುವುದು ಈ ಸಮಸ್ಯೆಗಳು ಕೇವಲ ಶಿಕ್ಷಣ ರಂಗದ ಸಮಸ್ಯೆಗಳಲ್ಲ. ಈ ಸಮಸ್ಯೆ ಬೇರುಗಳು ಅಸಮಾನ ಸಾಮಾಜಿಕ - ಆರ್ಥಿಕ ವ್ಯವಸ್ಥೆಯಲ್ಲಿವೆ ಎಂಬುದನ್ನು ಕಳೆದ ಸಮ್ಮೇಳನ ವರದಿ ಎತ್ತಿ ತೋರಿಸಿತ್ತು.

ಭೂರಹಿತ - ಬಡ - ಕೃಷಿ ಕೂಲಿಕಾರರಿಗೆ - ಬಡ ರೈತರಿಗೆ ಸಮರ್ಪಕವಾದ ವ್ಯಾಪಕವಾದ ರೀತಿಯಲ್ಲಿ ಭೂಮಿಯನ್ನು ಮರು ಹಂಚಿಕೆ ಮಾಡುವ 'ವೈಜ್ಞಾನಿಕ ಭೂ ಸುಧಾರಣೆ ಜಾರಿಗೆ ಬರದೇ ನಮ್ಮ ಸಮಾಜದ ಲಕ್ಷ ಲಕ್ಷ ಸಂಖ್ಯೆಯ ಶಾಲೆಯ ಹೊರಗಿನ ಮಕ್ಕಳು ಶಾಲೆಗೆ ಬರುವುದು ಸಾಧ್ಯವಿಲ್ಲ. ಆದರೆ ಭೂಹಿಡುವಳಿಗಳ ಕೇಂದ್ರೀಕರಣ - ಕೃಷಿಯಲ್ಲಿ ವ್ಯಾಪಕವಾಗಿ ಯಂತ್ರೋಪಕರಣಗಳ ಬಳಕೆ - ಕೃಷಿ ರಂಗದಲ್ಲಿ ವ್ಯಾಪಕಗೊಳ್ಳುತ್ತಿರುವ ಬಂಡವಾಳಶಾಹೀಕರಣ ಇತ್ಯಾದಿ ಕಾರಣಗಳಿಂದ ರಾಜ್ಯದ ಬಡರೈತ ಕೂಲಿಕಾರರ ಬದುಕು ಮತ್ತಷ್ಟು ದುರ್ಬರಗೊಂಡು ಈ ನಡುವಿನ ಅವಧಿಯಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆಯೇ ಹೊರತು ಸುಧಾರಿಸಿಲ್ಲ.


ಈ ನಿಟ್ಟಿನಲ್ಲಿ ಸಮಸ್ಯೆಯ ಮೂಲ ಮತ್ತು ಪರಿಹಾರದ ಕುರಿತು ವ್ಯಾಪಕ ಪ್ರಚಾರಾಂದೋಲನವನ್ನಾದರೂ ಎಸ್ಸೆಫ್ಐ ರಾಜ್ಯವ್ಯಾಪಿ ಹಮ್ಮಿಕೊಳ್ಳುವ ಕುರಿತು ಚರ್ಚಿಸಬೇಕಿದೆ. ಕೂಲಿಕಾರರ - ಅಸಂಘಟಿತ ಕಾರ್ಮಿಕರ ಕೂಲಿ ಹೆಚ್ಚಳ ಮುಂತಾದ ಚಳುವಳಿಗೆ ವಿಶೇಷ ಬೆಂಬಲ ನೀಡಬೇಕಿದೆ.

ನನ

ಣಕ್ಕೆ ನಿರ್ಧಾರ

2005 ರಿಂದ ಶಿಕ್ಷಣ ಕ್ಷೇತ್ರ ಹಾಗೂ ಸೇವಾಕ್ಷೇತ್ರವೂ ಸಹ WTO ವ್ಯಾಪ್ತಿಗೆ ಒಳಪಡುತ್ತಿರುವ ಈ ಸನ್ನಿವೇಶದ ಗಂಭೀರ ಸವಾಲುಗಳನ್ನು ಎದುರಿಸಲು ಸಂಘಟನೆಯನ್ನು ಸಜ್ಜುಗೊಳಿಸಬೇಕೆಂದೂ ಸಮ್ಮೇಳನ ನಿರ್ಣಯಿಸಿದೆ.

ಶಿಕ್ಷಣ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ-ನಮ್ಮ ವಿಶ್ವ ವಿದ್ಯಾಲಯ ಶೈಕ್ಷಣಿಕ ಅಜೆಂಡಾಗಳನ್ನು ವಿಮರ್ಶಿಸುವ WTO ಸಂಸ್ಥೆಯ ಅಧಿಕಾರ, ಇಂತಹ ಎಲ್ಲಾ ಶಿಕ್ಷಣ ವಿರೋಧಿ ನೀತಿಗಳಿಗೆ



ಪೂರಕವಾಗಿ ಆಗುತ್ತಿರುವ ಹಲವು ಬೆಳವಣಿಗೆಗಳು - ನ್ಯಾಕ್ (ರಾಷ್ಟ್ರೀಯ ಮೌಲ್ಯಮಾಪನ ಮತ್ತು ಶ್ರೇಣೀಕರಣ ಮಂಡಳಿ - NAAC) ಕಾರ್ಯವೈಖರಿ, ಕಾಲೇಜು ಸ್ವಾಯತ್ತತೆ, ಖಾಸಗಿ ವಿಶ್ವ ವಿದ್ಯಾಲಯಗಳ ಸ್ಥಾಪನೆ,.

ಇದೇ ಜಾಗತೀಕರಣದ ನೀತಿಗಳ ಪ್ರಭಾವದ ಅಡಿಯಲ್ಲಿ ಮೊಟಕುಗೊಳ್ಳುತ್ತಿರುವ ವಿದ್ಯಾರ್ಥಿ ಶಿಕ್ಷಕರ ಪ್ರಜಾಸತ್ತಾತ್ಮಕ ಹಕ್ಕುಗಳು, ಈ ಎಲ್ಲಾ ಪ್ರಶ್ನೆಗಳ ಕುರಿತು ಸಮ್ಮೇಳನ ಗಂಭೀರವಾದ ಚರ್ಚೆ ನಡೆಸಿದೆ. ಕರ್ನಾಟಕ ವಿಶ್ವ ವಿದ್ಯಾಲಯಗಳ ಕಾಯ್ದೆ

'ಗುಣಾತ್ಮಕದೊಂದಿಗೆ ಗಣಾತ್ಮಕವಾಗಿ ಎಸ್‌ಎಫ್‌ಐ ಗರಿಗೆದರಲಿ

ಹಳೆಬೇರು-ಹೊಸ ಚಿಗುರುಗಳಲ್ಲಿ ಮೂಡಿಬಂದ ಆಶಯ

ರಾಜ್ಯದ ಶೈಕ್ಷಣಿಕ ಹಾಗೂ ಸಾಮಾಜಿಕ ವಿಶಿಷ್ಟ ಸಂದರ್ಭದಲ್ಲಿಯೂ ಸಮರಧೀರ ನಾಯಕತ್ವ ನೀಡಿ ವಿದ್ಯಾರ್ಥಿಗಳ ಮಧ್ಯೆ ವೈಚಾರಿಕ-ಪ್ರಗತಿಪರ ಮೌಲ್ಯ ಬಿತ್ತುತ್ತಾ ಸ್ಪಷ್ಟ ಸೈದ್ಧಾಂತಿಕ ನೆಲೆಯೊಂದಿಗೆ ಅಗ್ರಗಣ್ಯ ವಿದ್ಯಾರ್ಥಿ ಸಂಘಟನೆಯಾಗಿ ಬೆಳೆದುಬರುತ್ತಿರುವ ಭಾರತ ವಿದ್ಯಾರ್ಥಿ ಫೆಡರೇಷನ್(SFI) ಇನ್ನಷ್ಟು ಗುಣಾತ್ಮಕದೊಂದಿಗೆ ಗಣಾತ್ಮಕವಾಗಿ ಬೆಳೆದು ಬರಲಿ' ಎಂಬ ಆಶಯವು ವ್ಯಕ್ತವಾಯಿತು. ಮೂರು ದಿನಗಳು (ಫೆ. 15-17) ಬೆಂಗಳೂರು ಸೆನೆಟ್ ಹಾಲ್‌ನಲ್ಲಿ 'ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ-ಪ್ರತಿಭೆ - ಸಾಮಾಜಿಕ ನ್ಯಾಯ ಉಳಿವಿಗಾಗಿ' ನಡೆದ ಎಸ್‌ಎಫ್‌ಐ 10ನೇ ರಾಜ್ಯ ಸಮ್ಮೇಳನದ ಅಂಗವಾಗಿ 16 ರ ಸಂಜೆ ಹಮ್ಮಿಕೊಂಡ 'ಹಳೇ ಬೇರು - ಹೊಸಚಿಗುರು' ಕಾರ್ಯಕ್ರಮದಲ್ಲಿ ಒಮ್ಮತ ಮೂಡಿ ಇಡೀ ಪ್ರತಿನಿಧಿಗಳನ್ನು ಹುರಿದುಂಬಿಸಿತು.



ಚಾರಿತ್ರಿಕ ನೆನಪುಗಳಿಗೆ ಚಾಲನೆ ಹಿರಿಯ ಸಂಗಾತಿ ಜಿ.ವಿ.ಎಸ್.

1970 ರಲ್ಲಿ ಎಸ್‌ಎಫ್‌ಐನ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬರಾದ ಹಾಗೂ ಶಾಸಕರಾದ ಕಾಂ. ಜಿ.ವಿ.ಶ್ರೀರಾಮರೆಡ್ಡಿ ಮಾತನಾಡುತ್ತಾ '1969 ರಲ್ಲಿ ಕಾಂಗ್ರೆಸ್ ವಿಭಜನೆ - ಕಾಂಗ್ರೆಸ್ ಉಳಿವಿಗಾಗಿ ಗರಿಬೀ ಹಟಾವೋ, ರಶ್ಯ ಮಾದರಿ ಸಮಾಜವಾದ ತರುವ ಇಂದಿರಾಗಾಂಧಿ ಪೊಳ್ಳು ಘೋಷಣೆ - ಇನ್ನೊಂದೆಡೆ ಸಮಾಜವಾದದ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿರುವ ವಿಶಿಷ್ಟ ಸಂದರ್ಭದಲ್ಲಿ ಕಮ್ಯುನಿಸ್ಟ್ ಚಳುವಳಿಯೊಳಗೆ ಸ್ವಾತಂತ್ರ್ಯ ಚಳುವಳಿಯ ಆಶೋತ್ತರ ರಾಷ್ಟ್ರೀಯ ಸರ್ಕಾರ ಈಡೇರಿಸುತ್ತದೆ. ಆದ್ದರಿಂದ ನಾವು ಇಂದಿರಾಗಾಂಧಿ ಜೊತೆ ಕೈಜೋಡಿಸೋಣ ಎಂಬ ಒಂದು ವಿಭಾಗದ ವಾದವಾದರೆ ಅದಕ್ಕೆ ಬಂಡವಾಳಶಾಹಿ, ಭೂಮಾಲಿಕ ವರ್ಗವನ್ನು ಪ್ರತಿನಿಧಿಸಿರುವ ರಾಷ್ಟ್ರೀಯ ಸರ್ಕಾರ ಸ್ವಾತಂತ್ರ್ಯ ಚಳುವಳಿ ಆಶೋತ್ತರ ಎಂದೂ ಈಡೇರಿಸಲಾರದು. ಆದ್ದರಿಂದ ಚಳುವಳಿ ಅನಿವಾರ್ಯ ಎಂಬ ಆಧಾರದಲ್ಲಿ ಸಂಘರ್ಷ ಬೆಳೆದು ಅಂತಿಮವಾಗಿ ಚಳುವಳಿ ಅಗತ್ಯ ಎಂಬ ಸಂಘರ್ಷದ ಹಾದಿ ಹಿಡಿಯಲಾಯಿತು. ಎಸ್‌ಎಫ್‌ಐ ಕೇರಳದ ತ್ರಿವೇಂಡ್ರಂನಲ್ಲಿ 1970 ಡಿಸೆಂಬರ್ 30 ರಂದು ಬೆಳೆದುಬಂದ ಬಗೆಯನ್ನು ಬಣ್ಣಿಸಿದ ಅವರು ಕರ್ನಾಟಕದಲ್ಲಿ ನಮ್ಮ ನೇತೃತ್ವದಲ್ಲಿ ಎಸ್‌ಎಫ್‌ಐ ಬೆಳೆದುಬಂದ ಬಗೆ ನೆನಪಿಸಿಕೊಳ್ಳುತ್ತಾ ಹಾಸನದಲ್ಲಿ ಹೊಟೆಲ್ ತಿಂಡಿಗಳ ದರ ಹೆಚ್ಚಳ ವಿರುದ್ಧ ನಡೆದ ವಿದ್ಯಾರ್ಥಿಗಳ ಹೋರಾಟ-ಪೊಲೀಸ್ ಲಾಠಿ ಚಾರ್ಜ್,ಅದರ ವಿರುದ್ಧ ಇಡೀ ರಾಜ್ಯಾದ್ಯಂತ ಭುಗಿಲೆದ್ದ ವಿದ್ಯಾರ್ಥಿ ಚಳುವಳಿ ಜ್ಞಾಪಿಸಿದರು. ಇಂದು ವಿದ್ಯಾರ್ಥಿ ಚಳುವಳಿಯಲ್ಲಿ ಸೈದ್ಧಾಂತಿಕವಾಗಿ ಗುಣಾತ್ಮಕತೆ ಕಡಿಮೆಯಾಗುತ್ತಿದ್ದು ಎಸ್‌ಎಫ್‌ಐ ಮಾತ್ರ ಆ ಕೊರತೆ ತುಂಬಬಲ್ಲದು ಎಂದರು. ಪ್ರಜಾವಾಣಿ ಪತ್ರಿಕೆ ಮಾಜಿ ಪ್ರಧಾನ ಸಂಪಾದಕರು ಮತ್ತು 1970 ರಲ್ಲಿ ದೆಹಲಿ ವಿ.ವಿ.ಯ ಎಸ್‌ಎಫ್‌ಐ ಒಡನಾಡಿಯಾಗಿದ್ದ ಕೆ.ಎನ್.ಹರಿಕುಮಾರ್ ಮಾತನಾಡಿ ಶಿಕ್ಷಣದ ವ್ಯಾಪಾರೀಕರಣ ಇಂದು ಮಿತಿಮೀರಿದೆ. ನಾವು ಎಸ್‌ಎಫ್‌ಐ ಕಟ್ಟುತ್ತಿರುವ ಕಾಲಘಟ್ಟದಲ್ಲಿ Socialism, ರಾಷ್ಟ್ರೀಕರಣ ಎಂಬ ಮಾತು ಇತ್ತೇ ಹೊರತು ಖಾಸಗೀಕರಣವಲ್ಲ. ಅಂದು ಆ ಪ್ರಭುತ್ವಕ್ಕೂ ಅಗತ್ಯವಾಗಿತ್ತು. ಎಸ್‌ಎಫ್‌ಐ ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಸಮ್ಮೇಳನ ಸಂಘಟಿಸಿದ್ದು ಮತ್ತು ಹೋರಾಡುತ್ತಿರುವುದು ಸಂತಸ ತಂದಿದೆ ಎಂದರು. ಎಂಎಲ್‌ಸಿ ಆಗಿರುವ ಹಾಗೂ ಮಾಜಿ ಎಸ್‌ಎಫ್‌ಐ ಬೆಂಗಳೂರು ಜಿಲ್ಲಾ ಅಧ್ಯಕ್ಷರೂ ಆಗಿದ್ದ ಎಲ್.ಹನುಮಂತಯ್ಯ ಮಾತನಾಡಿ ಎಸ್‌ಎಫ್‌ಐ ಗೆ ತಾವು ಬಂದ ಬಗ್ಗೆ ನೆನಪಿಸುತ್ತಾ ತಾವು ಸರ್ಕಾರಿ ವಿಜ್ಞಾನ ಕಾಲೇಜು ವಿದ್ಯಾರ್ಥಿ ಚುನಾವಣೆಗೆ ಸ್ಪರ್ಧಿಸಿದ್ದಾಗ ಎಸ್‌ಎಫ್‌ಐ ನೀಡಿದ ಬೆಂಬಲದೊಂದಿಗೆ ಗೆದ್ದು ಬಂದು ನಾನು ವೈಚಾರಿಕತೆ, ಪ್ರಶ್ನಿಸುವ ಮನೋಭಾವ, ವಿಷಯ ಒರೆಗಲ್ಲಿಗೆ ಹಚ್ಚುವ ಹಾಗೂ ಈ ಮಟ್ಟಕ್ಕೆ ಬೆಳೆಯಲು ಎಸ್‌ಎಫ್‌ಐ ಕಾರಣ ಎಂದು ಜ್ಞಾಪಿಸಿ, ಎಸ್‌ಎಫ್‌ಐ ಬೆಳೆಯದೆ ವಿದ್ಯಾರ್ಥಿ ರಂಗದ ಸಮಸ್ಯೆ ಬಗೆಹರಿಯಲಾರದು ಎಂದರು. ಖ್ಯಾತ ನ್ಯಾಯವಾದಿ ಶಂಕರಪ್ಪ, ಮಾಜಿ ರಾಜ್ಯಾಧ್ಯಕ್ಷರಾದ ಪತ್ರಕರ್ತರೂ ಆದ ಜಯಕುಮಾರ್, ರಾಜಣ್ಣ ಮಾತನಾಡಿದರೆ ಮಾಜಿ ರಾಜ್ಯ ಕಾರ್ಯದರ್ಶಿಯಾಗಿದ್ದ ಐಕ್ಯರಂಗದ ಸಂಪಾದಕರಾದ ಎಸ್.ವೈ.ಗುರುಶಾಂತ್ ಮಾತನಾಡಿ ತಾವು ಎಸ್‌ಎಫ್‌ಐ ಗೆ ಬಂದ ಅನುಭವ ನೆನೆಯುತ್ತಾ ಎಸ್‌ಎಫ್‌ಐ ಕೊಡುಗೆ ಆಲದ ಮರದಂತೆ ವಿಸ್ತಾರ, ಇದೇ ಒಂದು ವಿಶ್ವವಿದ್ಯಾಲಯ ಎಂದರಲ್ಲದೆ ಇಂದು ರಾಜ್ಯದಲ್ಲಿ ಕೋಮುವಾದಿ ಶಕ್ತಿಗಳ ಅಟ್ಟಹಾಸ, ಇತಿಹಾಸ ಚಟುವಟಿಕೆ, ವಾಸ್ತವ ಮರೆಮಾಚುವಿಕೆ ವ್ಯಾಪಕವಾಗಿ ಯುವಜನರನ್ನು ಆಕರ್ಷಿಸುತ್ತಾ ಯುವಜನರಿಗೆ ಉದ್ಯೋಗ ಕೊಡುವ ಬದಲು ಅವರನ್ನೇ ಅಪರಾಧಿಗಳನ್ನಾಗಿ ಮಾಡುತ್ತಿದೆ. ಎಸ್‌ಎಫ್‌ಐ-ಮಾತ್ರ ವಿದ್ಯಾರ್ಥಿಗಳಿಗೆ ಸರಿಯಾದ ವೈಚಾರಿಕ ನೆಲೆ ಕೊಡಬಲ್ಲದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವೇದಿಕೆ ಮೇಲೆ 1970 ರಿಂದ ಇಲ್ಲಿವರೆಗೂ ವಿವಿಧ ಕಾಲದಲ್ಲಿ ಎಸ್‌ಎಫ್‌ಐ ಕಟ್ಟಿ ಬೆಳೆಸಿದ ಮಾಜಿ ರಾಜ್ಯಾಧ್ಯಕ್ಷ ಕಾಂ ಜಿ.ಸಿ.ಬಯ್ಯಾರೆಡ್ಡಿ, ಮಾಜಿ ಕಾರ್ಯದರ್ಶಿ ಕೆ.ಪ್ರಕಾಶ್, ರಾಜ್ಯ ನಾಯಕರಾಗಿದ್ದ ಕೆ.ಮಹಾಂತೇಶ್, ಕೆ.ಎನ್.ಉಮೇಶ್, ಚಂದ್ರಪ್ಪ ಹೊಸ್ಕೇರಾ, ಬಸವಮ್ಮ, ರಮೇಶ್, ಲಿಂಗರಾಜು, ವೆಂಕಟಾಚಲ, ಶಿವಾರೆಡ್ಡಿ, ಮೀನಾಕ್ಷಿ ಸುಂದರಂ ಮುಂತಾದವರು ಹಾಜರಿದ್ದರು. ಎಸ್‌ಎಫ್‌ಐ ಮಾಜಿ ರಾಜ್ಯ ಮುಖಂಡರಾದ ಲಿಂಗರಾಜರ 'ಇರಲಿ, ನೆನಪಿರಲಿ ಗೆಳೆತನ ನೆನಪಿರಲಿ' ಹಾಡು ಎಲ್ಲರನ್ನು ತಮ್ಮ ಹಳೆಯ ನೆನಪುಗಳಿಗೆ ಕೊಂಡೊಯ್ಯಿತು. ಹೊಸ ಚಿಗುರುಗಳಿಗೆ ತಾವು ಇತಿಹಾಸ ನಿರ್ಮಿಸುವ, ಹೊಸದೊಂದು ಸಮಾಜ ಕಟ್ಟುವ ದೃಢ ಸಂಕಲ್ಪಕ್ಕೆ ನಾಂದಿ ಹಾಡಿತು

- ವಿಜಯಕುಮಾರ ದೊಡ್ಡಮನಿ

ನಕ್ಸಲೀಯ ಸಮಸ್ಯೆ ಮತ್ತು ಪರಿಹಾರ

ಪುಟ 5 ರಿಂದ

ಜೀವನದಲ್ಲುಂಟಾಗುವ ಯಾವುದೇ ತಿರುವು ಮುರುವುಗಳನ್ನೆದುರಿಸಲು ಸಜ್ಜಾಗಿರುವಂತೆ ತಮ್ಮ ಕೆಲಸವನ್ನು ಯೋಜಿಸಿಕೊಳ್ಳುವುದು ಅಗತ್ಯವಾಗಿದೆ".

ಕರ್ನಾಟಕದ ವಿಮೋಚನೆ

ನಕ್ಸಲೀಯರು ಮುಖ್ಯವಾಗಿ ಪೀಪಲ್ಸ್ ವಾರ್‌ಗುಂಪಿನವರು ಕರ್ನಾಟಕವನ್ನು ವಿಮೋಚನೆ ಮಾಡುವ ಹಾಗೆಯೇ ಇತರ ರಾಜ್ಯಗಳನ್ನು ವಿಮೋಚನೆ ಮಾಡುವ ಗುರಿಯನ್ನು ಹೊಂದಿದ್ದಾರೆ. ಈ ಉದ್ದೇಶದಿಂದಲೇ 'ಕರ್ನಾಟಕ ವಿಮೋಚನಾ ರಂಗ'ವನ್ನು ಕಟ್ಟಿದ್ದಾರೆ. ಸ್ವತಂತ್ರ ಕರ್ನಾಟಕವೆಂಬ ಪತ್ರಿಕೆಯನ್ನು ಹೊರ ತರುತ್ತಿದ್ದಾರೆ. ಇವುಗಳ ಹೆಸರೇ ಸೂಚಿಸುವಂತೆ ಮತ್ತು ಅವರ ಸಾಹಿತ್ಯ ಹಾಗೂ ಬರಹಗಳು ಸ್ಪಷ್ಟವಾಗಿ ಘೋಷಿಸುವಂತೆ, ಇಂದಿನ ಭಾರತದಲ್ಲಿನ ಶೋಷಣೆಯನ್ನು ತಪ್ಪಿಸಲು ಕರ್ನಾಟಕವನ್ನೂ ಹಾಗೆಯೇ ಇತರ ರಾಜ್ಯಗಳನ್ನೂ ಭಾರತದಿಂದ ವಿಮೋಚನೆ ಮಾಡಬೇಕು. ನಂತರ ಹೀಗೆ ವಿಮೋಚನೆಗೊಂಡು ಬೇರೆಯಾದ ರಾಜ್ಯಗಳು ತಾವೇ ಸ್ವಯಂಪ್ರೇರಣೆಯಿಂದ ಒಂದು ಒಕ್ಕೂಟವನ್ನು ರಚಿಸಿಕೊಂಡರೆ ಅದು ಶೋಷಣಾ ಮುಕ್ತವಾಗಿರುತ್ತದೆ. ಇದು ಅವರ ವಾದ. ಇದೇ ದಿಕ್ಕಿನಲ್ಲಿ ಅವರು ಕಾಶ್ಮೀರ, ಅಸ್ಸಾಂ, ತ್ರಿಪುರ, ನಾಗಾಲ್ಯಾಂಡ್, ಮಿಜೊರಾಂ, ಪಂಜಾಂಬ್, ಮಣಿಪುರಗಳಲ್ಲಿ ನಡೆಯುತ್ತಿರುವ ಭಯೋತ್ಪಾದಕ ಹೋರಾಟಗಳನ್ನು 'ರಾಷ್ಟ್ರೀಯ ವಿಮೋಚನಾ ಹೋರಾಟ'ಗಳೆನ್ನುತ್ತಾರೆ.



ನಕ್ಸಲೀಯರ ಶೋಧನೆಯಲ್ಲಿ ಪೊಲೀಸ್ ಪಡೆ

ಅವರ ಘೋಷಣೆ ಹೀಗೆನ್ನುತ್ತದೆ - "ಭಾರತವೆಂಬುದು ರಾಷ್ಟ್ರವಲ್ಲ. ಭಾರತವೆಂಬುದು ರಾಷ್ಟ್ರೀಯತೆಗಳ ಬಂಧೀಖಾನೆ", "ಭಾರತ ಗಣರಾಜ್ಯಗಳ ಒಕ್ಕೂಟದಲ್ಲಿ ತಮ್ಮ ಸ್ವಯಂ ನಿರ್ಣಯದ ಹಕ್ಕಿಗಾಗಿ, ಸ್ವಾತಂತ್ರ್ಯಕ್ಕಾಗಿ ಬೇರೆ ಬೇರೆ ರಾಷ್ಟ್ರೀಯತೆಗಳು ನಡೆಸುತ್ತಿರುವ ಸಶಸ್ತ್ರ ಹೋರಾಟಗಳಲ್ಲಿ ಕಾಶ್ಮೀರದ ಹೆಚ್ಚಿನ ರಕ್ತಹರಿಸಲಾಗುತ್ತಿರುವ ಒಂದು ದೀರ್ಘಕಾಲದ ಹೋರಾಟ."

ಈ ರಾಷ್ಟ್ರೀಯ 'ವಿಮೋಚನಾ' ಹೋರಾಟಗಳ ಜೊತೆಗೆ "ಆಂಧ್ರ, ಬಿಹಾರ, ದಂಡಕಾರಣ್ಯಗಳಲ್ಲಿನ ಊಳಿಗಮಾನ್ಯ ವಿರೋಧಿ ಹೋರಾಟಗಳನ್ನೂ" ಸೇರಿಸಿಕೊಳ್ಳುತ್ತಾರೆ.

ಇದು ಎಷ್ಟು ಅಪಾಯಕಾರಿ ಚಿಂತನೆ ಎಂಬುದು ಅವರ ಹೇಳಿಕೆಗಳೇ ವ್ಯಕ್ತಗೊಳಿಸಿವೆ. ಭಾರತವನ್ನು ಛಿದ್ರಛಿದ್ರ ಮಾಡಿ ನಂತರ (ಅಂತಹುದೊಂದು, ಅವಕಾಶ ಸಿಕ್ಕಿದರೆ) ಜೋಡಿಸುವ ಈ ಅನರ್ಥಕಾರಿ ಮಾರ್ಗ ಭಾರತಕ್ಕೆ, ಅದರ ಸಮಗ್ರತೆ, ಐಕ್ಯತೆಗೆ, ಒಟ್ಟು ಬೆಳವಣಿಗೆಗೆ ದೊಡ್ಡ ಕಂಟಕವಾಗಿದೆ. ಇದನ್ನೇ ಅಮೆರಿಕನ್ ಸಾಮ್ರಾಜ್ಯಶಾಹಿ ಗುರಿಯಾಗಿರಿಸಿಕೊಂಡಿದೆ ಹಾಗೂ ಭಾರತದ ಎಲ್ಲ ಭಯೋತ್ಪಾದಕರಿಗೆ ಹಣ, ಶಸ್ತ್ರಾಸ್ತ್ರ, ತರಬೇತಿಗಳನ್ನು ಗೂಢಾಚಾರ ಸಿಐಎ ಒದಗಿಸುತ್ತಿದೆ ಎಂಬುದು ಅನೇಕ ಬಾರಿ ಬೆಳಕಿಗೆ ಬಂದಿದೆ. ಭಾರತ ಇಂದು ಇಡೀ ದೇಶವಾಗಿರುವಂತೆ ಅದನ್ನು ಸರಳವಾಗಿ ನುಂಗಿ ಜೀರ್ಣಿಸಿಕೊಳ್ಳಲಾಗುವುದಿಲ್ಲ. ಅದನ್ನು ತುಂಡುತುಂಡು ಮಾಡಿದರೆ ಈ ಕೆಲಸ ಬಹಳ ಸುಲಭ. ವಿಶ್ವದ ಅನೇಕ ಕಡೆ ಇಂತಹ ಕಿರು ಹಾಗೂ ಮಧ್ಯಮ ಪ್ರಮಾಣದ ದೇಶಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡರೆ ಭಾರತವನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಬಹುದು ಎಂಬ ಅಮೆರಿಕಾದ ಸಂಚಿಗೆ ಕರ್ನಾಟಕ ವಿಮೋಚನಾ ರಂಗ ಎಂಬ ಹೆಸರಿನ ಪೀಪಲ್ಸ್ ವಾರ್ ಗುಂಪಿನ ಬಹಿರಂಗ ರೂಪದ ಚಿಂತನೆ ಹಾಗೂ ಕೆಲಸ ಪೂರಕವಾಗಿದೆ. ಇದೇ ನೀತಿಯು ಮುಂದುವರಿಕೆಯಾಗಿ ಕೊಡಗು ಪ್ರತ್ಯೇಕತಾವಾದಕ್ಕೂ ಸೈದ್ಧಾಂತಿಕ ಆಧಾರ ಹಾಗೂ ಬೆಂಬಲಗಳನ್ನು ಪೀಪಲ್ಸ್ ವಾರ್ ಗುಂಪು ಹಾಗೂ ಕರ್ನಾಟಕ ವಿಮೋಚನಾ ರಂಗದವರು ಒದಗಿಸಿದ್ದಾರೆ.

ಈ ಮೇಲಿನ ಉದ್ದೇಶಗಳ ಸಾಧನೆಗೆ ಪೀಪಲ್ಸ್ ವಾರ್ ಗುಂಪು ಭಾರತದ ಗುಡ್ಡಬೆಟ್ಟಗಳ ಪ್ರದೇಶಗಳಲ್ಲಿ ಅಡಗುದಾಣಗಳನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನ ಮಾಡಿದೆ. ಕರ್ನಾಟಕ ಪಶ್ಚಿಮ ಘಟ್ಟಗಳನ್ನು ಕೂಡಾ ಭಾರತದ ಬೇರೆ ಬೇರೆ ರಾಜ್ಯಗಳ ನಕ್ಸಲೀಯರಿಗೆ ಹಾಗೂ ಕರ್ನಾಟಕ ನಕ್ಸಲೀಯರಿಗೆ ಸುರಕ್ಷಿತವಾದ ಅಡಗುದಾಣವನ್ನಾಗಿ ಮಾಡಿಕೊಳ್ಳಬೇಕು ಎಂಬ ಗುರಿಯ ಭಾಗವಾಗಿಯೇ ಆಂಧ್ರದ ತೆಲುಗು ಭಾಷಿಕ ನಕ್ಸಲೀಯರು ಕರ್ನಾಟಕ-ಆಂಧ್ರಗಡಿ ಭಾಗದಲ್ಲಿ ತೆಲುಗು-ಕನ್ನಡ ಮಾತನಾಡುವ ಬಲ್ಲ ಯುವಕ-ಯುವತಿಯರನ್ನು ಸೆಳೆದುಕೊಂಡರು. ನಂತರ ಅವರನ್ನು ಬಳಸಿ ಪಶ್ಚಿಮ ಘಟ್ಟಗಳ ಸುತ್ತಮುತ್ತಲಿನ ಪ್ರದೇಶಗಳಿಗೆ ಅವರನ್ನು ಕಳುಹಿಸಿ, ಅಲ್ಲಿಯ ಶ್ರೀಮಂತರಿಗೆ ಮಧ್ಯಮವರ್ಗಗಳಿಗೆ ಪ್ರಿಯವಾದ ತುಂಗಾಮೂಲ, ಕುದುರೆಮುಖ ಗಣಿಗಾರಿಕೆ ಮುಂತಾದ ಪ್ರಶ್ನೆಗಳನ್ನು ಬೆಂಗಳೂರು - ಮೈಸೂರು ಕಾರಿಡಾರ್ ಪ್ರಶ್ನೆಗಳನ್ನು ಕೈಗೆತ್ತಿಕೊಂಡರು. ರಾಜ್ಯದ ಅಭಿವೃದ್ಧಿ,ಬಡವರಿಗೆ ಉದ್ಯೋಗವಕಾಶಗಳು ಹಾಗೂ ಪರಿಸರ ಸಂರಕ್ಷಣೆಯನ್ನು ಸಮತೋಲನಗೊಳಿಸುವ ಕನಿಷ್ಠ ಜನಪರ ಕಾಳಜಿಯನ್ನು ಅವರು ವಹಿಸಲಿಲ್ಲ. ಇವುಗಳ ಮೂಲಕ ಅಲ್ಲಿ ಸ್ವಲ್ಪ ಪ್ರಭಾವವನ್ನು ಗಳಿಸುವ ಪ್ರಯತ್ನದ ಮರೆಯಲ್ಲಿ ಪಶ್ಚಿಮ ಘಟ್ಟಗಳಲ್ಲಿ ಅಡಗುದಾಣಗಳನ್ನು ಸಶಸ್ತ್ರ ದಳಗಳನ್ನು ರೂಪಿಸಿಕೊಂಡರು. ಇದಕ್ಕೆ ಪರಿಸರ ಕಾಳಜಿಯ ಕರ್ನಾಟಕದ ಪ್ರಸಿದ್ಧ ಬುದ್ಧಿಜೀವಿಗಳನ್ನು, ಜನಪರ ಚಳುವಳಿಗಳನ್ನು ಬಳಸಿಕೊಂಡರು.

ಪಶ್ಚಿಮ ಘಟ್ಟಗಳ ಅಡಗುದಾಣ ಇಡೀ ಭಾರತದಲ್ಲಿ 'ಸಶಸ್ತ್ರ ಕ್ರಾಂತಿ' ಮಾಡುವ ಅವರ ಉದ್ದೇಶಕ್ಕೆ ಅತ್ಯಂತ ಅವಶ್ಯವಾದದ್ದು. ಕರ್ನಾಟಕದಲ್ಲಿಯೂ ವೈಯಕ್ತಿಕ ಬೆದರಿಕೆ ಹಾಗೂ ಕೊಲೆಗಳ ಈ ಜನ ಚಳುವಳಿ ವಿರೋಧಿ ಕೆಲಸಕ್ಕೆ ಅಗತ್ಯವಾದದ್ದು.

ಬಿಜೆಪಿಯ ಆವುಟಗಳು

ಈ ಎಲ್ಲಾ ಬೆಳವಣಿಗೆಗಳಾಗುತ್ತಿರುವಾಗ ಸುಮ್ಮನಿದ್ದ ಪಶ್ಚಿಮ ಘಟ್ಟ ಭಾಗಗಳಲ್ಲಿ ನೆಲೆ ಪಡೆದಿರುವ ಸಂಘ ಪರಿವಾರ ಈಗ ಇದ್ದಕ್ಕಿದ್ದಂತೆ ಎಚ್ಚೆತ್ತವರಂತೆ ತಮ್ಮ ಆವುಟಗಳನ್ನು ಆರಂಭಿಸಿದ್ದಾರೆ. ಬಾಬಾಬುಡನ್ ಗಿರಿಯ ಪ್ರಶ್ನೆಯಲ್ಲಿ ಮತ್ತು ಕೋಮುವಾದವನ್ನು ಎದುರಿಸುವಲ್ಲಿ ಸೆಕ್ಯುಲರ್ ಬುದ್ಧಿಜೀವಿಗಳು ವಹಿಸುತ್ತಿರುವ ಪಾತ್ರ ಅವರಿಗೆ ನುಂಗಲಾರದ ತುತ್ತಾಗಿದೆ. ಹೀಗಾಗಿ ಅವರು ನಕ್ಸಲ್‌ವಾದಿಗಳ ವಿರೋಧದ ನೆಪದಲ್ಲಿ ಕೋಮುವಾದ ವಿರೋಧಿ ಶಕ್ತಿಯನ್ನು ಕುಂದಿಸಬೇಕು ಹಾಗೂ ಕರ್ನಾಟಕದ ಜನರ ಸಮಸ್ಯೆಗಳ ಹಾಗೂ ಅದರ ಪರಿಹಾರಗಳಿಂದ ಜನತೆಯ ಗಮನವನ್ನು ತಪ್ಪಿಸಬೇಕು ಎಂಬುದು ಬಿಜೆಪಿಯ ಹಂಚಿಕೆ.

ಇದೇ ಸಂದರ್ಭದಲ್ಲಿ ಕೋರಮಂಗಲದಲ್ಲಿ ಹತರಾದ ಮೀಸಲು ಪಡೆಯ ಪೇದೆಗಳ ಶವಕ್ಕಾಗಿ ಕಾದು ಕುಳಿತಿದ್ದವರನ್ನು ಉದ್ರೇಕಗೊಳಿಸಿ, ಆ ಉದ್ರೇಕದ ಸಂದರ್ಭದಲ್ಲಿ ತಮ್ಮ ಆರೆಸ್ಸೆಸ್, ಭಜರಂಗದಳ, ಎಬಿವಿಪಿಗಳನ್ನು ಬಳಸಿ ಗೂಂಡಾಗಿರಿಗೆ ಸಾರ್ವಜನಿಕ ಆಸ್ತಿಪಾಸ್ತಿಯ ನಾಶಕ್ಕೆ, ಪೊಲೀಸರ ಮೇಲಿನ ಹಲ್ಲೆಗೆ ಕಾರಣರಾಗಿದ್ದಾರೆ.

ಉಪನ್ಯಾಸಕ ಶ್ರೀಧರ್‌ರವರ ಮೇಲೆ ಹಲ್ಲೆ ಮಾಡುವ ಮೂಲಕ ತಾವೇ ಕಾನೂನು ಕೈಗೆತ್ತಿಕೊಳ್ಳುವ ದುಸ್ಸಾಹಸಕ್ಕೆ ಕೈ ಹಾಕುತ್ತಿದ್ದಾರೆ. ಬಿಜೆಪಿಯವರು ನಕ್ಸಲೀಯರನ್ನು ವಿರೋಧಿಸುತ್ತಿದ್ದಾರೆ, ಅವರ ಮೇಲೆ ಧಾಳಿ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಕೋಮುವಾದದ ವಿರೋಧಿಗಳು ನಕ್ಸಲೀಯರು ಪ್ರಗತಿಪರರು ಎಂಬ ಅಭಿಪ್ರಾಯಕ್ಕೆ ಬರುವುದು ಅವರನ್ನು ಬೆಂಬಲಿಸ ತೊಡಗುವುದು ಸರಿಯಲ್ಲ. ಹಾಗೆಯೇ ನಕ್ಸಲೀಯರನ್ನು ವಿರೋಧಿಸಿದ ಮಾತ್ರಕ್ಕೇ ಬಿಜೆಪಿ ಮತ್ತು ಸಂಘ ಪರಿವಾರದವರ ಕ್ರೌರ್ಯ, ಕೋಮು ಹಿಂಸೆ, ಜನಾಂಗೀಯ ಹತ್ಯೆಗಳು ಮುಚ್ಚಿಹೋಗುವುದಿಲ್ಲ.

ರಾಜ್ಯ ಸರ್ಕಾರದ ವರ್ತನೆ

ನಕ್ಸಲೀಯ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ಪ್ರಧಾನವಾದದ್ದು ಅವರಿಗೆ ಜನ ಬೆಂಬಲ ಸಿಗಲು ಕಾರಣವಾಗುವ ತೀವ್ರ ಶೋಷಣೆಯ ಸ್ಥಿತಿ. ಪ.ಬಂಗಾಳದಲ್ಲಿ ಆರಂಭವಾದ ನಕ್ಸಲೀಯ ಚಳುವಳಿ ಅಲ್ಲಿಯೂ ಹಾಗೆಯೇ ಕೇರಳದಲ್ಲಿಯೂ ಇಲ್ಲವೆಂಬಂತಾಗಿರುವುದಕ್ಕೆ, ಪ್ರಮುಖ ಕಾರಣ ಆ ರಾಜ್ಯಗಳಲ್ಲಿ ಕೈಗೊಂಡ ಭೂಸುಧಾರಣೆಯ ಕ್ರಮಗಳು. ಆದರಿಂದ ಭೂಮಾಲಕ ವರ್ಗದ ಶೋಷಣೆಗೆ ತಡೆ. ಅಲ್ಲದೆ ಸತತವಾಗಿ ನಕ್ಸಲ್‌ವಾದದ ದಿವಾಳಿಖೋರತನವನ್ನು ಸೈದ್ಧಾಂತಿಕವಾಗಿ, ರಾಜಕೀಯವಾಗಿ ಬಹಿರಂಗ ಪಡಿಸಿ ಜನರಲ್ಲಿ ಜಾಗೃತಿ ಮೂಡಿಸಿದ್ದು. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿಯೂ ಕೂಡ ಭೂಸುಧಾರಣಾ ಕಾನೂನಿನ ಬಿರುಕುಗಳನ್ನು ಬಳಸಿಕೊಂಡು, ಕಾನೂನಿಗೆ ವಂಚನೆಯನ್ನು ಮಾಡಿ ಇನ್ನೂ ಉಳಿದಿರುವ ಭೂಮಾಲಕತ್ವವನ್ನು ಕೊನೆಗೊಳಿಸಲು ಭೂಸುಧಾರಣೆಯ ಕಾನೂನಿಗೆ ತಿದ್ದುಪಡಿ ಹಾಗೂ ದೃಢವಾದ ಜಾರಿ ಆಗಲೇಬೇಕು. ಶ್ರೀಮಂತರನೇಕರು ಅರಣ್ಯ ಭೂಮಿಯನ್ನು ವಿಸ್ತಾರವಾಗಿ ಆಕ್ರಮಿಸಿರುವುದರ ಬಗ್ಗೆ ಕಣ್ಣುಮುಚ್ಚಿಕೊಂಡು ಬಡಜನರ, ಆದಿವಾಸಿಗಳನ್ನು ಒಕ್ಕಲೆಬ್ಬಿಸುತ್ತಿರುವ ಕ್ರಮಗಳನ್ನು ಕೈಬಿಡಬೇಕು. ಆದಿವಾಸಿಗಳಿಗೆ ಅರಣ್ಯದೊಳಗೆ ಜೀವನ ನಡೆಸುವುದು ಸಾಧ್ಯವಾಗುವಂತೆ ಅರಣ್ಯ ಉತ್ಪನ್ನಗಳಲ್ಲಿ ಹಕ್ಕು ನೀಡಬೇಕು. ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಸುಪ್ರೀಂಕೋರ್ಟಿನ ತೀರ್ಪಿನ ಹಾನಿಕರ ಪರಿಣಾಮಗಳನ್ನು ತಪ್ಪಿಸುವಂತೆ ಅರಣ್ಯ ಕಾನೂನಿನ ತಿದ್ದುಪಡಿ ಮಾಡಬೇಕು. ಜೊತೆಗೆ ಅಲ್ಲಿಯ ಬಡಜನರಿಗೆ ಕೆಲಸದ ಅವಕಾಶ ಮತ್ತು ಕೂಲಿ ಹೆಚ್ಚಳ ಆಗಬೇಕು.

ಈ ಅಂಶಗಳನ್ನು ಒಳಗೊಳ್ಳದ ಪ್ಯಾಕೇಜ್‌ಗಳು ಕೇವಲ ಹಣದ ಸೋರಿಕೆಯಲ್ಲಿ ಪರ್ಯವಸಾನವಾಗುವುದನ್ನು ತಪ್ಪಿಸಬೇಕು.

ಈ ಸಾಮಾಜಿಕ ಕಾರ್ಯಕ್ರಮವನ್ನು ದೃಢವಾಗಿ ಜಾರಿಗೆ ತರುವ ಜೊತೆಯಲ್ಲಿ ಮಾತ್ರ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಕ್ರಮಗಳು ಪರಿಣಾಮಕಾರಿಯಾಗುತ್ತವೆ.

ನಕ್ಸಲೀಯರ ವೈಭವೀಕರಣ

ಸಾಕೇತ್ ರಾಜನ್‌ರವರ ಹತ್ಯೆಯಾದ ಮೇಲೆ ಅವರನ್ನು ಹಾಗೆಯೇ ನಕ್ಸಲೀಯ ಚಳುವಳಿಯನ್ನು ವೈಭವೀಕರಿಸಲಾಗುತ್ತಿದೆ. ಅವರೊಬ್ಬ ಭಗತ್‌ಸಿಂಗ್, ಚೆಗೆವಾರ, ಕ್ರಿಸ್ಟೋಫರ್ ಕಾಡ್‌ವೆಲ್ ಎಂದೆಲ್ಲಾ ಹೊಗಳಿ ಸಂಭ್ರಮಿಸಲಾಗುತ್ತಿದೆ. ಇದು ಇಂದಿನ ಯುವ ಜನತೆಯನ್ನು ತಪ್ಪುದಾರಿಗೆ ಎಳೆಯುವ ಒಂದು ವಿಧಾನವಾಗಿ. ಹೀಗೆ ವೈಭವೀಕರಿಸಿ ಸಂಭ್ರಮಿಸುತ್ತಿರುವ ಅನೇಕರಿಗೆ ಭಗತ್ ಸಿಂಗ್ ವೈಯಕ್ತಿಕ ಹಿಂಸೆಯ ದಾರಿಯನ್ನು ತೊರೆದು. ಶೋಷಿತ ಜನಸಮೂಹಗಳನ್ನು ವ್ಯಾಪಕವಾಗಿ ಚಳುವಳಿಗೆ ಇಳಿಸುವ ದಾರಿಯೇ ಸರಿಯಾದದ್ದು ಎಂಬ ತೀರ್ಮಾನಕ್ಕೆ ಬಂದಿದ್ದರು ಎಂಬುದು ಗೊತ್ತಿಲ್ಲ. ಚೆಗೆವಾರ, ಕಾಡ್‌ವೆಲ್‌ರವರ ಸಿದ್ಧಾಂತ ಹಾಗೂ ದಾರಿಗೂ ಸಾಕೇತ್ ರಾಜನ್ ಹಾಗೂ ನಕ್ಸಲೀಯರ ದಾರಿಗೂ ಅಜಗಜಾಂತರ ವ್ಯತ್ಯಾಸವಿದೆಯೆಂಬುದು ತಿಳಿದಿಲ್ಲ. ಹಾಗೆಯೇ ಪ್ರಾಮಾಣಿಕತೆ, ತ್ಯಾಗ ಹಾಗೂ ಬಲಿದಾನಗಳ ಕಾರಣವಾಗಿ ಅವರನ್ನು ಮೆಚ್ಚುವವರು ಇದ್ದಾರೆ. ಆದರೆ ಈ ಪ್ರಾಮಾಣಿಕತೆ, ಬಲಿದಾನಗಳು ದೇಶಕ್ಕೆ, ಪ್ರಜಾಪ್ರಭುತ್ವಕ್ಕೆ ಹಾಗೂ ಆ ಮೂಲಕ ನಮ್ಮೆಲ್ಲರಿಗೆ ಗಂಡಾಂತರಕಾರಿಯಾದರೆ ಈ ಪ್ರಾಮಾಣಿಕತೆ, ಬುದ್ಧಿಮತ್ತೆ ಮೆಚ್ಚುವಂತಹದ್ದೇ ಎಂಬುದು ಎಲ್ಲರೂ ಯೋಚಿಸಬೇಕಾದ ವಿಷಯ.

ಇಂದು ಸಮಾಜದ ಎಲ್ಲರೂ, ಅವರೊಡನೆ ಸಂಪರ್ಕವಿರುವ ಎಲ್ಲರೂ, ಅದರಲ್ಲಿಯೂ ಕೆಲ ಬುದ್ಧಿಜೀವಿಗಳು ನಕ್ಸಲ್‌ವಾದಿ ಹಾದಿಯ ಅಪಾಯಗಳನ್ನು ಮನಗಂಡು ಶಸ್ತ್ರಗಳನ್ನು ತ್ಯಜಿಸಿ ಪ್ರಜಾಸತ್ತಾತ್ಮಕ ಮಾರ್ಗಕ್ಕೆ ಮರಳಿ ಎಂದು ಒತ್ತಾಯಿಸಬೇಕು. ಅವರೂ ಕೂಡ ಮರಳಬೇಕು. ಈಗಾಗಲೇ ಹಲವು ನಕ್ಸಲೀಯಗುಂಪುಗಳು ಪ್ರಜಾಪ್ರಭುತ್ವದಲ್ಲಿ ಭಾಗವಹಿಸುವ ನಿರ್ಣಯ ಕೈಗೊಂಡಿದ್ದಾರೆ. ಮಾಧ್ಯಮಗಳು, ಪತ್ರಿಕೆಗಳು ಈ ವಾದದ, ಮಾರ್ಗದ ಅಪಾಯಗಳ ಬಗ್ಗೆ ಜನತೆಗೆ ಸರಿಯಾದ ಶಿಕ್ಷಣ ನೀಡಬೇಕು.

ಕೊನೆಯದಾಗಿ ಸಿಪಿಐ(ಎಂ) ಮುಂದಿಡುವ ಪರಿಹಾರದ ಮಾರ್ಗಗಳ ಸಾರಾಂಶ ಹೀಗಿದೆ-

- ಮಾವೋವಾದಿ ಪಕ್ಷ ಎಂದು ಕರೆದುಕೊಳ್ಳುತ್ತಿರುವ ಪೀಪಲ್ಸ್ ವಾರ್ ಗುಂಪು - ಕರ್ನಾಟಕ ವಿಮೋಚನಾ ರಂಗವು, ಪ್ರಜಾಪ್ರಭುತ್ವಕ್ಕೆ, ಪ್ರಜಾಸತ್ತಾತ್ಮಕ ಚಳುವಳಿಗಳಿಗೆ ಹಾಗೂ ದೇಶಕ್ಕೆ ಗಂಡಾಂತರಕಾರಿ. ದೇಶ ವಿಭಜನೆಗೆ ಎಡೆಮಾಡಿಕೊಡುವ ದಾರಿ.
- ಇಂದಿನ ಭಾರತದ ವಾಸ್ತವ ಪರಿಸ್ಥಿತಿಯಲ್ಲಿ ಸಶಸ್ತ್ರ ಹೋರಾಟದ, ವೈಯಕ್ತಿಕ ಕೊಲೆಗಳ ನಕ್ಸಲೀಯರ ದಾರಿ ತಪ್ಪುದಾರಿ ಎಂದು ನಕ್ಸಲ್ ವಾದದ ಸೆಳೆತಕ್ಕೊಳಗಾಗಿರುವ ಯುವಕ-ಯುವತಿಯರು ಮನಗಾಣಬೇಕು. ಶಸ್ತ್ರಗಳನ್ನು ತ್ಯಜಿಸಿ ಪ್ರಜಾಸತ್ತಾತ್ಮಕ ಚಳುವಳಿಯ ಹಾದಿಗೆ ಮರಳಬೇಕು.
- ಶಸ್ತ್ರಗಳನ್ನು ತ್ಯಜಿಸಿದರೆ ಮಾತ್ರ ಮಾತುಕತೆ, ಸಂಧಾನಗಳು ಎಂಬ ಬಗ್ಗೆ ಕರ್ನಾಟಕ ಸರ್ಕಾರ ದೃಢವಾದ ನಿಲುವು ತೆಗೆದುಕೊಳ್ಳಬೇಕು.
- ನಕ್ಸಲೀಯ ಪ್ರಶ್ನೆಯನ್ನು ಒಂದು ಸಾಮಾಜಿಕ ಆರ್ಥಿಕ ಪ್ರಶ್ನೆಯನ್ನಾಗಿ ನೋಡಬೇಕು. ಕೇವಲ ಕಾನೂನು ಸುವ್ಯವಸ್ಥೆಯ ಪ್ರಶ್ನೆಯನ್ನಾಗಿ ನೋಡಬಾರದು. ಹಾಗೆಯೇ ಪ್ಯಾಕೇಜ್ ಘೋಷಣೆಗಳು ಈ ಸಮಸ್ಯೆಯನ್ನು ಪೂರ್ಣವಾಗಿ ಬಗೆಹರಿಸುವುದಿಲ್ಲ. ಸಾಮಾಜಿಕ ಕಾರ್ಯಕ್ರಮ ಈ ಕೆಳಗಿನ ಅಂಶಗಳಿಗೆ ಆದ್ಯತೆ ನೀಡಬೇಕಾಗುತ್ತದೆ -
  - ಕರ್ನಾಟಕದಲ್ಲಿ ತೀವ್ರವಾದ ಭೂಸುಧಾರಣೆ
  - ಆದಿವಾಸಿಗಳ ಜೀವನ ಹಾಗೂ ಸಂಸ್ಕೃತಿ ರಕ್ಷಣೆ
  - ಅರಣ್ಯದ ಉತ್ಪತ್ತಿಯಲ್ಲಿ ಆದಿವಾಸಿಗಳಿಗೆ, ಅರಣ್ಯದೊಳಗಿನ ಹಾಗೂ ಅಂಚಿನ ಬಡಜನರಿಗೆ ಹಕ್ಕು
  - ಅರಣ್ಯ ಭೂಮಿಯನ್ನು ಆಕ್ರಮಿಸಿದ ಶ್ರೀಮಂತರಿಂದ ಅದನ್ನು ವಶಪಡಿಸಿಕೊಳ್ಳುವುದು.
  - ಅರಣ್ಯ ಭೂಮಿಯಲ್ಲಿ ಕೃಷಿ ಮಾಡುತ್ತಿರುವ ಬಡಜನರಿಗೆ, ಆದಿವಾಸಿಗಳಿಗೆ ಪಟ್ಟಾ ನೀಡುವುದು.
  - ಈ ಬಗ್ಗೆ ಸುಪ್ರೀಂಕೋರ್ಟ್ ತೀರ್ಪಿನ ಹಾನಿಕರ ಪರಿಣಾಮಗಳನ್ನು ತಡೆಗಟ್ಟಲು ಅರಣ್ಯ ಕಾಯಿದೆ 1980 ಕ್ಕೆ ತಿದ್ದುಪಡಿ ತರಲು ಒತ್ತಾಯಿಸುವುದು.
  - ಆದಿವಾಸಿಗಳಿಗೆ, ಬಡಜನರಿಗೆ ಕೆಲಸ ಮತ್ತು ಕನಿಷ್ಠ ಕೂಲಿ ಖಾತರಿಗೊಳಿಸುವುದು. ಇತ್ಯಾದಿ

  ಈ ಕ್ರಮಗಳನ್ನು ಒಳಗೊಳ್ಳದ ಯಾವುದೇ ಪ್ಯಾಕೇಜ್ ಪರಿಣಾಮ ಬೀರುವುದಿಲ್ಲ.
- ಸಂಘ ಪರಿವಾರದವರು ಸೆಕ್ಯುಲರ್ ಬುದ್ಧಿಜೀವಿಗಳ ಮೇಲೆ ಮಾಡುತ್ತಿರುವ ವಾಗ್ದಾಳಿ ಕೋಮುವಾದದ ವಿರೋಧದ ಬಲಗುಂದಿಸುವ ಉದ್ದೇಶವುಳ್ಳದ್ದು ಎಂಬುದನ್ನು ಜನತೆ ಮನಗಾಣಬೇಕು.
- ಎ.ಬಿ.ವಿ.ಪಿ., ಆರೆಸ್ಸೆಸ್, ಭಜರಂಗದಳಗಳು ಬೆಂಗಳೂರಿನಲ್ಲಿ ಫೆ 11 ರ ರಾತ್ರಿ ಹಾಗೂ ಫೆ. 15 ರಂದು ನಡೆಸಿದ ದಾಂಧಲೆ ಹಾಗೂ ಗೂಂಡಾ ವರ್ತನೆಗೆ ಕಾರಣರಾದ ವರನ್ನು ಬಂಧಿಸಿ ಶಿಕ್ಷೆಗೊಳಪಡಿಸಬೇಕು.
- ಪತ್ರಿಕೆಗಳು, ಮಾಧ್ಯಮಗಳು ನಕ್ಸಲೀಯರ ಹಾಗೂ ಹತ್ಯೆಗೊಳಗಾದ ಹಾಗೂ ಕರ್ನಾಟಕ ವಿಮೋಚನಾ ರಂಗಗಳ ದಾರಿಯ ಅಪಾಯವನ್ನು ಮನಗಾಣಿಸುವ ವರದಿ, ಬರಹಗಳನ್ನು ಪ್ರಕಟಿಸಬೇಕೆಂದು ಸಿಪಿಐ(ಎಂ) ವಿನಂತಿ ಮಾಡುತ್ತದೆ.

ಮಾರ್ಗದರ್ಶಕ ಮಹಾಧಿವೇಶನ

ಸಿಪಿಐ(ಎಂ) ಮಹಾಧಿವೇಶನದ ಸಿದ್ಧತೆಯಲ್ಲಿ

- ಹರ್‌ಕಿಷನ್‌ಸಿಂಗ್ ಸುರ್ಜಿತ್

ಸಿಪಿಐ(ಎಂ)ನ ಮಹಾಧಿವೇಶನ ಎಂದರೇನು? ಅದರ ವಿಶಿಷ್ಟತೆ, ಮುಂದಿರುವ ಕಾರ್ಯಭಾರ, ಮುನ್ನಡೆಗಳನ್ನು ಗುರುತಿಸಿದ್ದಾರೆ ಕಾಂ. ಸುರ್ಜಿತ್

13 ವರ್ಷಗಳ ಹಿಂದೆ ಸೋವಿಯತ್ ಒಕ್ಕೂಟ ವಿಘಟನೆಯಾದೊಡನೆ ಬಂಡವಾಳಶಾಹಿ ಪರ - ಸಾಮ್ರಾಜ್ಯಶಾಹಿ ಪರ ಹಣೆಬರಹ ಬರೆಯುವವರು "ಬಂಡವಾಳಶಾಹಿ ವ್ಯವಸ್ಥೆಗಿದು ಶಾಂತಿಯುತ ಸ್ಥಿತ್ಯಂತರ", ಹಾಗೂ ಜಾಗತಿಕ ಹಂತದಲ್ಲಿ ಮಾರ್ಕ್ಸ್‌ವಾದ - ಲೆನಿನ್‌ವಾದದ ವೈಫಲ್ಯವಿದು ಎಂದಿದ್ದರು. ಅಂತೆಯೆ ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಎತ್ತಿಹಿಡಿದಿರುವ ಪಕ್ಷಗಳು ಸಹಾ ವಿಘಟನೆಗೊಳ್ಳಲಿವೆ ಎಂದಿದ್ದರು. ಆದರೆ ತದನಂತರದ ನೇಪಾಳದ ಚುನಾವಣೆ, ದಕ್ಷಿಣ ಆಫ್ರಿಕಾದಲ್ಲಿನ ವರ್ಣಬೇಧ ಆಡಳಿತ (ಅಪಾರ್‌ಥೀಡ್) ಕಳಚಿಹಾಕುವಿಕೆ ನಂತರದಲ್ಲಿನ ಚುನಾವಣೆಗಳು ಮತ್ತಿತರೆ ಬೆಳವಣಿಗೆಗಳು ಈ ಸ್ವಯಂ ಘೋಷಿತ ಹಣೆಬರಹ ಬರೆಯುವವರ ನುಡಿಗಳನ್ನು ಸುಳ್ಳಾಗಿಸಿದವು. ಸೋವಿಯತ್ ಒಕ್ಕೂಟದ ವಿಘಟನೆ ಆಘಾತಕಾರಿಯಾದರು ಸಹಾ ಮಾರ್ಕ್ಸ್‌ವಾದಿ - ಲೆನಿನ್‌ವಾದಿ ತತ್ವವನ್ನು ಅದು ನಿರಾಕರಿಸಿಲ್ಲ, ತತ್ವವು ಹಿಂದಿನಷ್ಟೆ ಪ್ರಸ್ತುತವಾಗಿ ಇಂದಿಗೂ ಇದೆ ಮತ್ತು ಈ ತತ್ವವನ್ನು ಎತ್ತಿಹಿಡಿದಿರುವ ಪಕ್ಷಗಳು ಮತ್ತಷ್ಟು ಶಕ್ತಿಯುತವಾಗಿ ಹಿಂತಿರುಗಲಿವೆ ಎಂಬ ಸಿಪಿಐ(ಎಂ) ವಿಮರ್ಶೆಯನ್ನು ದೃಢಪಡಿಸಿವೆ.

ಎಡಶಕ್ತಿಗಳ ಜೀವಂತಿಕೆ - ಅವರ ಸಿಟ್ಟು:

ಲ್ಯಾಟಿನ್ ಅಮೇರಿಕಾದಲ್ಲಿನ ಎಡ ಪಕ್ಷಗಳ ಗುರುತರವಾದಂತಹ ಬೆಳವಣಿಗೆಯು 13 ವರ್ಷಗಳ ಹಿಂದಿನ ನಮ್ಮ ಪರಿಶೀಲನೆ ಮತ್ತು ಅದರ ಆಧಾರಿತ ನಿಲುಮೆಯನ್ನ ದೃಢಪಡಿಸುತ್ತದೆ. ಆ ಪ್ರದೇಶದಲ್ಲಿನ ಸಾಮ್ರಾಜ್ಯಶಾಹಿ ವಿರೋಧಿ ಮನೋಭಾವನೆ ಮತ್ತು ಅಲ್ಲಿನ ಈ ಬೆಳವಣಿಗೆ ಎಷ್ಟು ಶಕ್ತಿಶಾಲಿಯಾಗಿವೆ ಎಂದರೆ ವಾಷಿಂಗ್‌ಟನ್ ಪರಿಣಿತರ ನಿದ್ದೆಗೆಡಿಸಿವೆ. ಮಾತ್ರವಲ್ಲದೆ, ಈ ಬದಲಾವಣೆಯ ಬಿರುಗಾಳಿಯನ್ನು ತಡೆಯಲಿಕ್ಕಾಗಿ ಅಹೋ ರಾತ್ರಿ ಅವರು ಶ್ರಮಿಸುವಂತೆ ಮಾಡಿದೆ. ಅಮೇರಿಕವು ಈ ಹಿಂದೆ ಮೋಸ, ಬಲ ಪ್ರಯೋಗ ಹಾಗೂ ಅಗತ್ಯಬಿದ್ದಲ್ಲಿ ಪಿತೂರಿಯನ್ನು ನಡೆಸಿಯಾದರು ಲ್ಯಾಟಿನ್ ಅಮೇರಿಕಾದ ಪ್ರದೇಶವನ್ನು ತನ್ನ ಹಿಡಿತದಲ್ಲಿರಿಸಿ ತನ್ನ ಹಿತ್ತಲಾಗಿಸಿಕೊಳ್ಳಲು ನಡೆಸುತ್ತಿದ್ದ ಪ್ರಯತ್ನಗಳ ಪರಿಣಾಮವಾಗಿ ಇದು ಸಹಜವಾದದ್ದು.

ಭಾರತದಲ್ಲೂ ಸಹಾ ಈ ಭವಿಷ್ಯ ಹಣೆಬರಹ ಬರೆಯುವವರ ಧಾಳಿಗಳ ನೇರ ಗುರಿ ಸಿಪಿಐ(ಎಂ) ಆಗಿದೆ, ಆದರೆ ಇತ್ತೀಚೆಗೆ ಅವರ ವಿರೋಧದ ಧ್ವನಿ ಸ್ವಲ್ಪ ಬದಲಾಗಿದೆ ಅಷ್ಟೆ. ಇಲ್ಲಿನ ಕಮ್ಯುನಿಸ್ಟ್ ಚಳುವಳಿ ಇನ್ನೇನು ಇಲ್ಲದಾಗಲಿದೆ ಎಂದು ನುಡಿಯುತ್ತಿದ್ದ ಅವರು ನಮ್ಮ ಚಳುವಳಿ ಇನ್ನು ಜೀವಂತವಾಗಿರುವ ಕಾರಣ ನಮ್ಮಲ್ಲೆ ತಪ್ಪುಗಳನ್ನು ಹುಡುಕಲಾರಂಭಿಸಿದ್ದಾರೆ. ಭಾರತದ ರಾಜಕೀಯದಲ್ಲಿ ಸಿಪಿಐ(ಎಂ)ನ ಬೆಳವಣಿಗೆ ಹಾಗು ಅದರ ಹೆಚ್ಚುತ್ತಿರುವ ಪ್ರಭಾವವೂ ಸೇರಿದಂತೆ ಒಟ್ಟಾರೆ ಎಡಪಕ್ಷಗಳ ಪಾತ್ರವು ಬಂಡವಾಳಶಾಹಿ - ಸಾಮ್ರಾಜ್ಯಶಾಹಿಗಳು ಎಡಪಕ್ಷಗಳ ಮೇಲೆ ನಡೆಸಿರುವ ಅಪಪ್ರಚಾರಕ್ಕೆ ಹಾಗೂ ಅವರ ಸಿಟ್ಟಿಗೆ ಕಾರಣವಾಗಿದೆ.

2004 ಮೇ ನಂತರವಷ್ಟೆ ಎಡಪಕ್ಷಗಳ ಪಾತ್ರ ಹೆಚ್ಚಾಗಿದೆ ಎಂದಲ್ಲ, ಈ ಹಿಂದಿನಿಂದಲು ಅದು ನಿರಂತರವಾಗಿ ಬೆಳೆಯುತ್ತಾ ಬಂದಿದೆ. ಆದರೆ ಅದರ ಬೆಳವಣಿಗೆಯ ಪ್ರಮಾಣ ಸಾಕಷ್ಟು ತೃಪ್ತಿಕರವಾಗಿರಲಿಲ್ಲವಷ್ಟೆ. 2004 ಮೇ ನಂತರ ಲೋಕಸಭೆಯಲ್ಲಿ ಹೆಚ್ಚಾಗಿರುವ ಎಡ ಪಕ್ಷಗಳ ಪ್ರಾತಿನಿಧ್ಯವು ಚುನಾವಣಾ ರಂಗದಲ್ಲಿ ಈ ವಾಸ್ತವಾಂಶದ ಪ್ರತಿಫಲನವಷ್ಟೆ.

ಕೇಡರ್‌ಗಳ ಹೆಚ್ಚುತ್ತಿರುವ ದೃಢ ಸಂಕಲ್ಪ :

ಈ ನಡುವೆ ಸೋವಿಯತ್ ಹಿನ್ನಡೆ ನಂತರವೇ ನಡೆದ ಚೆನ್ನೈ ಮಹಾದಿವೇಶನವನ್ನು ಒಳಗೊಂಡಂತೆ ಸಿಪಿಐ(ಎಂ) 4 ಮಹಾಧಿವೇಶನಗಳನ್ನು ಕಳೆದ 13 ವರ್ಷಗಳಲ್ಲಿ ನಡೆಸಿದೆ. ಜನತೆ ಎದುರಿಸುತ್ತಿರುವ ಸಮಸ್ಯೆಗಳ ಎತ್ತಿ ಹೋರಾಟ ನಡೆಸುವುದರಲ್ಲಿ ಹಾಗೂ ಪಕ್ಷದ ಸಂದೇಶವನ್ನು ಜನತೆ ನಡುವೆ ತೆಗೆದುಕೊಂಡು ಹೋಗುವಲ್ಲಿ ತೊಡಗಿರುವ ಬದ್ಧತೆಯುಳ್ಳ ಹಾಗೂ ತ್ಯಾಗಕ್ಕೆ ಸಿದ್ಧವಿರುವ ನಮ್ಮ ಕೇಡರ್‌ಗಳಲ್ಲಿನ ಹೆಚ್ಚುತ್ತಿರುವ ವಿಶ್ವಾಸ ಹಾಗೂ ಸಂಕಲ್ಪವನ್ನು ಪ್ರತಿ ಮಹಾಧಿವೇಶನವು ಪ್ರತಿಫಲಿಸಿದೆ. ಈಗ ಚೆನ್ನೈ (ಜನವರಿ 1992), ಚಂದಿಗಡ (ಏಪ್ರಿಲ್ 1995), ಕೋಲಕತಾ (ಅಕ್ಟೋಬರ್ 1998) ಮತ್ತು ಹೈದರಾಬಾದ್ (ಮಾರ್ಚ್ 2002) ನಂತರ ಪಕ್ಷವು ತನ್ನ 18ನೇ ಮಹಾಧಿವೇಶನವನ್ನು ಬರುವ ಏಪ್ರಿಲ್‌ನಲ್ಲಿ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿಯೆ ನಡೆಸಲು ಸಜ್ಜಾಗಿದೆ. ಪಕ್ಷದ ಮಹಾಧಿವೇಶನವನ್ನು ದೆಹಲಿಯಲ್ಲಿ ನಡೆಸಲು ಮಾಡಿರುವ ತೀರ್ಮಾನವೇ ಸವಾಲುಗಳನ್ನು ಸ್ವಿಕರಿಸಿ ಮುಂದಿನ ಬೆಳವಣಿಗೆಗಳಲ್ಲಿ ಬಲವಾದ ಪ್ರಭಾವ ಬೀರಬೇಕೆಂಬ ಪಕ್ಷದ ದೃಢ ಸಂಕಲ್ಪದ ಸೂಚಕವಾಗಿದೆ. ದೆಹಲಿ ಮತ್ತು ಅದರ ಸುತ್ತಲಿನ ಪ್ರದೇಶಗಳು ಯಾವುದೇ ಆಧಾರದಲ್ಲಿ ನಮ್ಮ ಭದ್ರ ನೆಲೆಯಲ್ಲದಿದ್ದರು ಸಹಾ ದೆಹಲಿಯಲ್ಲಿ 18ನೇ ಮಹಾಧಿವೇಶನವನ್ನು ನಡೆಸಲಾಗುತ್ತಿದೆ.

ಮಹಾಧಿವೇಶನಕ್ಕೆ ಮುನ್ನೆ ಶಾಖೆ, ಪ್ರದೇಶ, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಸಮ್ಮೇಳನಗಳನ್ನು ಸಂಘಟಿಸುವುದು ಕಮ್ಯೂನಿಸ್ಟ್ ಪಕ್ಷದ ಪ್ರಜಾಸತ್ತಾತ್ಮಕ ಕಾರ್ಯವಿಧಾನದ ಭಾಗವಾಗಿದೆ. ತಳಹಂತದ ಸಮ್ಮೇಳನಗಳಿಂದ ಸದ್ಯದ ಮೇಲಿನ ಸಮ್ಮೇಳನಗಳಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಕಾರ್ಯ ನಮ್ಮ ಪಕ್ಷದಲ್ಲಿ ನಡೆಯುತ್ತದೆ. ಮಹಾಧಿವೇಶನಕ್ಕೆ ಕನಿಷ್ಠ ಎರಡು ತಿಂಗಳ ಮುನ್ನ ಬಿಡುಗಡೆ ಮಾಡಲಾಗುವ ಕರಡು ರಾಜಕೀಯ ವರದಿಯನ್ನು ಪಕ್ಷದ ಕಾರ್ಯಕರ್ತರು ತಮ್ಮ ಸಂಬಂಧಿತ ಹಂತಗಳಲ್ಲಿ ಕುಲಂಕುಶವಾಗಿ ಚರ್ಚಿಸಿ ವಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ತಿದ್ದುಪಡಿಗಳನ್ನು ಹಾಗೂ ಸಲಹೆಗಳನ್ನು ರೂಪಿಸಿ ಕೇಂದ್ರ ಸಮಿತಿಗೆ ಕಳಿಸುತ್ತಾರೆ. ಕೇಂದ್ರ ಸಮಿತಿಯು ಈ ತಿದ್ದುಪಡಿಗಳನ್ನು ಪರಿಗಣಿಸಿ ಅದರ ಆಧಾರದಲ್ಲಿ ವರದಿಯನ್ನು ತಯಾರಿಸಿ ಪಕ್ಷದ ಮಹಾಧಿವೇಶನದ ಮುಂದೆ ಇಡುತ್ತದೆ. ಈ ರೀತಿ ವಿವಿಧ ಹಂತಗಳಲ್ಲಿನ ಪಕ್ಷದ ಕೇಡರ್‌ಗಳು ತಮ್ಮ ಕೊಡುಗೆಯನ್ನು ಪಕ್ಷದ ನೀತಿ ನಿರೂಪಣೆಯಲ್ಲಿ ನೀಡುತ್ತಾರೆ. ಈ ಬಾರಿಯೂ ಸಹ ಕೇಂದ್ರ ಸಮಿತಿಯು 18ನೇ ಮಹಾಧಿವೇಶನಕ್ಕೆ ಕರಡು ರಾಜಕೀಯ ನಿರ್ಣಯವನ್ನು ಬಿಡುಗಡೆ ಮಾಡಿದೆ. ದೇಶಾದ್ಯಂತ ಇರುವ ಹತ್ತಾರು ಸಾವಿರ ಇರುವ ಪಕ್ಷದ ಶಾಖೆಗಳಲ್ಲಿ ಈ ಕುರಿತು ಚರ್ಚೆಗಳು ನಡೆದಿವೆ.

ಪಕ್ಷದ ಕೇಡರ್‌ಗಳು ತಮ್ಮ ಹಕ್ಕುಗಳನ್ನು ಚಲಾಯಿಸುವ ಹಾಗೂ ಕರ್ತವ್ಯಗಳನ್ನು ಪ್ರಜಾಸತ್ತಾತ್ಮಕವಾಗಿ ಶಿಸ್ತಿನೊಂದಿಗೆ ಮತ್ತು ಬದ್ಧತೆಯಿಂದ ಮುಕ್ತವಾಗಿ ನಿಭಾಯಿಸುತ್ತಾರೆ. ಫ್ಯಾಸಿಸ್ಟ್ ಸಂಘಟನೆಗಳು (ಉದಾ - ಆರ್.ಎಸ್.ಎಸ್.) ತನ್ನ ಕೇಡರ್‌ಗಳಿಂದ ನಿರೀಕ್ಷಿಸುವ ಅಂಧಶಿಸ್ತಿನ ರೀತಿಯದಲ್ಲ ಇದು. ಬದಲಾಗಿ ಜನಸಮೂಹಗಳಿಗೆ ಬದ್ಧತೆಯೊಂದಿಗೆ, 'ಉದಾತ್ತ ಗುರಿಯ' ಸಾಧನೆಗೆ ಇರುವ ಅಸ್ತ್ರವಾದ ಪಕ್ಷಕ್ಕೆ ಇರುವ ತಮ್ಮ ಬದ್ಧತೆಯ ಮೂಲಕ ತಮ್ಮೊಳಗೆ ತಾವೆ ರೂಪಿಸಿಕೊಳ್ಳುವ ಉಕ್ಕಿನ ಶಿಸ್ತು ಇದಾಗಿದೆ. ಮನುಷ್ಯನಿಂದ ಮನುಷ್ಯನ ಮತ್ತು ರಾಷ್ಟ್ರದಿಂದ ರಾಷ್ಟ್ರದ ಶೋಷಣೆಯನ್ನು ವಾಸ್ತವಿಕವಾಗಿ ನಿರ್ಮೂಲನೆ ಮಾಡುವಂತಹ ಮೂಲಭೂತ ಸಾಮಾಜಿಕ ಬದಲಾವಣೆಯೇ ಈ "ಉದಾತ್ತ ಗುರಿ". ಇದು ನಮ್ಮ ಕೇಡರ್‌ಗಳನ್ನು ವಿಶ್ವಾದ್ಯಂತ ವಿಭಿನ್ನ ಸನ್ನಿವೇಶಗಳಲ್ಲಿ ವಿವಿಧ ರಾಷ್ಟ್ರಗಳಲ್ಲಿ ನಡೆದಿರುವ ಸಮರದಲ್ಲಿ ಭಾಗವಾಗಿಸಿರುವ ವಿಶ್ವವ್ಯಾಪಿ ಸೈನ್ಯದ ಭಾಗವನ್ನಾಗಿಸುತ್ತದೆ. ಹಾಗಾಗಿಯೇ ನಾವು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಗೆ ಹೆಚ್ಚು ಮಹತ್ವ ನೀಡುವುದು.

ಯುವ ಉತ್ಸಾಹ ಭರಿತ ಪಕ್ಷ

ಮಹಾಧಿವೇಶನಕ್ಕೆ ಮುನ್ನ ನಡೆದಿರುವ ವಿವಿಧ ರಾಜ್ಯ ಹಾಗೂ ಕೆಳಹಂತದ ಪಕ್ಷದ ಸಮ್ಮೇಳನಗಳಲ್ಲಿ ಈ ಸಂಕಲ್ಪವನ್ನೇ ನಾವು ಕಂಡಿರುವುದು. ಸಮ್ಮೇಳನಗಳ ಮೊದಲ ತಯಾರಿ ಕೆಲಸಗಳು ಮತ್ತು ಆ ಸಂದರ್ಭದಲ್ಲಿನ ವಿಶಾಲ ಸಾಮೂಹಿಕ ರ್‍ಯಾಲಿಗಳು ಜನಸಾಮಾನ್ಯರ ನಡುವೆ ಹೆಚ್ಚಿರುವ ಪಕ್ಷದ ಪ್ರತಿಷ್ಠೆ ಹಾಗೂ ಪ್ರಭಾವದ ಸೂಚನೆಗಳಾಗಿವೆ. ಜನ ಸಮೂಹಗಳು ಈ ಸಮ್ಮೇಳನಗಳನ್ನು ಹಾಗೂ ಅದರ ರ್‍ಯಾಲಿಗಳನ್ನು ಯಶಸ್ವಿಗೊಳಿಸಲು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿವೆ ಹಾಗೂ ಕೊಡುಗೆ ನೀಡಿವೆ.


ಪ.ಬಂಗಾಳ ಸಮ್ಮೇಳನದಲ್ಲಿ ಧ್ವಜಾರೋಹಣಗೈದ ಸುರ್ಜಿತ್ ಜೊತೆಗೆ ಜ್ಯೋತಿಬಸು, ಬಿಮನ್, ಬುದ್ಧದೇವ್

ಸಿಪಿಐ(ಎಂ)ನ ಆಂಧ್ರ ಪ್ರದೇಶದ ಇತ್ತೀಚಿನ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ವಾರಂಗಲ್‌ನಲ್ಲಿ ನಡೆದ ಬೃಹತ್ ರ್‍ಯಾಲಿಯು ಇಂಥಹ ಹೆಚ್ಚುತ್ತಿರುವ ನಮ್ಮ ಪ್ರಭಾವದ ಒಂದು ಉದಾಹರಣೆಯಾಗಿದೆ.

ಎರಡು ಅಂಶಗಳು ಇದರಲ್ಲಿ ಗಮನಾರ್ಹವಾದವುಗಳು. ಮೊದಲನೆಯದು ಸಿಪಿಐ(ಎಂ)ನ ದೊಡ್ಡ ಪ್ರಮಾಣ ಸದಸ್ಯತ್ವವು ತುಂಬು ಉತ್ಸಾಹ ಉಳ್ಳ, ಆದರ್ಶವುಳ್ಳ, ಹಾಗೂ ಸಂಕಲ್ಪವುಳ್ಳ ಯುವಕ- ಯುವತಿಯರಿಂದ ಕೂಡಿದೆ. ವಸ್ತವದಲ್ಲಿ ಶೇಕಡಾ 85 ರಷ್ಟು ಸದಸ್ಯತ್ವವು 1990ರ ನಂತರ ಪಕ್ಷವನ್ನು ಸೇರಿದ ಸದಸ್ಯರನ್ನೊಳಗೊಂಡಿದೆ. ಇದರಲ್ಲಿನ ದೊಡ್ಡ ಭಾಗವು 25 ರಿಂದ 30 ವರ್ಷಗಳ ವಯೋಮಿತಿಯದ್ದಾಗಿದೆ. ಇದು ಪಕ್ಷದ ಅತಿ ಅಮೂಲ್ಯವಾದ ಆಸ್ತಿಯಾಗಿದೆ. ಬದಲಾವಣೆಗಾಗಿ ಹೋರಾಟವನ್ನು ಪರಿಣಾಮಕಾರಿಯಾಗಿಸಲು ಹಾಗೂ ಯಶಸ್ವಿಯಾಗಿಸಲು ನಮ್ಮಲ್ಲಿರುವ ಈ ಅಸ್ತ್ರವನ್ನು ಮತ್ತಷ್ಟು ಮೊಣಚುಗೊಳಿಸಲು ಈ ಕೇಡರ್‌ಗಳನ್ನು ರಾಜಕೀಯವಾಗಿ ಹಾಗೂ ಸೈದ್ಧಾಂತಿಕವಾಗಿ ತರಬೇತಿಗೊಳಿಸುವ ಹೊಣೆಗಾರಿಕೆಯನ್ನು ಪಕ್ಷದ ನಾಯಕತ್ವದ ಮೇಲೆ ಇದು ಹೊರಿಸಿದೆ.

ಪ್ರಸ್ತುತ ಹೋರಾಟದ ಸಂದರ್ಭ

ಎರಡನೆಯದಾಗಿ ಪ್ರಸ್ತುತ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯು ತೀವ್ರ ಸಂಕೀರ್ಣತೆಯಿಂದ ಕೂಡಿದ್ದು ವಿಭಿನ್ನ ಆಯಾಮವುಳ್ಳ ಸವಾಲುಗಳನ್ನು ಒಳಗೊಂಡಿದೆ. ಆದರೆ ಅದೇ ಸಮಯದಲ್ಲಿ ಮುನ್ನಡೆಗೂ ಸಹ ಅಷ್ಟೆ ವಿಭಿನ್ನ ಆಯಾಮಗಳ ಸಾಧ್ಯತೆಗಳನ್ನು ಒಳಗೊಂಡಿದೆ. ಈ ಹಿಂದೆ ಅನೇಕ ಬಾರಿ ಚರ್ಚಿಸಿರುವಂತೆ ಸಾಮ್ರಾಜ್ಯಶಾಹಿಯೂ ತನ್ನ ಎಲ್ಲಾ ಕೆಟ್ಟ ಆಕ್ರಮಣಕಾರಿ ಹಂತವನ್ನು ತಲುಪಿದ್ದು, ಇಡಿ ವಿಶ್ವಾದ್ಯಂತ ಅದನ್ನು ಹರಿಬಿಟ್ಟಿದೆ. ಅದೇ ಸಂದರ್ಭದಲ್ಲಿ ಸಾಮ್ರಾಜ್ಯಶಾಹಿಗೆ ಪ್ರತಿರೋಧವು ಸಹ ವೇಗವಾಗಿ ಬೆಳೆದುಬರುತ್ತಿದೆ. ಸಾಮ್ರಾಜ್ಯಶಾಹಿ ವಿರೋಧಿ ಗುಂಪುಗಳೊಳಗಿನ ಭಿನ್ನಾಭಿಪ್ರಾಯಗಳ ನಡುವೆಯೂ ಇದೆಲ್ಲವೂ ಒಂದು ಅಲೆಯಾಗಿ ಕ್ರೂಡಿಕರಣಗೊಳ್ಳುವ ಸಾಧ್ಯತೆ ಹೆಚ್ಚಿದೆ. ಅಂತೆಯೆ ರಾಷ್ಟ್ರಮಟ್ಟದಲ್ಲಿಯೂ ಸಹ 2002 ಮಾರ್ಚ್‌ನಲ್ಲಿ ನಡೆದ ಪಕ್ಷದ ಹೈದರಾಬಾದ ಮಹಾಧಿವೇಶನ ಗುರ್ತುಪಡಿಸಿದ್ದ ಮೂರು ಉದ್ದೇಶಗಳನ್ನು ಈಡೇರಿಸಲು ಸಾಧ್ಯವಾಗಿದೆ. ಕೋಮುವಾದಿ ಶಕ್ತಿಗಳು ಮತ್ತು ಬಿಜೆಪಿ ನೇತೃತ್ವದ ಮೈತ್ರಿ ಕೂಟವನ್ನು ಅಧಿಕಾರದಿಂದ ಕಿತ್ತೊಗೆಯಲಾಗಿದೆ, ಅದರ ಬದಲಿಗೆ ಜಾತ್ಯಾತೀತ ಮೈತ್ರಿ ಕೂಟವು ಅಧಿಕಾರಕ್ಕೆ ಬಂದಿದೆ ಮತ್ತು ಲೋಕ ಸಭೆಯೊಳಗಿನ ಎಡ ಪಕ್ಷಗಳ ಬಲವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗಿದೆ. ಹೈದ್ರಾಬಾದನಲ್ಲಿ ನಾವು ನಿರೂಪಿಸಿದ ನಿಲುಮೆಯು ಸರಿಯಾದುದು ಎಂಬುದರ ಸೂಚಕವಾಗಿ ನಾವು ಇದನ್ನು ಬಳಸಬಹುದು.

ಆದರೆ ಈ ಸಾಧನೆಗಳೆ ನಮ್ಮೆಲ್ಲ ಹೋರಾಟಗಳ ಕೊನೆಯೆಂದು ಮಾರ್ಕ್ಸ್‌ವಾದಿಗಳಾದ ನಾವು ಬಾವಿಸಲಾರೆವು. ಇತ್ತೀಚಿನ ಸೋಲು ತದನಂತರದ ಹಿನ್ನಡೆಯ ನಡುವೆಯೂ ಫ್ಯಾಸಿಸ್ಟ್ ಆರ್.ಎಸ್.ಎಸ್ ನೇತೃತ್ವದ ಪಡೆಗೆ ಹಿಂತಿರುಗಿ ಬರಲು ಎಲ್ಲ ಸಾಮರ್ಥ್ಯವು ಇದೆ. ಕೋಮುವಾದಿ ಶಕ್ತಿಗಳನ್ನು ಪ್ರತಿರೋಧಿಸಿ ಸೋಲಿಸುವುದು ಇಂದಿನ ಸನ್ನಿವೇಶದಲ್ಲಿ ಎಡ ಪ್ರಜಾಸತ್ತಾತ್ಮಕ ಶಕ್ತಿಗಳ ಮುನ್ನಡೆಯಾಗಿದೆ. ಆ ಮೂಲಕ ಪರ್ಯಾಯ ನೀತಿಗಳಿಗಾಗಿನ ಹೋರಾಟಗಳನ್ನು ಕಟ್ಟಿ ಬೆಳೆಸಬೇಕಿದೆ. ಆದ್ದರಿಂದಲೇ ಯುಪಿಎ ಸರ್ಕಾರಕ್ಕೆ ನಾವು ಹೊರಗಿನಿಂದ ಬೆಂಬಲ ನೀಡಿರುವುದು.

ಅದೇ ಸಮಯದಲ್ಲಿ ಯುಪಿಎ ಸರ್ಕಾರದ ಆರ್ಥಿಕ ನೀತಿಗಳ ಬಗ್ಗೆ ನಮಗೇನು ಭ್ರಮೆಗಳಿರಬೇಕಿಲ್ಲ. ಕಳೆದ 14 ವರ್ಷಗಳಿಂದ ಜನತೆಗೆ ಸಂಕಷ್ಟವನ್ನು ಒದಗಿಸಿದ ವಿಶ್ವ ಬ್ಯಾಂಕ್, ಐಎಮ್‌ಎಫ್ ನಿರ್ದೇಶನದ ನೀತಿಗಳನ್ನೆ ಈ ಸರ್ಕಾರವು ಅನುಸರಿಸಿದೆ. ಸರ್ಕಾರದ ಕಾರ್ಯನಿರ್ವಹಣೆಯಲ್ಲೆ ಕ್ರಾಂತಿಕಾರಕ ಬದಲಾವಣೆಯಾಗದ ಹೊರತು ಈ ನೀತಿಗಳು ಜನತೆಯ ಮೇಲೆ ಮತ್ತಷ್ಟು ಸಂಕಷ್ಟಗಳನ್ನು ಹೊರಿಸಲಿವೆ. ಸದ್ಯಕ್ಕೆ ಎಡ ಪಕ್ಷಗಳು ಅಂತಹ ಕ್ರಾಂತಿಕಾರಕ ದೃಷ್ಟಿಕೋನವನ್ನು ಆಡಳಿತಕ್ಕೆ ನೀಡಲಾರವು. ಆದರೆ ಜನತೆಗೆ ಪರಿಹಾರ ಒದಗಿಸುವಂತಹ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಒತ್ತಾಯ ಮಾಡಬಲ್ಲವು ಇದು ಸಹ ಪರ್ಯಾಯ ನೀತಿಗಳಿಗಾಗಿನ ಹೋರಾಟದ ಒಂದು ಭಾಗ. ಇದು ಕ್ರಾಂತಿಕಾರಕ ಬದಲಾವಣೆಗೆ ಅಗತ್ಯವಿರುವ ಹೋರಾಟಗಳಿಗೆ ಸಜ್ಜುಗೊಳಿಸಲಿದೆ.

ಪುಟ 10

ಬಿರ್ಲಾ ಮಾಲೀಕತ್ವದ ಹರಿಹರ ಪಾಲಿಫೈಬರ್ಸ್‌ನಲ್ಲಿ ಸಿಐಟಿಯು ಜಯಭೇರಿ

ಎಐಟಿಯುಸಿ ಯ ತಂಡಕ್ಕೆ ಮುಖಭಂಗ

ಆದಿತ್ಯ ಬಿರ್ಲಾ ಸಮೂಹ ಕಂಪನಿಗಳ ಭಾಗವಾಗಿರುವ, ಕುಮಾರಮಂಗಳಂ ಬಿರ್ಲಾ ಮಾಲೀಕತ್ವದ ಹರಿಹರ ಪಾಲಿಫೈಬರ್ಸ್ ಕಾರ್ಖಾನೆಯ ಕಾರ್ಮಿಕರ ಸಂಘದ ದ್ವಿವಾರ್ಷಿಕ ಚುನಾವಣೆಯಲ್ಲಿ ಸಿಐಟಿಯು ನೇತೃತ್ವದ 'ಆಲದ ಮರ' ಗುರುತಿನ ತಂಡ ಜಯಭೇರಿ ಬಾರಿಸಿದೆ. ಎಐಟಿಯುಸಿ ಯ ಮುಖಂಡರಾದ ಅನಂತಸುಬ್ಬರಾವ್ ಅವರ ನೇತೃತ್ವದ ತಂಡ ಭಾರಿ ಹಣದ ಹೊಳೆ ಹರಿಸಿದರೂ ನಿರ್ಣಾಯಕ ಸೋಲನ್ನು ಅನುಭವಿಸಿದಂತಾಗಿದೆ. ಸಿಐಟಿಯು ತಂಡದ ಅಧ್ಯಕ್ಷ ಸ್ಥಾನದಲ್ಲಿ ಕಾಂ. ಪ್ರಸನ್ನಕುಮಾರ್ ನೇತೃತ್ವದಲ್ಲಿ ಕಾರ್ಮಿಕರ ಬಹುಮತದ ಬೆಂಬಲದೊಂದಿಗೆ ಆಯ್ಕೆ ಮಾಡಲಾಗಿದೆ.

ಹರಿಹರ ಪಾಲಿಫೈಬರ್ಸ್ ಕಾರ್ಖಾನೆಯ ಕಾರ್ಮಿಕರ ಚಳುವಳಿಯಲ್ಲಿ ಕಳೆದ ಮೂರು ದಶಕಗಳಿಂದಲೇ ಎಐಟಿಯುಸಿ-ಸಿಐಟಿಯು ನಡುವೆ ಸಂಘರ್ಷ ನಡೆಯುತ್ತಲೇ ಬಂದಿದೆ. ಈ ಹಿಂದೆ ಎಐಟಿಯುಸಿ ನಾಯಕತ್ವ ಕಾರ್ಮಿಕರ ಮೇಲೆ ಗೂಂಡಾಗಿರಿ ನಡೆಸುವ ಮೂಲಕ ತನ್ನ ಮೇಲುಗೈಯನ್ನು ಪಡೆದಿತ್ತು. ಈ ದೌರ್ಜನ್ಯದ ವಿರುದ್ಧ ಹೋರಾಟದಲ್ಲಿ ಕಾಂ. ವಿ.ಜಿ.ಕೆ.ನಾಯರ್ ಅವರ ನೇತೃತ್ವದಲ್ಲಿ ಹಲವು ಧೀರೋದಾತ್ತ ಹೋರಾಟಗಳನ್ನು ನಡೆಸಿ ಎಐಟಿಯುಸಿ ನಾಯಕತ್ವದ ಗೂಂಡಾಗಿರಿಯನ್ನು ಹಾಗೂ ಮಾಲೀಕರ ಶೋಷಣೆಯನ್ನು ಏಕಕಾಲದಲ್ಲಿ ಎದುರಿಸಿ ಹಲವು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸಿ ಜೈಲುವಾಸ ಸೇರಿದಂತೆ ಹಲವು ದಿಟ್ಟ ತ್ಯಾಗಗಳಿಂದ ಬೆಳೆದುಬಂದ ಪರಂಪರೆ ಸಿಐಟಿಯುಗೆ ಇದೆ. ಈ ಹೋರಾಟದ ಹಾದಿಯಲ್ಲಿ ಹಲವು ಸಾಧನೆಗಳ ಸರಮಾಲೆಯೇ ಇದೆ. 'ನೀಲಿಬಟ್ಟೆ' ಕಾರ್ಮಿಕರೆಂದೇ ಪ್ರತೀತಿ ಪಡೆದಿದ್ದ 105 ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವಂತೆ ಮಾಡಿದ್ದು, ತುಟ್ಟಿಭತ್ಯೆ ಅಂದರೆ ಏನೆಂದೇ ತಿಳಿಯದ ಕಾರ್ಮಿಕರಲ್ಲಿ ಜಾಗೃತಿ ಮೂಡಿಸಿ ನಿರಂತರ ಬೆಲೆ ಏರಿಕೆಗೆ ತಕ್ಕಂತೆ ವೇತನದಲ್ಲಿ ಹೆಚ್ಚಳವಾಗುವಂತಹ ಕ್ರಮಗಳನ್ನು ಒಪ್ಪಂದಗಳಲ್ಲಿ ಸಾಧನೆ ಮಾಡಿದ್ದೂ ಕಾರ್ಮಿಕರ ಜೀವನಮಟ್ಟ ಮೇಲೇರಿಸುವಲ್ಲಿ ಹತ್ತು ಹಲವು ಹೋರಾಟಗಳು ನಡೆದಿವೆ. ಅಷ್ಟೇ ಅಲ್ಲ ಕಾಂ. ಸೂರ್ಯನಾರಾಯಣ ರಾವ್ ಅವರು ಸಂಘದ ನಾಯಕತ್ವದಲ್ಲಿ ಆರು ವರ್ಷಗಳು ಮುನ್ನಡೆಸಿದ್ದು ಕಾರ್ಮಿಕರು ಮರೆಯಲಾಗದಂತಹ ಸೌಲಭ್ಯಗಳನ್ನು ಹೆಚ್ಚಿಸುವಲ್ಲಿ ಪಾತ್ರವಹಿಸಿದ್ದು ಅಚ್ಚಳಿಯದೇ ಉಳಿದಿದೆ.

ಇಂತಹ ಹೋರಾಟದ ಹಿನ್ನೆಲೆಯಿರುವ ಹರಿಹರ ಪಾಲಿಫೈಬರ್ಸ ಕಾರ್ಮಿಕರ ಸಂಘದ ಚುನಾವಣೆಯಲ್ಲಿ ಎಐಟಿಯುಸಿ ಯ ಅಬ್ಬರದ ಪ್ರಚಾರದ ನಡುವೆಯೂ ಸಿಐಟಿಯು ತಂಡದಿಂದ ಮೊದಲಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ಕಣಕ್ಕೆ ಇಳಿಸಲಾಗಿದ್ದ ಕಾಂ. ಪ್ರಸನ್ನಕುಮಾರ್ ನಾಯಕತ್ವದ ತಂಡ ಭಾರಿ ಬಹುಮತ ಪಡೆದಿದೆ.

ಅಧ್ಯಕ್ಷರು : ಎಸ್.ಪ್ರಸನ್ನಕುಮಾರ್, ಉಪಾಧ್ಯಕ್ಷರು : ಎಂ.ಎನ್. ಶ್ರೀನಿವಾಸ್, ಬಸಪ್ಪ ಹಸ್ಕಿಯವರ್, ಪ್ರಧಾನ ಕಾರ್ಯದರ್ಶಿ: ಎಸ್.ಸಿ.ಹನುಮಂತಪ್ಪ, ಜಂಟಿ ಕಾರ್ಯದರ್ಶಿ: ಕರೀಂ ಸಾಬ್ ದೊಡ್ಡಮನಿ, ಖಜಾಂಚಿ : ಉಮಾಪತಿ.

ಬಿ.ಪಿ.ಎಲ್ ಕಾರ್ಡಿಗೆ ಒತ್ತಾಯಿಸಿ ಕಾರ್ಮಿಕರ ಹೋರಾಟ

ಕೊಡಗು ಜಿಲ್ಲೆ, ಸೋಮವಾರಪೇಟೆ ತಾಲ್ಲೂಕು, ಚೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಈರಳ ಮುಡಿಗ್ರಾಮ ಚೇರಳ ಶ್ರೀಮಂಗಲ ಗ್ರಾಮ ಹಾಗೂ ಮಲಗೋಡು ಗ್ರಾಮದ ವ್ಯಾಪ್ತಿಯಲ್ಲಿ ಒಟ್ಟು ಸುಮಾರು, 1,800 ಕುಟುಂಬಗಳು ವಾಸಿಸುತ್ತಿದ್ದು, ಹೆಚ್ಚಿನವರು ತೋಟ ಕಾರ್ಮಿಕರು ಮತ್ತು ಇನ್ನಿತರ ಕೆಲಸ ಮಾಡಿಕೊಂಡು ದಿನ ದೂಡುತ್ತಿರುವ ಬಡವರು.

ಕಾಫಿ ಬೆಲೆ ಕುಸಿತದಿಂದಾಗಿ ಕಾರ್ಮಿಕರಿಗೆ ಈಗ ವಾರದಲ್ಲಿ ಮೂರು-ನಾಲ್ಕು ದಿನ ಮಾತ್ರ ಕೆಲಸ ಸಿಗುತ್ತಿದ್ದು, ದಿನನಿತ್ಯದ ಕೂಳಿಗಾಗಿ ಬವಣೆ ಪಡಬೇಕಾದ ಪರಿಸ್ಥಿತಿ ಇದೆ. ಅವರೆಲ್ಲರೂ ಸರ್ಕಾರದ ಪಡಿತರದಲ್ಲಿ ಸಿಗುವ ವಸ್ತುಗಳನ್ನೇ ಅವಲಂಬಿಸಿರುತ್ತಾರೆ.

ಆದರೆ ಇತ್ತೀಚೆಗೆ ಹೊಸ ಆರ್ಥಿಕ ನೀತಿಯ ಭಾಗವಾಗಿ ಸರ್ಕಾರ, ಪಡಿತರ ಸಾಮಗ್ರಿಗಳಾದ ಅಕ್ಕಿ, ಗೋಧಿ, ಸಕ್ಕರೆ ಇತ್ಯಾದಿಗಳನ್ನು ಕಡಿತ ಗೊಳಿಸಿದ್ದು, ಹಲವು ಕುಟುಂಬಗಳು ಬಿ.ಪಿ.ಎಲ್ ಕಾರ್ಡ್‌ನಿಂದ ವಂಚಿತವಾಗಿದೆ.

ಚೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೇವಲ 337 ಕುಟುಂಬಗಳಿಗೆ ಮಾತ್ರ ಬಿ.ಪಿ.ಎಲ್ ಕಾರ್ಡ್ ದೊರಕಿದೆ.

ಈ ಅನ್ಯಾಯದ ವಿರುದ್ಧ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ (ಸಿಐಟಿಯು) ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ನೇತೃತ್ವದಲ್ಲಿ ಇತ್ತೀಚೆಗೆ ಅಂದಾಜು 500 ಜನರ ಬೃಹತ್ ಮೆರವಣಿಗೆ ನಡೆಸಿ ಚೆಟ್ಟಳ್ಳಿ ಗ್ರಾಮ ಪಂಚಾಯತಿ ಕಛೇರಿ ಮುಂದೆ ಧರಣಿ ನಡೆಸಿದರು.

ಧರಣಿಯನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೊಡಗು ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಪೀಟರ್ ಲೋಬೋರವರು ಉದ್ಘಾಟಿಸಿದರು.

ಕಾರ್ಮಿಕರು, ಮಹಿಳೆಯರೂ, ಭಾಗವಹಿಸಿದ ಚಳುವಳಿಗಾರರ ಪ್ರತಿಭಟನೆಯ ತೀವ್ರತೆಯನ್ನು ಮನಗಂಡು ಆಹಾರ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ತ್ವರಿತವಾಗಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರೂ ಕೂಡಾ ಧರಣಿಕಾರರು ಒಪ್ಪದೇ ಸತ್ಯಾಗ್ರಹವನ್ನು ಮುಂದುವರಿಸುವುದಾಗಿ ಪಟ್ಟು ಹಿಡಿದರು.

ಕೊನೆಗೆ ಮಂಡಲ ಪಂಚಾಯಿತಿ ಕಾರ್ಯದರ್ಶಿ ಯವರು ದೂರವಾಣಿಯ ಮೂಲಕ ತಿಳಿಸಿದಾಗ ಜಿಲ್ಲಾ ಕೇಂದ್ರವಾದ ಮಡಿಕೇರಿಯಿಂದ ಉಪ ವಿಭಾಗಾಧಿಕಾರಿ ಯವರು ಮತ್ತು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಧಾವಿಸಿಬಂದರು. ಅವರು ಸ್ಥಳದಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ತಕ್ಷಣವೇ ಚೆಟ್ಟಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಎಲ್ಲಾ ಬಡ ಕುಟುಂಬಗಳ ಸರ್ವೆ ನಡೆಸಿ ಬಿ.ಪಿ.ಎಲ್ ಕಾರ್ಡ್‌ಗಳನ್ನು ವಿತರಿಸಬೇಕೆಂದು ಆದೇಶಿಸಿದರು.

ಈ ಆದೇಶವನ್ನು ಈಡೇರಿಸದಿದ್ದಲ್ಲಿ ಮುಂದೆ ಇನ್ನೂ ತೀವ್ರವಾದ ಚಳುವಳಿಯನ್ನು ನಡೆಸಲಾಗುವುದೆಂಬ ಷರತ್ತಿನೊಂದಿಗೆ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಲಾಯಿತು. ಈ ಹೋರಾಟವು ಸ್ಥಳೀಯ ಗ್ರಾಮಸ್ಥರಿಗೆ ಬಡವರಿಗೆ ಮತ್ತು ಕಾರ್ಮಿಕರಿಗೆ ಹೊಸ ಉತ್ಸಾಹವನ್ನು ನೀಡಿದೆ.

ಈ ಹೋರಾಟದ ನಾಯಕತ್ವವನ್ನು ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ವೀರಸ್ವಾಮಿ, ಭರತ್ ಮುಂತಾದವರು ವಹಿಸಿದ್ದರು.

ಪಕ್ಷದ ಕಛೇರಿಗೆ ಭೂಮಿ ನೀಡಿದ ಸಹೋದರರು

ಶ್ರಮಿಕ ಚಳುವಳಿಗೆ, ಕಮ್ಯುನಿಸ್ಟ್ ಪಕ್ಷಕ್ಕಾಗಿ ತ್ಯಾಗ ಬಲಿದಾನಗಳ ಜೊತೆಗೆ, ಹಣ, ಆಸ್ತಿ ದಾನ ನೀಡುವ ಪರಂಪರೆ ನಿರಂತರವಾಗಿ ನಡೆದುಬಂದಿದೆ. ಅಂತಹ ಮತ್ತೊಂದು ನಿದರ್ಶನಕ್ಕೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯ ಸಂಗಾತಿಗಳಾದ ಜಯಪ್ಪ ಪೂಜಾರಿ ಮತ್ತು ಪೂಜಾರಿ ಗಿರಿಯಪ್ಪ ಸೇರ್ಪಡೆಯಾಗಿದ್ದಾರೆ.

ಜಾಲಹಳ್ಳಿ ಒಂದು ಹೋಬಳಿ ಕೇಂದ್ರ ಮತ್ತು ವಾಣಿಜ್ಯ ಕೇಂದ್ರವೂ ಹೌದು. ಇಲ್ಲಿ ಈಚಿನ



ಜಯಪ್ಪ ಗಿರಿಯಪ್ಪ

ದಿನಗಳಲ್ಲಿ ಸಾಮೂಹಿಕ ಸಂಘಟನೆ ಮತ್ತು ಸಿಪಿಐ (ಎಂ) ಪಕ್ಷದ ಚಟುವಟಿಕೆಗಳು ನಿರಂತರವಾಗಿ ಹೆಚ್ಚುತ್ತಾ, ಪಕ್ಷಕ್ಕೆ ಕಾರ್ಯಾಲಯವೊಂದರ ಅವಶ್ಯಕತೆ ಮನಗಂಡ ಈ ಸಂಗಾತಿಗಳು ಬಸ್‌ಸ್ಟಾಂಡಿನ ಬಳಿಯ ಆಯಕಟ್ಟಿನಲ್ಲಿದ್ದ ಬೆಲೆಬಾಳುವ (18x10ಅಡಿ) ನಿವೇಶನವನ್ನು ದೇಣಿಗೆಯಾಗಿ ನೀಡಿದ್ದಾರೆ. ಈ ಸಂಗಾತಿಗಳನ್ನು ಸಿಪಿಐ(ಎಂ) 8ನೇ ಜಿಲ್ಲಾ ಸಮ್ಮೇಳನ ಅಭಿನಂದಿಸಿದೆ.

ಸಂಗಾತಿ ಜಯಪ್ಪ ಪೂಜಾರಿ ಯುವಜನ ಚಳುವಳಿ ಮೂಲಕ ಪಕ್ಷಕ್ಕೆ ಸೇರ್ಪಡೆಯಾಗಿ ಕಳೆದ 5 ವರ್ಷಗಳಿಂದಲೂ ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. ಜೊತೆಗೆ ಡಿವೈಎಫ್ಐ ಸಂಘಟನೆಯ ಸಕ್ರಿಯ ಕಾರ್ಯಕರ್ತರಾಗಿದ್ದು ಯುವಜನರ ನಡುವೆ ಅರಿವು ಮತ್ತು ಹೋರಾಟ ರೂಪಿಸಲು ಶ್ರಮಿಸುತ್ತಿದ್ದಾರೆ.

ಸಂಗಾತಿ ಗಿರಿಯಪ್ಪ ವಿದ್ಯಾರ್ಥಿ ಚಳುವಳಿ ಮೂಲಕ ಪಕ್ಷಕ್ಕೆ ಬಂದವರು. ಅವರು ಪ್ರಸ್ತುತ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾಗಿ ತೀರ ಕೆಳಮಟ್ಟದ ಜೀವನ ನಡೆಸುತ್ತಿದ್ದ ಹಮಾಲಿಗಳನ್ನು ಸಂಘಟಿಸುವ ಮೂಲಕ ಕಾರ್ಮಿಕ ಚಳುವಳಿಗೂ ತೊಡಗಿಸಿಕೊಂಡಿರುವ ಗಿರಿಯಪ್ಪ. ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ನೌಕರರ ಸಂಘಟಿಸುವಲ್ಲಿ ಶ್ರಮಿಸುತ್ತಿದ್ದಾರೆ. ಅವರು ಐಕ್ಯರಂಗ ಪತ್ರಿಕೆಯ ಬಗ್ಗೆಯೂ ವಿಶೇಷ ಕಾಳಜಿ ವಹಿಸಿ ಆ ಪ್ರದೇಶದಲ್ಲಿ ಪತ್ರಿಕೆಯ ಪ್ರಸಾರ ಹೆಚ್ಚಲು ಶ್ರಮಿಸುತ್ತಿದ್ದಾರೆ. ಜನತೆಯ ಚಳುವಳಿಗೆ ಇಂತಹ ಕೊಡುಗೆಗಳು ಹೆಚ್ಚಾಗಲಿ ಎಂದು ಸಿಪಿಐ(ಎಂ) ತಾಲ್ಲೂಕು ಸಮಿತಿ ಹಾರೈಸಿದೆ.

ಸಿಪಿಐ(ಎಂ) ಮಹಾಧಿವೇಶನ ಕುರಿತು.....

ಪುಟ 10 ರಿಂದ

ಬೃಹತ್ ಹೋರಾಟಗಳೆಡೆಗೆ

ಈ ಸನ್ನಿವೇಶದಲ್ಲಿ ನಮ್ಮ ಹೋರಾಟವನ್ನು ನಡೆಸಿ ಮುನ್ನಡೆಯಬೇಕಿದೆ. ಪ್ರಸ್ತುತ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಪರಿಸ್ಥಿತಿ ಸವಾಲುಗಳಿಂದ ಕೂಡಿರುವಾಗಲೇ ಪ್ರಜಾಸತ್ತಾತ್ಮಕ ಮುನ್ನಡೆಯ ಅವಕಾಶಗಳಿಂದಲೂ ಕೂಡಿದೆ. ಉದಾ: ಪೇಟೆಂಟ್ ಕಾನೂನಿಗೆ ಇತ್ತೀಚೆಗೆ ತರಲಾದ ತಿದ್ದುಪಡಿಗಳು ಕೇವಲ ಭಾರತದ ಜನತೆಯ ಮೇಲಲ್ಲದೇ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಹಾಗೂ ಮುಂದುವರೆದ ರಾಷ್ಟ್ರಗಳ ಕಾರ್ಮಿಕ ವರ್ಗದ ಮೇಲೆಯು ದೊಡ್ಡ ಹೊರೆಯನ್ನು ಹೊರಿಸಲಿದೆ. ಇದು ವಿಶ್ವವ್ಯಾಪಾರ ಸಂಘಟನೆಯ ಹಿತಾಸಕ್ತಿಗೆ ಅನುಗುಣವಾಗಿ ಜೀವರಕ್ಷಕ ಔಷಧಿಗಳ ಇತರೆ ಔಷಧಿಗಳು, ಬಿತ್ತನೆ ಬೀಜ ಮತ್ತಿತರೆ ಬೆಲೆಗಳನ್ನು ಗಗನಕ್ಕೇರಿಸಲಿದೆ. ಹಾಗೂ ತೃತೀಯ ಜಗತ್ತಿನ ರಾಷ್ಟ್ರಗಳ ಕೈಗಾರಿಕೆಗಳಿಗೆ ಹಾನಿ ಉಂಟು ಮಾಡುತ್ತಾ ಇತರೆ ಗಂಭೀರ ಪರಿಣಾಮಗಳನ್ನು ಬೀರಲಿದೆ. ಇಂಥಹ ಸನ್ನಿವೇಶದಲ್ಲಿ ನಮ್ಮ ದೇಶ ಹಾಗೂ ಇತರೆಡೆಗಳಲ್ಲಿಯೂ ತೀವ್ರ ಪ್ರತಿಕ್ರಿಯೆ ಉಂಟಾಗಲಿದೆ. ಜನತೆಯ ಹೋರಾಟಕ್ಕೆ ಅನಾರೋಗ್ಯಕರ ದಿಕ್ಕನ್ನು ನೀಡುವ ಪ್ರತಿಗಾಮಿ ಶಕ್ತಿಗಳು ಹಾಗೂ ಪ್ರಚಾರ ಪ್ರಿಯಶಕ್ತಿಗಳು ಜನತೆಯಲ್ಲಿನ ಈ ಅಸಮಾದಾನವನ್ನು ದುರುಪಯೋಗ ಪಡಿಸಿಕೊಳ್ಳಬಹುದು.

ಆ ರೀತಿಯಾಗಲು ನಾವು ಬಿಡಲು ಸಾಧ್ಯವೆ? ವಸ್ತವದಲ್ಲಿ ಈ ಹೋರಾಟಗಳನ್ನು ಉನ್ನತ ಹಂತಕ್ಕೆ ಕೊಂಡೊಯ್ದು ಅವುಗಳನ್ನು ದೊಡ್ಡ ಹೋರಾಟಗಳನ್ನಾಗಿ ರೂಪಿಸಲು ಜನತೆಯನ್ನು ಅಣಿನೇರಿಸಲು ನಾವು ಕರ್ತವ್ಯ ಬದ್ಧರಾಗಿದ್ದೇವೆ. ವಾಸ್ತವಿಕವಾಗಿ ನಮ್ಮ ಹೋರಾಟಗಳಿಗೆ ಪರಿಸ್ಥಿತಿಯು ಪೂರಕವಾಗಿದ್ದು, ಮುನ್ನಡೆಗೆ ಸಹಕಾರಿಯಾಗಿದೆ, ಅದೇ ಸಂದರ್ಭದಲ್ಲಿ ನಾವು ನಮ್ಮಲ್ಲಿನ ಸಂಪನ್ಮೂಲವನ್ನು ಗಮನದಲ್ಲಿರಿಸಿ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ದರಾಗಬೇಕಿದೆ. ನಮ್ಮೆಲ್ಲ ಸಂಪನ್ಮೂಲವನ್ನು ಬಳಸಿ ಮಧ್ಯ ಪ್ರವೇಶಿಸಿ ಕೋಮುವಾದಿ ಹಾಗೂ ಪ್ರತಿಗಾಮಿ ಶಕ್ತಿಗಳು ಎಲ್.ಪಿ.ಜಿ. ನೀತಿಗಳಿಂದಾಗಿ ಜನತೆಯಲ್ಲಿ ಉಂಟಾಗುವ ಅಸಮಾಧಾನದ ದುರ್ಲಾಭ ಪಡೆಯದಂತೆ ನೋಡಿಕೊಳ್ಳ ಬೇಕಿದೆ.

ಯಾವುದೇ ಲೆಕ್ಕದಲ್ಲಿಯು ಹೋರಾಟವು ಸುಲಭವಾದುದಲ್ಲ. ವಿಛಿದ್ರಕಾರಕ ಅಂಶಗಳಾದ ಕೋಮುವಾದ ಮತ್ತು ಜಾತಿವಾದದ ನಡುವೆಯೆ ಸಾಮ್ರಾಜ್ಯಶಾಹಿ ಜಾಗತಿಕರಣದ ಈ ಯುಗದಲ್ಲಿ ಮಾಧ್ಯಮವು ಸಹ ತೀವ್ರ ತರವಾಗಿ ಕ್ರಿಯಾಶೀಲವಾಗಿದೆ ಮತ್ತು ಬಲಿಷ್ಠವಾಗಿದೆ. ದೇಶೀಯ ಹಾಗೂ ವಿದೇಶಿ ಗೊತ್ತೆದಾರಿ ಬಂಡವಾಳವು ಎಲ್‌ಪಿಜಿ ನೀತಿಗಳಿಂದ ಲಾಭ ಪಡೆದಿರುವ ಕಾರಣ ಬಂಡವಾಳಶಾಹಿ ಸಾಮ್ರಾಜ್ಯಶಾಹಿ ಮಾಧ್ಯಮವು ಈ ನೀತಿಗಳು ಜನತೆಯ ಹಿತಾಸಕ್ತಿಗಳಿಗಾಗಿವೆ ಎಂದು ನಂಬಿಸಲು ಸರ್ವ ಪ್ರಯತ್ನ ನಡೆಸಿವೆ. 'ನಿಮ್ಮ ಮುಕ್ತಿಗಾಗಿ ನಿಮ್ಮನ್ನು ನೇಣು ಹಾಕುತ್ತೇನೆ' ಎಂಬ ಪ್ರಖ್ಯಾತ ಮಾತಿನಂತೆ ಈ ಪ್ರಯತ್ನ ನಡೆದಿದೆ. ಈ ಸವಾಲನ್ನು ನಿರಂತರ ರಾಜಕೀಯ ಹಾಗೂ ಸೈದ್ಧಾಂತಿಕ ಶಿಕ್ಷಣದ ಮೂಲಕವೇ ಎದುರಿಸಲು ಸಾಧ್ಯ. ಹೋರಾಟವೆಂಬ ಶಿಕ್ಷಣವು ಜನತೆಯನ್ನು ಇದಕ್ಕೆ ಸಜ್ಜುಗೊಳಿಸುವುದು. ನಿಸ್ಸಂದೇಹವಾಗಿ ಮಾಧ್ಯಮವು ಇಂದು ಪ್ರಬಲ ಪಾತ್ರ ವಹಿಸುತ್ತಿದೆ. ಆದರೆ ಅದರ ಶಕ್ತಿಯನ್ನು ನಾವು ಉತ್ಪ್ರೇಕ್ಷಿಸಲು ಬಾರದು. ಮಾಧ್ಯಮವು ಅಷ್ಟು ಪ್ರಬಲವಾಗಿದ್ದಲ್ಲಿ ಬಿಜೆಪಿಯು ಚುನಾವಣೆಯಲ್ಲಿ ಸೋಲುತ್ತಿರಲಿಲ್ಲ ಎಂಬುದನ್ನು ಗಮನಿಸಬೇಕು.

ಈ ಸನ್ನಿವೇಶದಲ್ಲಿ ಸಿಪಿಐ(ಎಂ) ತನ್ನ 18ನೇ ಮಹಾಧಿವೇಶನಕ್ಕೆ ಮುನ್ನಡೆದಿದೆ. ಅದರಲ್ಲಿ ಅಂಗೀಕರಿಸಲಾಗುವ ತಾಂತ್ರಿಕ ನಿಲುಮೆಯು ನಮ್ಮ ಪಕ್ಷವನ್ನು ಮುಂದಿನ ಮಹಾಧಿವೇಶನದವರೆಗೆ ಮಾರ್ಗದರ್ಶಿಸಲಿದೆ. ಸಿಪಿಐ(ಎಂ) ಕೇಂದ್ರ ಸಮಿತಿಯು ಬಿಡುಗಡೆ ಮಾಡಿರುವ ಕರಡು ರಾಜಕೀಯ ವರದಿಯು ಪ್ರಸ್ತುತ ಪರಿಸ್ಥಿತಿಯ ಸಂಪೂರ್ಣ ಪರಿಶೀಲನೆಯನ್ನು ನಡೆಸಿ ಮುಂಬರುವ ದಿನಗಳಿಗೆ ನಮ್ಮ ಕರ್ತವ್ಯಗಳನ್ನು ನಿರ್ದಿಷ್ಟಗೊಳಿಸಿದೆ. ಈ ದಸ್ತಾವೇಜನ್ನು ಎಚ್ಚರಿಕೆಯಿಂದ ಅಭ್ಯಸಿಸಿ ಸಂಪೂರ್ಣವಾಗಿ ಚರ್ಚಿಸುವ ಮೂಲಕ ಪಕ್ಷದ ಹಾಗೂ ಸಾಮೂಹಿಕ ಸಂಘಟನೆಗಳ ಕೇಡರ್‌ಗಳು ಇಂದಿನ ಪರಿಸ್ಥಿತಿ ಹಾಗೂ ಅವಶ್ಯಕತೆಗಳನ್ನು ಗ್ರಹಿಸುವಂತಾಗಬೇಕು. ವಿಶ್ವವನ್ನು ಅಭ್ಯಸಿಸಲು ಮಾತ್ರ ಇದು ಅಗತ್ಯವಾಗಿಲ್ಲ. ಅದನ್ನು ಬದಲಿಸಲು ಇದು ಅಗತ್ಯವಾಗಿದೆ. ಇದು ನಮ್ಮ ಕರ್ತವ್ಯವಾಗಿದೆ.

ಹಿಂದಿನ ಎಲ್ಲಾ ವಿಕ್ರಮಗಳನ್ನು ಮೀರಿ ವಿಶ್ವ ಸಾಮಾಜಿಕ ವೇದಿಕೆಯ 5ನೇ ಅವತರಣಿಕೆ, ಜಗದಗಲ ಜಿಗಿಯಲು ಸಿದ್ಧವಾಗಿದೆ. ಕಳೆದ ವರ್ಷ ಮುಂಬಯಿಯಲ್ಲಿ ನಡೆದ 4ನೇ ಮಹಾಮೇಳದ ನಂತರ ತನ್ನ ತವರೂರಾದ ಪೋರ್ಟ್ ಅಲೆಗ್ರ(ಬ್ರೆಜಿಲ್) ಗೆ ಮರಳಿದ WSF ಜನವರಿ ಕೊನೆಯ ವಾರದಲ್ಲಿ ಜರುಗಿತು. ಹಲವು ವಿಷಯಗಳ ಬಗ್ಗೆ ಜಾಗತಿಕ ಸಮ್ಮೇಳನಗಳನ್ನು ನಡೆಸಲಿದೆ. ನಾಲ್ಕು ಖಂಡಗಳಲ್ಲಿ - ಅಮೆರಿಕಾ, ಆಫ್ರಿಕಾ, ಯುರೋಪು, ಏಶ್ಯಾಗಳಲ್ಲಿ - ಏಕಕಾಲದಲ್ಲಿ ವೇದಿಕೆ ನಡೆಯಲಿದೆ. 2007 ರಲ್ಲಿ ಆಫ್ರಿಕಾದಲ್ಲಿ ನಡೆಯಲಿದೆ. 'ಸಾಮ್ರಾಜ್ಯಶಾಹಿ ಅಜೇಯವಲ್ಲ' ನಾವು ಬಂಡವಾಳಶಾಹಿಯನ್ನು ಮೀರಿ ನಿಲ್ಲಬೇಕು' ಎಂದು ಗುಡುಗಿದ ವೆನೆಜುವೆಲಾದ ಅಧ್ಯಕ್ಷ ಚವೇಝರ ಮಾತುಗಳಿಂದ ಕೊನೆಗೊಂಡ WSF - 5, ಶೋಷಿತ ಜನತೆಯಲ್ಲಿ ಇನ್ನೊಮ್ಮೆ 'ಹಸಿವು ಬಡತನ ಇಲ್ಲದ ಇನ್ನೊಂದು ಜಗತ್ತು ಸಾಧ್ಯ' ಎಂಬ ಭರವಸೆ ಮೂಡಿಸಿದೆ. 5ನೇ ಮಹಾಮೇಳದ ಒಂದು ಚಿತ್ರಣ.

ಪೋರ್ಟ್ ಅಲೆಗ್ರೆಯಲ್ಲಿ 5ನೇ WSF ಮಹಾಧಿವೇಶನ

ಜಗದಗಲ ಜಿಗಿಯಲಿರುವ ವಿಶ್ವ ಸಾಮಾಜಿಕ ವೇದಿಕೆ

ವಿಕ್ರಮಗಳನ್ನು ಮೀರಿದ 5ನೇ ಮಹಾಧಿವೇಶ

5ನೇ WSF ನ ಮಹಾಧಿವೇಶನ ಎಲ್ಲಾ ಹಳೆಯ ವಿಕ್ರಮಗಳನ್ನು ಮುರಿಯಿತು. ಉದ್ಘಾಟನಾ ರ್‍ಯಾಲಿಯಲ್ಲಿ ಜನ ಎಂದಿಗಿಂತಲೂ ಹೆಚ್ಚಿಗಿದ್ದರು. ಕೆಲವಜ ಅಂದಾಜಿನ ಪ್ರಕಾರ ಎರಡು ಲಕ್ಷದವರೆಗೆ ಇದ್ದರು. ಈ ಬಾರಿ 5700 ಸಂಘಟನೆಗಳು, ಚಳುವಳಿಗಳು ಮಹಾಧಿವೇಶನದಲ್ಲಿ ಬಾಗವಹಿಸಿದ್ದವು. ಒಟ್ಟು ಎರಡು ಸಾವಿರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. 16 ಭಾಷೆಗಳಲ್ಲಿ ಮಾತನಾಡುವವರಿಗೆ ಭಾಷಾಂತರಕ್ಕೆ ವ್ಯವಸ್ಥೆ ಮಾಡಲಾಗಿತ್ತು. 100 ಸಂಗೀತಗೋಷ್ಟಿಗಳು, 41 ನಾಟಕಗಳು, 13 ನೃತ್ಯ ಪ್ರದರ್ಶನ, 85 ಕಲಾ ಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು.


ಮುಕ್ತ ವೇದಿಕೆಯು? ಸಾಮ್ರಾಜ್ಯಶಾಹಿ-ವಿರೋಧಿ ಐಕ್ಯರಂಗವೇ?

ಮಹಾಮೇಳದ ಉದ್ದಕ್ಕೂ ಈ ಬಾರಿ ಬಹುಚರ್ಚಿತ ವಿಷಯ - WSF ನ ಸ್ವರೂಪದ ಬಗ್ಗೆ. WSF ಆರಂಭವಾಗಿದ್ದು ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಎಲ್ಲಾ ಚಳುವಳಿಗೆ ಮುಕ್ತ ವೇದಿಕೆಯಾಗಿ. WSF ತಾನಾಗಿ ಯಾವುದೇ ನಿಲುವುಗಳನ್ನು ತೆಗೆದುಕೊಳ್ಳುವುದಿಲ್ಲ. ಕಾರ್ಯಕ್ರಮ ಹಾಕಿಕೊಳ್ಳುವುದಿಲ್ಲ. ಜಾಗತೀಕರಣದ ಹಲವು ಆಯಾಮಗಳ ಬಗ್ಗೆ ವೇದಿಕೆಯನ್ನು ಬಳಸಿ ಸಂಘಟನೆಗಳು ಜಂಟಿ ನಿಲುವು ರೂಪಿಸಬಹುದು. ಕಾರ್ಯಕ್ರಮ ಹಾಕಿಕೊಳ್ಳಬಹುದು. ಮುಕ್ತ ವೇದಿಕೆಯ ಸ್ವರೂಪ WSFದೊಡ್ಡದಾಗಿ ಬೆಳೆಯಲು, ಜಗತ್ತಿನ ಎಲ್ಲಾ ಜಾಗತೀ ಕರಣ-ವಿರೋಧಿ ಚಳುವಳಿಗಳು ಸಂಘಟನೆಗಳು ಒಂದು ಕಡೆ ನೆರೆಯಲು ಸಾಧ್ಯವಾಗಿದೆ. ಈಗಿನ WSF ನ ಬೆಳವಣಿಗೆಯ ಹಂತದಲ್ಲಿ ಅದು ಒಂದು ಜಾಗತಿಕ ಸಂಘಟನೆಯಾಗಬೇಕು. ನಿಲುವುಗಳನ್ನು ತೆಗೆದುಕೊಳ್ಳಬೇಕು. ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದು ಮಾತ್ರ WSF ನ್ನು ಮುನ್ನಡೆಸಬಲ್ಲದು. ಎಲ್ಲಾ ಚಳುವಳಿಗಳು, ಸಂಘಟನೆಗಳು ಸಾಮಾನ್ಯವಾಗಿ ಒಪ್ಪುವ ಹಲವು ಇಂತಹ ವಿಷಯಗಳಲ್ಲಿ (ಯುದ್ಧ, ಶಾಂತಿ, WTO ಸಾಲಮನ್ನಾ, ಪರಿಸರ ಇತ್ಯಾದಿ) ಇದರಿಂದ ತೀವ್ರ ಮುನ್ನಡೆ ಸಾಧಿಸಬಹುದು. ಇದು ಜಾಗತಿಕ ಚಳುವಳಿಗೆ ಅಗತ್ಯ - ಎಂಬ ವಾದ ಬಲವಾಗಿ ಮೂಡಿಬಂತು. WSF ನ ಅಂತರ್ರಾಷ್ಟ್ರೀಯ ಸಂಘಟನಾ ಸಮಿತಿಯ ಬಹುಪಾಲು ಸದಸ್ಯರು, ಮತ್ತಿತರ ಪ್ರಮುಖ ಬುದ್ಧಿಜೀವಿಗಳು WSF ನಲ್ಲೇ ಬಿಡುಗಡೆ ಮಾಡಿದ '19 ರ ಒಮ್ಮತ'ದ ದಸ್ತಾವೇಜು, 12 ಅಂಶಗಳ ಕಾರ್ಯಕ್ರಮವನ್ನು ಪಟ್ಟಿ ಮಾಡಿದೆ. ಈ 12 ವಿಷಯಗಳ ಮೇಲೆ WSF ನಿಲುವು ತೆಗೆದುಕೊಳ್ಳಬೇಕು. ಕಾರ್ಯಕ್ರಮ ಹಾಕಿಕೊಳ್ಳಬೇಕು. ಜಾಗತಿಕ ಕಾರ್ಯಾಚರಣೆಗೆ ಪ್ರವೃತ್ತವಾಗಬೇಕು ಎಂದು ಅವರು ವಾದಿಸಿದ್ದರು. ಇದು WSF ನ ಮೂಲಭೂತ ಸ್ವರೂಪವನ್ನು ಬದಲಾಯಿಸಿ, ಅನೈಕ್ಯತೆಗೆ ಕಾರಣವಾಗುತ್ತದೆ. WSF ಗೆ ಸಂಘಟನಾ ಸ್ವರೂಪ ಕೊಡುವುದಾದರೆ ಅದು ಇಡೀ ಜನತೆಯ ಚಳುವಳಿಯ ಪ್ರತಿನಿಧಿತ್ವ ಸರಿಯಾಗಿ ಮಾಡುತ್ತಿಲ್ಲ. ಇಂದು ಯುರೋಪು, ಅಮೆರಿಕಗಳ ಉತ್ತಮ ಧನ ಸಹಾಯ - ಅನುದಾನ ಇರುವ NGO ಗಳು (ಅವುಗಳ ನಿಜವಾದ ಬಲಕ್ಕಿಂತ) ಹೆಚ್ಚಿನ ಪ್ರಾತಿನಿಧ್ಯ ಹೊಂದಿವೆ. ಜಾಗತೀಕರಣದ ವಿರುದ್ಧ ಚಳುವಳಿ ನಡೆಸಿರುವ ದೊಡ್ಡ ರಾಜಕೀಯ - ಸಾಮಾಜಿಕ ಸಂಘಟನೆಗಳು ಹಣಕಾಸಿನ ಮತ್ತಿತರ ಸಮಸ್ಯೆಗಳಿಂದಾಗಿ ದೊಡ್ಡ ರೀತಿಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಮುಂಬಯಿಯಲ್ಲಿ ನಡೆದ 4ನೇ ಮಹಾಧಿವೇಶನದ ನಂತರ ಪರಿಸ್ಥಿತಿ ಸುಧಾರಿಸಿದೆ. ಈ ದೊಡ್ಡ ಎಡ-ಪ್ರಗತಿಪರ ರಾಜಕೀಯ - ಸಾಮೂಹಿಕ ಸಂಘಟನೆಗಳು ದೊಡ್ಡ ರೀತಿಯಲ್ಲಿ ಭಾಗವಹಿಸಲು ಸಾಧ್ಯವಾಗದೆ, WSF ನಿಲುವು - ಕಾರ್ಯಕ್ರಮ ಹಮ್ಮಿಕೊಳ್ಳುವ ಹಂತಕ್ಕೆ ಹೋಗುವುದು ಬೇಡ - ಎಂಬುದು ಇನ್ನೂ ಕೆಲವರ ಅಭಿಪ್ರಾಯ.

ಇರಾಕ್ ಮೇಲೆ ಅಮೆರಿಕಾದ ಮಿಲಿಟರಿ ಧಾಳಿ ನಿಲ್ಲಿಸಲು ಆಗಲಿಲ್ಲ. ಇನ್ನೂ ಮುಂದುವರೆಯುತ್ತಿರುವ ಇರಾಕ್ ಅತಿಕ್ರಮಣ, ಇತರ ಆಕ್ರಾಮಕ ಕ್ರಮಗಳನ್ನು ನಿಲ್ಲಿಸಲು ಸಾಧ್ಯವಾಗುತ್ತಿಲ್ಲ. WTO ನ ಅಟಾಟೋಪ ಹಾಗೆ ಮುಂದುವರೆದಿದೆ. ಇಂತಹ ಸಂದರ್ಭದಲ್ಲಿ ನೇರ ಕಾರ್ಯಾಚರಣೆ, ಸ್ಪಷ್ಟ ಕಾರ್ಯಕ್ರಮಕ್ಕೆ ಮಹಾಮೇಳದಲ್ಲಿ ಬಾರಿ ಒತ್ತಡ ಬಂತು. ಇಲ್ಲದಿದ್ದರೆ WSF ಬರಿಯ ಮಾತಿನ ಮಂಟಪ ಆಗಿ ಉಳಿಯುತ್ತದೆ. ಅದು ಅಪ್ರಸ್ತುತವಾಗುತ್ತಾ ಹೋಗುತ್ತದೆ ಎಂಬ ಆತಂಕ ವ್ಯಕ್ತವಾಯಿತು.

ಇಬ್ಬರು ಅಧ್ಯಕ್ಷರುಗಳ ಕಥೆ

5ನೇ WSF ಮಹಾಮೇಳದಲ್ಲಿ ಇಬ್ಬರು ಅಧ್ಯಕ್ಷರುಗಳು ಭಾಗವಹಿಸಿದರು. ಅವರ ಭಾಗವಹಿಸುವಿಕೆ, ನಿಲುವುಗಳಲ್ಲಿ ವ್ಯತ್ಯಾಸ ಎಲ್ಲರ ಗಮನ ಸೆಳೆಯಿತು. 3ನೇ ಮಹಾಮೇಳದಲ್ಲಿ ದೊಡ್ಡ 'ಹೀರೋ' ಆಗಿದ್ದ ಬ್ರೆಜಿಲ್ ಅಧ್ಯಕ್ಷ ಲುಲಾ ಈ ಬಾರಿ ಆ ಸ್ಥಾನ ಕಳೆದುಕೊಂಡಿದ್ದರು. ಬ್ರೆಜಿಲ್‌ನಲ್ಲಿ ಅಧ್ಯಕ್ಷರಾಗಿ ಎರಡು ವರ್ಷಗಳ ನಂತರ ಜನ-ಪರ ಎನ್ನಬಹುದಾದ ಪ್ರಮುಖ ಕಾರ್ಯಕ್ರಮ ಹಾಕಿಕೊಳ್ಳಲಿಲ್ಲ. ಟ್ರೇಡ್ ಯೂನಿಯನ್ ಹಕ್ಕುಗಳ, ಇತರ ಕೆಲವು ಹಕ್ಕುಗಳ ಮೊಟಕು - ಇಂತಹ ದಾಳಿಗಳು ಲುಲಾ ಅಧ್ಯಕ್ಷತೆಯಲ್ಲಿ ಮುಂದುವರೆದಿವೆ. ಇಂತಹ ಕ್ರಮಗಳನ್ನು ವಿರೋಧಿಸುವ 'ವರ್ಕರ್ಸ್ ಪಾರ್ಟಿ' ಪಾರ್ಲಿಮೆಂಟು ಸದಸ್ಯರನ್ನು ಹೊರದಬ್ಬಲಾಗಿತ್ತು. ಅವರು ಹೊಸ ಪಕ್ಷ ರಚಿಸಿದ್ದಾರೆ. ಆ ಹೊಸ ಪಕ್ಷದ ಬೆಂಬಲಿಗರು ಉದ್ಘಾಟನಾ ರ್‍ಯಾಲಿಯಲ್ಲೂ, ಲುಲಾ ಭಾಗವಹಿಸಿದ ಬಹಿರಂಗ ಸಭೆಯಲ್ಲಿ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು. ಇತರ ಹಲವು ಬ್ರೆಜಿಲ್‌ನ ಚಳು



ವಳಿಗಳು ಲುಲಾರಿಂದ ನಿರಾಶೆ ಹೊಂದಿದ್ದರೂ, ಅವನ್ನು ಮಹಾಮೇಳದಲ್ಲಿ ವ್ಯಕ್ತಪಡಿಸುವುದನ್ನು ವಿರೋಧಿಸಿದರು. ಲುಲಾ ವಿಶ್ವ ಸಾಮಾಜಿಕ ವೇದಿಕೆ, ವಿಶ್ವ ಆರ್ಥಿಕ ವೇದಿಕೆ (ಅದೇ ಸಮಯದಲ್ಲಿ ದಾವೋಸ್‌ನಲ್ಲಿ ನಡೆಯುವ) - ಎರಡರಲ್ಲೂ ಭಾಗವಹಿಸಿದರು. ಅದರ ಬಗೆಗೂ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ವೆನೆಜುಲಾ ಅಧ್ಯಕ್ಷ ಈ ಬಾರಿಯ ಮಹಾಮೇಳದ 'ಹೀರೋ' ಆಗಿದ್ದರು. WSF ನ ಸಮಯದಲ್ಲೇ ಅವರು ಘೋಷಿಸಿದ ಹಲವು ಹೊಸ ಕ್ರಮಗಳಿಗೆ ಭಾರಿ ಬೆಂಬಲ ವ್ಯಕ್ತವಾಯಿತು. WSF ನಲ್ಲದೆ, ಹಲವು ಕಡೆ ಬ್ರೆಜಿಲ್ (ಅಲ್ಲಿನ ಪ್ರಮುಖ ಭೂಹೀನರ ಚಳುವಳಿ ಕಚೇರಿ ಸೇರಿದಂತೆ)ನ ಹಲವು ಬಡವರ, ಕಾರ್ಮಿಕರ ಪ್ರದೇಶಗಳಿಗೆ ಭೇಟಿ ಇತ್ತರು. ಅವರಿಗೆ ಭಾರಿ ಜನಸ್ಪಂದನ ಸಿಕ್ಕಿದೆ. ಮಹಾಮೇಳದಲ್ಲಿ ಭರವಸೆ, ಆತ್ಮವಿಶ್ವಾಸ, ದೃಢತೆ ತರುವಲ್ಲಿ ಸಹಾಯಕವಾದರು.

ಮಹಾಮೇಳದ ಮುಂದಿನ ಕಾರ್ಯಕ್ರಮಗಳು

WSF ಜಗತ್ತಿನಲ್ಲಿ ವರ್ಷಕ್ಕೆ ಒಂದೇ ಮಹಾಮೇಳ ನಡೆಸುವ ಬದಲು, ಬೇರೆ ರೀತಿಯ ಕಾರ್ಯಕ್ರಮ ಹಾಕಿಕೊಂಡಿದೆ. 12 ವಿಷಯಗಳ ಬಗ್ಗೆ ವಿವರವಾದ ಮಹಾಮೇಳಗಳನ್ನು (ಉದಾ: ಯುದ್ಧ-ಶಾತಿ, WTO - ಬಡದೇಶಗಳ ಸಾಲ..) ಜಗತ್ತಿನ ಬೇರೆ ಬೇರೆ ಕಡೆಗೆ ಸಂಘಟಿಸುವುದು, ಮುಂದಿನ ವರ್ಷದ ಮಹಾಮೇಳವನ್ನು ನಾಲ್ಕು ಖಂಡಗಳಲ್ಲಿ (ಅಮೆರಿಕಾ, ಆಫ್ರಿಕಾ, ಏಶ್ಯಾ, ಯುರೋಪು) ಒಂದೇ ಬಾರಿಗೆ ನಡೆಸುವುದು, ಅಮೆರಿಕಾ ಖಂಡದ ಮಹಾಮೇಳವನ್ನು ವೆನೆಜುವೆಲಾದಲ್ಲಿ ನಡೆಸುವುದು - ಈ ಬಗ್ಗೆ ನಿರ್ಧಾರವಾಗಿದೆ. 2007 ರಲ್ಲಿ ಪ್ರಮುಖ ಮಹಾಮೇಳ ಆಫ್ರಿಕಾದಲ್ಲಿ ನಡೆಸುವುದು ಎಂದು ತೀರ್ಮಾನವಾಗಿದೆ. ಈ ನಿರ್ಧಾರಗಳೊಂದಿಗೆ WSF ಜಗದಗಲ ರೆಕ್ಕೆ ಕಟ್ಟಿಕೊಂಡು ಹಾರಲಿದೆ. ಪೋರ್ಟೊ ಅಲೆಗ್ರ/ಬ್ರೆಜಿಲ್‌ಗೆ ಸೀಮಿತವಾಗದೆ, ಇಡೀ ಜಗತ್ತಿನ ವೇದಿಕೆ ಆಗಲಿದೆ. ಇದು ಹಲವು ಹೊಸ ಚಳುವಳಿಗಳನ್ನು ಒಳಗೊಳ್ಳಲು, ಭಾಗವಹಿಸಲು ಅನುವಾದ ಸನ್ನಿವೇಶ ನಿರ್ಮಿಸಲು ಸಾಧ್ಯವಾಗಲಿದೆ. WSF ಚಳುವಳಿ ಬೆಳೆಯಲಿದೆ ಎಂಬ ಭರವಸೆ ಹುಟ್ಟಿಸುವ ಕ್ರಮಗಳು ಇವು.

'ಇನ್ನೊಂದು CNN ಸಾಧ್ಯ'

'ಇನ್ನೊಂದು ಜಗತ್ತು ಸಾಧ್ಯ' ವಾಗಬೇಕಾದರೆ 'ಇನ್ನೊಂದು ಮಾಧ್ಯಮ ಸಾಧ್ಯ'ವಾಗಬೇಕು. ಈ ವ್ಯವಸ್ಥೆ ಆಳುವ ವರ್ಗಗಳು ಪಟ್ಟಭದ್ರ ಹಿತಾಸಕ್ತಿಗಳು ಕಾಪಾಡಿಕೊಂಡು ಬರುತ್ತಿರುವುದು ಮಾಧ್ಯಮಗಳ ಮೇಲಿನ ಕಪಿಮುಷ್ಟಿಯಿಂದ. ಇದಕ್ಕೆ ಬದಲಿ ಹುಡುಕಬೇಕು. ಇದು WSF ನಲ್ಲಿ ಹಿಂದಿನಿಂದಲೂ ವ್ಯಕ್ತವಾಗುತ್ತಿದ್ದ ಆಶಯ. ಈ ಬಾರಿ ಇದ ಮಡುಗಟ್ಟಿ WSF ನಲ್ಲೇ ಮಾಹಿತಿ ಮತ್ತು ಸಂವಹನದ ಬಗ್ಗೆ ಮೊದಲ ಜಾಗತಿಕ ವೇದಿಕೆ ನಡೆಯಿತು. ಇದು ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಚಳುವಳಿಯ ದೃಷ್ಟಿಯಿಂದ ಅತ್ಯಂತ ಮಹತ್ವದ ಬೆಳವಣಿಗೆ. ಈಗಾಗಲೇ ಬಹುರಾಷ್ಟ್ರೀಯ ಕಂಪನಿಗಳು, ಜಾಹೀರಾತು, ಸಾಮ್ರಾಜ್ಯಶಾಹಿ ಸರ್ಕಾರಗಳ ದೈತ್ಯ ಮಾಧ್ಯಮ ಕಂಪನಿಗಳು - ಇವುಗಳ ಹಿಡಿತದಿಂದ ಮುಕ್ತವಾದ ಜನಪರ ಮಾಧ್ಯಮಗಳನ್ನು ನಡೆಸುವ ಬಗ್ಗೆ ಹಲವು ಪ್ರಯತ್ನಗಳು ನಡೆಯುತ್ತಿವೆ. ಅವನ್ನೆಲ್ಲಾ ಕ್ರೋಢೀಕರಿಸಿ ಜಾಗತಿಕ ಮಟ್ಟದಲ್ಲಿ ಜನ-ಪರ ಸ್ವತಂತ್ರ ಮಾಧ್ಯಮಗಳನ್ನು ಸ್ಥಾಪಿಸುವ ಬಗ್ಗೆ ಈ ಹೊಸ ವೇದಿಕೆಯಲ್ಲಿ ತೀವ್ರ ಚರ್ಚೆ ನಡೆಯಿತು. ಅದೇ ಸಮಯದಲ್ಲಿ ವೆನೆಜುವೆಲಾ ಸರ್ಕಾರದ ಪ್ರಯತ್ನದ 'ಟೆಲಿ ಸುರ್' ಎಂಬ ಲ್ಯಾಟಿನ್ ಅಮೆರಿಕಾದಲ್ಲೆಲ್ಲಾ ಪ್ರಸಾರವುಳ್ಳ ಟಿ.ವಿ. ಚಾನಲ್ ಸ್ಥಾಪಿಸುವ ಬಗೆಗಿನ ಉತ್ಸಾಹಕಾರಿ ನಿರ್ಣಯ ಪ್ರಕಟಿಸಲಾಯಿತು. 'ಟೆಲಿ ಸುರ್' ಲ್ಯಾಟಿನ್ ಅಮೆರಿಕಾದ ತಮ್ಮದೇ CNN ಆಗಬೇಕು. ಲ್ಯಾಟಿನ್ ಅಮೆರಿಕಾದ ಇತರ ದೇಶಗಳ ಸುದ್ದಿ, ಸ್ವತಂತ್ರ ವಿಶ್ಲೇಷಣೆಗೆ ನಮ್ಮದೇ ಚಾನಲ್ ಬೇಕು. 'ಟೆಲಿಸುರ್' ಈ ಹಂಬಲ ಪೂರೈಸಲಿದೆ. ಬ್ರೆಜಿಲ್‌ನಲ್ಲೂ ಇಂತಹುದೇ ಪ್ರಯತ್ನ ನಡೆದಿದೆ. ಇದು ಅತ್ಯಂತ ಆಶಾದಾಯಕ ಬೆಳವಣಿಗೆ. ಇನ್ನೊಂದು ಜನಪರ - CNN ಸಾಧ್ಯ ಎಂಬ ಆಶಾಕಿರಣ ಮೂಡಿಸಿದೆ.

'ಇನ್ನೊಂದು ವ್ಯಾಪಾರ ಕೂಟ ಸಾಧ್ಯ'

ವೆನೆಜುವೆಲಾ ಅಧ್ಯಕ್ಷ ಚವೇಝ್ WSF 5ನೇ ಮಹಾಮೇಳದ ಸಮಯದಲ್ಲಿ ಇನ್ನೊಂದು ಆಶಾದಾಯಕ ಪ್ರಕಟಣೆ ಮಾಡಿದರು. ಇದು ಅಮೆರಿಕನ್ ಸಾಮ್ರಾಜ್ಯಶಾಹಿ ಕಟ್ಟಿ ಬೆಳೆಸಿದ FTAA(Free Trade Area of America- ಅಮೆರಿಕಾದ ಮುಕ್ತ ವ್ಯಾಪಾರ ಕೂಟ) ಗೆ ಬದಲಿಯಾಗಿ ಲ್ಯಾಟಿನ್ ಅಮೆರಿಕಾ ತನ್ನದೇ ಆದ ವ್ಯಾಪಾರ ಕೂಟದ ಘೋಷಣೆ ಮಾಡಿದರು. ಇದು ಲ್ಯಾಟಿನ್ ಅಮೆರಿಕಾದ ದೇಶಗಳ ನಡುವೆ ಸಮಾನ ಹಿತಾಸಕ್ತಿ ಆಧಾರದ ಮೇಲೆ ಹೊಸ ವ್ಯಾಪಾರ ಕೂಟದ ಕಲ್ಪನೆ ಆಧಾರದ ಮೇಲೆ ನಡೆಯುವುದು ಎಂದು ಘೋಷಿಸಿದರು. ಇದಕ್ಕೆ ವ್ಯಾಪಕ ಬೆಂಬಲ ದೊರಕಿದೆ.



ಒಂಟಿ.. ಒಬ್ಬಂಟಿ.. ನಾವಲ್ಲ!

ಪೋರ್ಟೊ ಅಲೆಗ್ರೆಯ 5ನೇ ಮಹಾಮೇಳದಿಂದ ಬಂದ ನಂತರ 'ಒಂಟಿ .. ಒಬ್ಬಂಟಿ... ನಾವಲ್ಲ' ಎಂಬ ಬಲವಾದ ಅನಿಸಿಕೆಯ ಗುಂಗು ಇನ್ನೂ ಹೋಗಿಲ್ಲ... 2003 ರ ಉದ್ಘಾಟನಾ ರ್‍ಯಾಲಿ ಬ್ರೆಜಿಲ್ ಅಧ್ಯಕ್ಷ ಲೂಲಾರ ವಿಜಯೋತ್ಸವದಂತಿತ್ತು. ಲುಲಾರ ಪೋಸ್ಟರ್‌ಗಳು ಅವರ 'ಕಾರ್ಮಿಕ ಪಕ್ಷ'ದ ಧ್ವಜಗಳು ರ್‍ಯಾಲಿಗೆ ರಂಗೇರಿಸಿದ್ದವು. ಚೆಗವೆರಾ ಪೋಸ್ಟರ್ಸ್‌ಗಳು, ಪ್ಯಾಲೆಸ್ತೇನಿಯನ್ ಹಸಿರು ಶಾಲುಗಳ ಸಾಗರ ಹರಿದಿತ್ತು. ಈ ಬಾರಿಯೂ ಚೆಗವೆರಾ ಪೋಸ್ಟರ್‌ಗಳು, ಪ್ಯಾಲೆಸ್ತೇನಿಯನ್ ಶಾಲುಗಳ ಸಾಗರವಿತ್ತು. ಆದರೆ ಲುಲಾ ಪೋಸ್ಟರ್‌ಗಳು ಅಷ್ಟಾಗಿ ಕಾಣಲಿಲ್ಲ. ಬದಲಾಗಿ ಲುಲಾ ಸರ್ಕಾರದ ಕೆಲಸದ ಬಗ್ಗೆ ಅತೃಪ್ತಿ ವ್ಯಕ್ತಪಡಿಸುವ ಎತ್ತರದ ಧ್ವನಿಗಳು ಕೇಳಿಬಂದವು. ಲುಲಾ ಭಾವಚಿತ್ರದ ಟೀ ಶರ್ಟ್ ಧರಿಸಿದ ಲುಲಾ ಪಕ್ಷದ ಬೆಂಬಲಿಗರು ಸಾಕಷ್ಟು ಸಂಖ್ಯೆಯಲ್ಲಿದ್ದರು. ಅದರ ಹಿಂದೆ ಬ್ರೆಜಿಲಿಯನ್ ಕಮ್ಯುನಿಸ್ಟ್ ಪಕ್ಷದ ಭಾರಿ ತುಕಡಿ ಸಾಗಿತ್ತು. ದೊಡ್ಡ ಟ್ರಕ್ ಮೇಲಿಂದ ಘೋಷಣೆಗಳು ಮೊಳಗುತ್ತಿದ್ದವು. CUTC (ಬ್ರೆಜಿಲ್‌ನ ಟ್ರೇಡ್ ಯೂನಿಯನ್‌ಗಳ ಕೇಂದ್ರೀಯ ಸಂಘಟನೆ) ನ ಭಾರಿ ಸಂಖ್ಯೆಯ ಯುವಕ- ಯುವತಿಯರು ದೊಡ್ಡ ಸಂಖ್ಯೆಯಲ್ಲಿದ್ದರು. ಬ್ರೆಜಿಲ್‌ನ ಪ್ರಮುಖ ರಾಜಕೀಯ ಶಕ್ತಿಗಳನ್ನು ಪ್ರತಿನಿಧಿಸುವ ಈ ದೊಡ್ಡ ವಿಭಾಗಗಳ ಹಿಂದೆ ಹಲವು ಪ್ರಮುಖ ಚಳುವಳಿಗಳನ್ನು ಯುದ್ಧ- ವಿರೋಧಿ ಬುಶ್ - ವಿರೋಧಿ ಪ್ರತಿಭಟನೆಕಾರರು, WTO- ವಿರೋಧಿಗಳು, ಪರಿಸರವಾದಿಗಳು, ಜಾಗತಿಕ ಸಾಲ ಮನ್ನಾಕ್ಕೆ ಒತ್ತಾಯ ಮಾಡುವವರು, ಬ್ರಿಜಿಲ್‌ನ ಪ್ರಸಿದ್ಧ ಭೂಹೀನರ ಚಳುವಳಿ MST ಕಾರ್ಯಕರ್ತರು, ದಲಿತ ಗುಂಪುಗಳು ಸೇರಿದಂತೆ ಭಾರತದ ದೊಡ್ಡ ತುಕಡಿ - ಪ್ರತಿನಿಧಿಸಿದವರು ನಡೆದರು. ಮೆರವಣಿಗೆ ಹಲವಾರು ರೀತಿಯ ಕಲಾವಿದರು ನೃತ್ಯ, ಬೀದಿ ನಾಟಕ, ಮೂಕ ಪ್ರದರ್ಶನ ಮಾಡುತ್ತಾ ಸಾಗಿದ್ದರು. ಹತ್ತು ಅಡಿ ಎತ್ತರದ 'ಮರಗಾಲು' ಗಳ ಮೇಲೆ ಹಲವಾರು ಕಲಾವಿದರು ಮೆವಣಿಗೆ ಮೆರುಗು ತಂದರು. ಇವಲ್ಲದೆ ಹರೇಕೃಷ್ಣ ಎನ್ನುತ್ತಾ ಕಾವಿಧಾರಿಗಳೂ, ಆನಂದಮಾರ್ಗಿಗಳೂ ಇದ್ದರು. ಉದ್ಘಾಟನಾ ಮೆರವಣಿಗೆ WSF ಅಗಾಧ ವೈವಿಧ್ಯತೆ, ಸಾಮ್ರಾಜ್ಯಶಾಹಿ ಜಾಗತೀಕರಣಕ್ಕೆ ಬದಲಿ ಕಂಡುಕೊಳ್ಳುವ ಛಲ, ಇನ್ನೊಂದು ಜಗತ್ತು ಸಾಧ್ಯವಾಗಿಸುವ ಭರವಸೆಯನ್ನು ಸಮರ್ಥವಾಗಿ ಬಿಂಬಿಸಿತ್ತು. ಲಕ್ಷಕ್ಕೂ ಮೀರಿದ ರ್‍ಯಾಲಿ ಹಿಂದಿನ ಎಲ್ಲಾ ವಿಕ್ರಮಗಳನ್ನು ಮೀರಿತ್ತು.

- ದೆಹಲಿ ಸೈನ್ಸ್ ಫೋರಂನ ಅಮಿತ್ ಸೆನ್ ಗುಪ್ತಾ ವರದಿಯಿಂದ

ಸಿನಿಮಾ

ಕೊಲ್ಲುವುದೆ ಕಾಯಕ! 'ಎನ್‌ಕೌಂಟರ್ ದಯಾನಾಯಕ'

ಎನ್‌ಕೌಂಟರ್, ಎನ್‌ಕೌಂಟರ್ ದಟ್ಟವಾಗಿ ಕೇಳುವಮಾತು. ಕಾನೂನು ಪಾಲನೆಯೆಂದರೆ ಗನ್ ಹಿಡಿದು ಕೊಲ್ಲುವುದು ಎಂದೇ ಪ್ರತಿಬಿಂಬಿಸುವ ಈ ಚಿತ್ರ ಬೆಳೆಸುವ ಮನೋಭಾವ ಅನಾರೋಗ್ಯಕರವಾದುದು.

ಕ್ರಿಮಿನಲ್‌ಗಳ ಅಪರಾಧ ಪ್ರಕರಣ ದೊಡ್ಡದಿರಲಿ, ಚಿಕ್ಕದಿರಲಿ ಅವರನ್ನು ಬಂಧಿಸಿ ಕಾನೂನಿನಡಿ ಶಿಕ್ಷಿಸುವ ಬದಲು ಎನ್‌ಕೌಂಟರ್ ಹೆಸರಲ್ಲಿ ಸುಟ್ಟು ಹಾಕುವುದೆ ಆದ್ಯ ಕರ್ತವ್ಯ ಪಾಲನೆ ಎಂಬುದು ಕಳೆದ ವಾರ ತೆರೆಕಂಡ ಕನ್ನಡದ 'ಎನ್‌ಕೌಂಟರ್ ದಯಾನಾಯಕ' ಚಿತ್ರದ ತಿರುಳು.

ಮುಂಬೈನ ಭೂಗತ ಲೋಕದವರಿಗೆ ಮತ್ತು ರೌಡಿಗಳಿಗೆ ಸಿಂಹಸ್ವಪ್ನ ಎಂದು ಖ್ಯಾತರಾಗಿರುವ ಪೊಲೀಸ್ ಅಧಿಕಾರಿ ಹಾಗೂ ಕರ್ನಾಟಕದವರೇ ಆಗಿರುವ 'ದಯಾನಾಯಕ'ರ ಸಾಹಸದಿಂದ ಸ್ಫೂರ್ತಿ ಪಡೆದಿರುವ ಈ ಚಿತ್ರ ಕೊಲ್ಲುವುದನ್ನೇ ಕಾಯಕ ಮಾಡಿಕೊಂಡಂತಿದೆ.

ಕ್ರೈಂ ವಿಭಾಗದ ಮುಖ್ಯಸ್ಥ ಪ್ರಕಾಶ ಹೆಗಡೆ ಕ್ರಿಮಿನಲ್‌ಗಳ ಒಂದೊಂದೇ ಫೋಟೊ ತೋರಿಸುತ್ತಾ ಹೋಗುತ್ತಾರೆ. ಚಿತ್ರದ ನಾಯಕ ಸಬ್ ಇನ್ಸ್‌ಫೆಕ್ಟರ್ ದಯಾನಾಯಕ್ 'ಎನ್‌ಕೌಂಟರ್' ಮೂಲಕ ಅವರನ್ನು ಮುಗಿಸುತ್ತಾ ಹೋಗುತ್ತಾನೆ. ದುಬೈನಿಂದಲೇ ಮಂಗಳೂರನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ತವಕಿಸುವ ಯೂಸೂಫ್ ಖಲೀಲ್‌ನ ಸಹಚರ ಶವಗಳು ತರಗೆಲೆಗಳ ಹಾಗೆ ಬೀಳುತ್ತಲೇ ಹೋಗುತ್ತವೆ. ಕೊನೆಗೆ ತಾನೊಬ್ಬನೆ ದುಬೈಗೆ ಹೋಗಿ ಖಲೀಲನ ಜೊತೆ ಕಾದಾಡುವುದು ಚಿತ್ರದ ಕ್ಲೈಮಾಕ್ಸ್. ಈ ಮಧ್ಯೆ ಸಮಾಜ ಸೇವೆ, ಮದುವೆ, ಮಮತೆ, ಗೆಳೆತನ, ಹಗೆತನ ಎಲ್ಲವು ಕೂಡಿದೆ.



ಆದರೆ, ಭೂಗತ ಲೋಕದ ಕ್ರಿಮಿನಲ್‌ಗಳ ಅಪರಾಧವೇನು? ಅವರು ಮಂಗಳೂರನ್ನು ಕೇಂದ್ರವನ್ನಾಗಿಸುವ ಉದ್ದೇಶವೇನು? ಮತ್ತು ಅವರನ್ನು ಕಾನೂನಿನಡಿಯಲ್ಲಿ ದಂಡಿಸುವ ಪ್ರಯತ್ನಗಳೇನು ಎಂಬ ವಿವರಣೆ ಚಿತ್ರದಲ್ಲಿಲ್ಲ. ಇದು ಇತ್ತೀಚಿಗೆ ನಡೆದ ಕಾಡುಗಳ್ಳ ವಿರಪ್ಪನ್ ಹಾಗೂ ನಕ್ಸಲ್‌ರ ಎನ್‌ಕೌಂಟರ್‌ಗಳು ಇದೇ ಮಾದರಿಯವೆ? ಎಂಬ ಅನುಮಾನ ಪ್ರೇಕ್ಷಕರಲ್ಲಿ ಮೂಡಿಸುತ್ತವೆ. ಹಾಗೆಯೆ ಕೇವಲ ಎನ್‌ಕೌಂಟರ್‌ಗಳ ಮೂಲಕ ಮಾಫಿಯಾ ಜಗತ್ತನ್ನು, ರೌಡಿಗಳನ್ನು ನಿಯಂತ್ರಿಸಬಹುದೆ? ಎಂಬ ಸಂಶಯ ಸುಳಿಯುತ್ತದೆ. ಒಂದು ಗಮನಾರ್ಹ ಅಂಶವೆಂದರೆ ಇತ್ತೀಚಿಗೆ ಬರುತ್ತಿರುವ ಹೆಚ್ಚಿನ ಚಿತ್ರಗಳು ಭೂಗತ ಲೋಕವನ್ನು - ರೌಡಿಗಳನ್ನು ವೈಭವಿಕರಿಸಿದರೆ ಈ ಚಿತ್ರ ಅದಕ್ಕೆ ತದ್ವಿರುದ್ಧ ಎಂಬುದು. ಹಾಗೆಯೇ ಹೀರೋ ಆರಾಧನೆ ಮನೋಭಾವ ಬೆಳೆಸಿ ವಿಜೃಂಭಿಸುವುದು.

ಇದು ಒಂದು ಮಾಮೂಲಿ ಹೊಡೆದಾಟದ ಚಿತ್ರವಾದರೂ ನಿರೂಪಣೆ ಚೆನ್ನಾಗಿದೆ (ಡಿ.ರಾಜೇಂದ್ರಬಾಬು), ಛಾಯಾಗ್ರಹಣ ಚಿತ್ರಕ್ಕೆ ಪೂರಕವಾಗಿದೆ. ಸಂಭಾಷಣೆ (ರವಿ ಬೆಳೆಗರೆ) ವಿಶೇಷತೆ ಇಲ್ಲ. ನಟನೆಯಲ್ಲಿ ದಯಾನಾಯಕ (ನವನಟ - ಸಚಿನ್ ಸುವರ್ಣ) ಎನ್‌ಕೌಂಟರ್ ಮತ್ತು ಹೊಡೆದಾಟದ ದೃಶ್ಯದಲ್ಲಿ ಗಮನ ಸೆಳೆಯುತ್ತಾರೆ. ನಾಯಕಿಯರು ಬಂದುಹೋಗುವ ಪಾತ್ರಗಳು. ಖಲೀಲ್ ಪಾತ್ರದಾರಿ ಹಿಂದಿಯ ಮಹೇಶ್ ಮಂಜ್ರೇಕರ್ ಪರ್ವಾಗಿಲ್ಲ. ಆದರೆ ಅನಂತನಾಗ್ ಪಾತ್ರ ಮಾಮೂಲಾಗಿದೆ.

ಒಟ್ಟಾರೆ ಇತ್ತೀಚಿಗೆ ಕನ್ನಡ ಚಿತ್ರರಂಗ ಕ್ರಿಯಾಶೀಲತೆ ಕೊರತೆಯಿಂದ ರಿಮೇಕ್ ಚಿತ್ರಗಳಿಗೆ ಜೋತು ಬಿದ್ದಿರುವಾಗ, ಇದು ಒಂದು ಪ್ರಯೋಗಾತ್ಮಕ ಸ್ವಮೇಕ್ ಚಿತ್ರ ಎಂಬುವುದೆ ಇದರ ವಿಶೇಷ! ಇಷ್ಟಕ್ಕೇ ಸಂತೋಷ ಪಡಲಾದೀತೇ? ಒಳ್ಳೇ ತಿರುಳೂ ಬೇಕಲ್ಲ.

ಜಯರಾಮು.ಎಂ

ಜಾಗತೀಕರಣ - ಖಾಸಗೀಕರಣ - ಉದಾರೀಕರಣ - ವಿದ್ಯಾರ್ಥಿ ಶಿಕ್ಷಕ ಸಮುದಾಯದ ಹಕ್ಕುಗಳ ಹರಣ

ಶಿಕ್ಷಣದ ವ್ಯಾಪಾರೀಕರಣ ತೀವ್ರಗೊಂಡು ಶೈಕ್ಷಣಿಕ ಮೂಲಭೂತ ಸೌಕರ್ಯಗಳು ಕುಸಿಯುತ್ತಿರುವಾಗ ವಿದ್ಯಾರ್ಥಿ ಶಿಕ್ಷಣ ಸಮುದಾಯದ ಪ್ರತಿರೋಧವು ತೀವ್ರಗೊಳ್ಳುತ್ತದೆ, ಇಂತಹ ಪ್ರತಿಯೊಂದು ಪ್ರಜಾಸತ್ತಾತ್ಮಕ ಸಂಸ್ಥೆಯು ಶಿಕ್ಷಣ ವಿರೋಧಿ ನೀತಿಯ ವಿರುದ್ಧ ಪ್ರತಿಯೋಧದ ಕೇಂದ್ರವಾಗಿ ರೂಪುಗೊಳ್ಳುತ್ತದೆ ಎಂಬುದು ಆಳುವ ವರ್ಗಗಳಿಗೆ ಆಳುವ ಸರ್ಕಾರಗಳಿಗೆ ಹಾಗೂ ಖಾಸಗೀ ಶಿಕ್ಷಣ ಸಂಸ್ಥೆಗಳ ಮಾಲೀಕರು ಮುಂತಾದ ಸ್ಥಾಪಿತ ಹಿತಾಸಕ್ತ ವರ್ಗಗಳಿಗೆ ಚೆನ್ನಾಗಿ ತಿಳಿದಿದೆ. ಹೀಗಾಗಿಯೇ ವಿದ್ಯಾರ್ಥಿ ಶಿಕ್ಷಕ ಸಮುದಾಯದ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ತೀವ್ರಗೊಂಡಿದೆ.

ಕಳೆದ ಸಮ್ಮೇಳನದ ಹೊತ್ತಿಗೇ ರಾಜ್ಯದಲ್ಲಿ 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯಿದೆ - 2000' ಮೂಲಕ ವಿಶ್ವವಿದ್ಯಾಲಯದ ಸೆನೆಟ್-ಸಿಂಡಿಕೇಟ್‌ಗಳಿಗೆ ವಿದ್ಯಾರ್ಥಿಗಳು - ಪದವೀಧರರು - ಶಿಕ್ಷಕರು ಮುಂತಾದ ವಿಭಾಗಗಳಿಂದ ಇದ್ದ ಚುನಾಯಿತ ಪ್ರಾತಿನಿಧ್ಯವನ್ನು ಕಿತ್ತುಹಾಕಲಾಗಿತ್ತು. ಈ ಸಂಸ್ಥೆಗಳಲ್ಲಿ ಈಗ ಆಳುವ ಪಕ್ಷದ ರಾಜಕಾರಣಿಗಳು - ಮಂತ್ರಿ ಮಹೋದಯರ ಬಾಲಬುಡುಕರಿಗೆ ನಾಮಕರಣದ ಆಧಾರದಲ್ಲಿ ಪ್ರಾತಿನಿಧ್ಯ ಸಿಕ್ಕಿದೆ. ವಿದ್ಯಾರ್ಥಿ ಶಿಕ್ಷಕರ ಚುನಾಯಿತ ಪ್ರಾತಿನಿಧ್ಯ ರದ್ದುಮಾಡುವಾಗ ನೀಡಿದ ಸಮರ್ಥನೆ ಏನೆಂದರೆ ಚುನಾಯಿತ ಪ್ರತಿನಿಧಿಗಳು ಭ್ರಷ್ಟರಾಗಿದ್ದಾರೆ ಎಂಬುದು ಈಗ ನೇಮಕಾತಿ ಹೊಂದಿದ ಸದಸ್ಯರ ಅವಧಿಯಲ್ಲಿ ಭ್ರಷ್ಟಾಚಾರ ಕಡಿಮೆಯಾಗುವ ಬದಲಿಗೆ ತೀವ್ರಗೊಂಡಿದೆ. ಮಾತ್ರವಲ್ಲ ಚುನಾಯಿಸಿದ ಮತದಾರರಿಗೆ ಉತ್ತರ ನೀಡಬೇಕಾದ ಉತ್ತರದಾಯಿತ್ವ ಈ ನಾಮಕರಣ ಸದಸ್ಯರಿಗೆ ಇಲ್ಲವಾದ್ದರಿಂದ ಈ ಪ್ರತಿನಿಧಿಗಳಿಗೆ ಭ್ರಷ್ಟಾಚಾರ ಮತ್ತಷ್ಟು ಸಲೀಸಾಗಿದೆ. ಮುಖ್ಯವಾಗಿ ಆಳುವ ಸರಕಾರಗಳ ಶಿಕ್ಷಣ ವಿರೋಧಿ ನೀತಿಗಳಿಗೆ ತೋರಿಕೆಯ ಪ್ರತಿರೋಧವೂ ಈ ಸಂಸ್ಥೆಗಳಲ್ಲಿ ಈಗ ಉಳಿದಿಲ್ಲವೆಂಬುದು ಈಗ ಸಾಬೀತಾಗುತ್ತಿದೆ.

ಕಾನೂನನ್ನು ಕೈಗೆತ್ತಿಕೊಂಡು ಉಪನ್ಯಾಸಕ ಶ್ರೀಧರ್ ಮೇಲೆ ಹಲ್ಲೆ ನಡೆಸಿದ ಎಬಿವಿಪಿ ಗೂಂಡಾವರ್ತನೆ ಖಂಡಿಸಿ ಎಸ್‌ಎಫ್‌ಐನಿಂದ ಪ್ರತಿಭಟನೆ



ವಿದ್ಯಾರ್ಥಿ ಚಳುವಳಿಯ ದಮನಕ್ಕೆ 'ಮುಚ್ಚಳಿಕೆ' ಎಂಬ ಮರಣಶಾಸನ

ಅಭಿವ್ಯಕ್ತಿ ಸ್ವಾತಂತ್ರ್ಯ - ಶೋಷಣೆಯ ವಿರುದ್ಧದ ಪ್ರತಿಭಟನೆಯ ಹಕ್ಕು - ಸಂಘಟನೆಯ ಹಕ್ಕು - ಇವು ಭಾರತೀಯ ಸಂವಿಧಾನ ಪ್ರತಿಯೊಬ್ಬ ಭಾರತೀಯರಿಗೆ ನೀಡಿರುವ ಮೂಲಭೂತ ಹಕ್ಕು. ಆದರೆ ವಿದ್ಯಾರ್ಥಿ ಚಳುವಳಿಯನ್ನು ಹತ್ತಿಕ್ಕುವ ಸಲುವಾಗಿ ಶಾಲೆ - ಕಾಲೇಜು - ಹಾಸ್ಟೆಲ್‌ಗಳ ಪ್ರವೇಶದ ಸಮಯದಲ್ಲಿ ವಿದ್ಯಾರ್ಥಿಗಳಿಂದ "ನಾನು ಯಾವುದೇ ವಿದ್ಯಾರ್ಥಿ ಸಂಘಟನೆಗೆ ಸದಸ್ಯನಾಗುವುದಿಲ್ಲ, ಯಾವುದೇ ಮುಷ್ಕರದಲ್ಲಿ ಭಾಗವಹಿಸುವುದಿಲ್ಲ" ಎಂಬ ಮುಚ್ಚಳಿಕೆ ಬರೆಸಿಕೊಳ್ಳುವ ಪ್ರವೃತ್ತಿ ಆರಂಭವಾಗಿದೆ. ಸರ್ಕಾರಿ ಮತ್ತು ಖಾಸಗಿ ಎರಡೂ ಸಂಸ್ಥೆಗಳಲ್ಲಿಯೂ ಇಂತಹ ಪ್ರವೃತ್ತಿ ವ್ಯಾಪಕವಾಗಿ ತಲೆ ಎತ್ತಿದೆ. ಹಲವು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಂದ ಖಾಲಿ ಹಾಳೆಗಳಲ್ಲಿ ಸಹಿ ಹಾಕಿಸಿಕೊಂಡು (ಮುಂದೆ ಅಗತ್ಯ ಬಂದಲ್ಲಿ ಹೇಗೆ ಬೇಕಾದರೂ ಅದನ್ನು ಬಳಸಿಕೊಳ್ಳಲು ಸಾಧ್ಯವಾಗುವಂತೆ ಮತ್ತು ವಿದ್ಯಾರ್ಥಿಗಳನ್ನು ಸದಾ ಭೀತಿಯಲ್ಲಿಡಲು ಅನುಕೂಲವಾಗುವಂತೆ) ಬೆದರಿಸುವ ಪ್ರವೃತ್ತಿಯು ಸಾಕಷ್ಟು ವ್ಯಾಪಕವಾಗಿದೆ.

ರಾಜ್ಯದ ಬಹುತೇಕ ಕಾಲೇಜುಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಗಳನ್ನು ರದ್ದುಪಡಿಸಲಾಗಿದೆ. ಹಲವು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘ ಎಂಬುವುದಿದ್ದರೂ ಅದು ಬಹುತೇಕ ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರ್ವಹಿಸುವ ಸಂಸ್ಥೆಯಾಗಿದೆ. ಹೀಗಿದ್ದರೂ ಗಂಭೀರ ಶೈಕ್ಷಣಿಕ ಸಮಸ್ಯೆಗಳಿರುವಾಗ ಇದೇ ವಿದ್ಯಾರ್ಥಿ ಸಂಘದ ಅಧಿಕಾರವನ್ನು ಸಮರ್ಥವಾಗಿ ಬಳಸಿಕೊಳ್ಳುವ ಅವಕಾಶವಿದೆ. ಈ ಬಗೆಗೆ ಚಳುವಳಿ ಗಮನ ನೀಡಬೇಕಿದೆ. ಜೊತೆಗೆ ವಿದ್ಯಾರ್ಥಿ ಶಿಕ್ಷಕ ಸಮುದಾಯವು ಕಳೆದುಕೊಂಡಿರುವ ಹಲವು ಹಕ್ಕುಗಳನ್ನು ಮರಳಿ ಗಳಿಸಲು ಮತ್ತು ಮತ್ತಷ್ಟು ಹೆಚ್ಚು ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಗಳಿಸಲು ಪೂರಕವಾಗಿ ಚಳುವಳಿ ರೂಪಿಸಬೇಕಿದೆ.


ಹುತಾತ್ಮ ಸಂಗಾತಿಗಳಿಗೆ ವೀರ ವಂದನೆ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತಕಮ್ಯುನಿಸ್ಟ್‌ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕರಾಜ್ಯಸಮಿತಿಯ ಪರವಾಗಿ ಮುದ್ರಣಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH